ಅಧ್ಯಕ್ಷರು :— ಮಂಡಿಸಲಾಯಿತು.

(2) ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಪೂರಕ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1)ನೇ ಅನುಚ್ಛೇಧದ ಮೇರೆಗೆ 1998-99ನೇ ಸಾಲಿನ ಪೂರಕ ಅಂದಾಜುಗಳನ್ನು (ಅಂತಿಮ ಕಂತು) ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಮಂಡಿಸಲಾಯಿತು.

ನಿಯಮ 69ರ ಮೇರೆಗೆ ಚರ್ಚೆ

ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ಚರ್ಚೆ ಆಗುವ ಮೊದಲು ಸರ್ಕಾರ ಹೊರಡಿಸಿದ್ದ ಇತ್ತೀಚಿನ ಮೀಸಲಾತಿ ಆದೇಶವನ್ನು ಹಿಂತೆಗೆದುಕೊಳ್ಳುವ ಬಗ್ಗೆ ನಿರ್ಧಾರ ಆಗಬೇಕಿತ್ತು. ಏಕೆಂದರೆ ಬೇರೆ ಇಂಟರೆಸ್ಟೆಡ್ ಪರ್ಸನನ್ಸ್ ಇರುತ್ತಾರೆ, ಅದೆಲ್ಲಕ್ಕಿಂತಲೂ ಇದು ಸ್ವಲ್ಪ ಡೀಪ್ ಆಗಿ ಎಲ್ಲವನ್ನೂ ಯೋಚನೆ ಮಾಡಿ ಮಾಡಬೇಕಾಗುತ್ತದೆ.

ಅಧ್ಯಕ್ಷರು :— ಇವತ್ತು ಸಾಯಂಕಾಲ ಮೀಟಿಂಗ್ ಕರೆಯುತ್ತೇನೆ. ಈ ಮಿಟಿಂಗ್‌ನಲ್ಲಿ ತಾವೇ ಇರುತ್ತೀರಿ, ನಾನು ಏನೂ ಮಾಡುವುದಿಲ್ಲ, ಎಲ್ಲಾ ಪಕ್ಷದ ಮುಖಂಡರುಗಳು, ಸರ್ಕಾರದ ಪ್ರತಿನಿಧಿಗಳು ಇರುತ್ತಾರೆ. ತಾವು ಅಲ್ಲಿ ತೀರ್ಮಾನ ಮಾಡಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಏಕೆಂದರೆ ಹೀಗೆ ಡಿಲೇ ಆಗುತ್ತಾ ಹೋದರೆ ಈ ಅಧಿವೇಶನ ಮುಗಿದ ಮೇಲೆ ಪುನಃ ಅದರ ಪ್ರಾಮುಖ್ಯತೆ ಉಳಿಯುವುದಿಲ್ಲ. ಮತ್ತು ನಾವೆಲ್ಲಾ ಅದರ ಬಗ್ಗೆ ಆಸಕ್ತಿ ತೋರಿಸುತ್ತಿಲ್ಲ ಅಂದರೆ ಪುನಃ ಹೊರಗಡೆ ಗಲಾಟೆ ಆಗುತ್ತದೆ.

ಅಧ್ಯಕ್ಷರು :— ಶ್ರೀ ಡಿ. ಮಂಜುನಾಥ್ ಅವರು ನನಗೆ ಬೆಳಿಗ್ಗೆ ಫೋನ್ ಮಾಡಿದ್ದರು. ಮಾನ್ಯ ಆರೋಗ್ಯ ಮಂತ್ರಿಯವರು ಈಗತಾನೇ ಪತ್ರ ಬರೆದು ಕಳುಹಿಸಿದರು. ನಾನು ಇವತ್ತೇ ಮಧ್ಯಾಹ್ನ ಮೂರೂವರೆಯಿಂದ ನಾಲ್ಕು ಗಂಟೆ ಸಮಯದಲ್ಲಿ ಮೀಟಿಂಗ್ ಫಿಕ್ಸ್ ಮಾಡಿ ತಮಗೆ ಹೇಳಿಕಳುಹಿಸುತ್ತೇನೆ. ಹಾಗೆಯೇ ಮುಖ್ಯಮಂತ್ರಿಗಳಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಉಪ ಮುಖ್ಯಮಂತ್ರಿಗಳು ಕೂಡ ಮೀಟಿಂಗ್‌ನಲ್ಲಿ ಇರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಏಕೆಂದರೆ ಅಡ್ವೋಕೇಟ್ ಜನರಲ್‌ರವರು, ಎಲ್ಲಾ ಸೆಕ್ರೆಟರಿಗಳು, ಆಮೇಲೆ ಅದರಲ್ಲಿ ಆಸಕ್ತಿ ಇರತಕ್ಕಂಥ ಎಲ್ಲಾ ಶಾಸಕರುಗಳು ಆಗಲಿ, ಮಂತ್ರಿಗಳಾಗಲಿ ಅವರೆಲ್ಲ ಬಂದು ಅದನ್ನು ಮಾಡಬೇಕಾಗುತ್ತದೆಯೇ ಹೊರತಾಗಿ, ಅದು ಸೂ-ಮೋಟೊ ಎಂದು ಬಹಳ ಸುಲಭ ಇದೆಯೆಂದು ಹೇಳಿ ನಿರ್ಲಕ್ಷ್ಯ ತಾಳಿದರೆ ಪುನಃ ನಾಳೆ ನಮ್ಮ ಇಡೀ ಸದನದಲ್ಲಿ ರಿಫ್ಲೆಕ್ಷನ್ ಆಗಬಾರದು.

ಅಧ್ಯಕ್ಷರು :— ನನಗೆ ಈಗಾಗಲೇ ಭಯ ಪ್ರಾರಂಭವಾಗಿದೆ. ನಾನು ಇಲ್ಲಿ ಡಿಸ್ಕಷನ್ ಅವಾಯ್ಡ್ ಮಾಡಿದೆ ಎಂದು ಯಾರೋ ಪೇಪರ್‌ನಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅವರು ಏನೋ ಅವರ ಅಭಿಪ್ರಾಯ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಸಬ್ಜೆಕ್ಟ್ ಡಿಸಕಷನ್‌ಗೆ ತೆಗೆದುಕೊಳ್ಳಲಿಲ್ಲ, ಬರೀ ಆದೇಶವನ್ನು ವಿತ್‌ಡ್ರಾ ಮಾಡಬೇಕಾಗಿತ್ತು. ಎಂದು ಅವರು ನಮಗೂ ಹೇಳುತ್ತಾರೆ. ಅದು ಹೇಳುವವರಿಗೆ ಏನು?

ಅಧ್ಯಕ್ಷರು :— ಅವರು ಹಾಗೆ ಹೇಳಿದರೂ ಕೂಡ ನಾವು ಅದನ್ನು ಅಲಕ್ಷಿಸುವ ಹಾಗಿಲ್ಲ. ನಾವು ಅವರು ಹೇಳಿದ್ದನ್ನೂ ಕೂಡ ಗಣನೆಗೆ ತೆಗೆದುಕೊಳ್ಳಬೇಕಲ್ಲವೇ? We cannot be indifferent to those observations also. We must take cognisance of that also. ಇವತ್ತೇ ಮೀಟಿಂಗ್ ಕರೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮಗೆ ಅಲ್ಟಿಮೇಟಲಿ ಬೇಕಾಗಿರುವುದು ರಿಲೀಫ್. ಆ ದೃಷ್ಟಿಯಿಂದ ಮೀಸಲಾತಿ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದೆವು. ಆದರೆ ಹೆಚ್ಚಿಗೆ ಅವಕಾಶ ಮಾಡಿಕೊಡಲಿಲ್ಲ. ಆ ರಿಲೀಫ್ ಸಿಗಲಿಲ್ಲವೆಂದರೆ ಕೊನೆಗೆ ಹೊರಗಿನವರು ಹೇಳಿದಹಾಗೆ ಮತ್ತೆ ಆಗುತ್ತದೆ. Then we will all be victims.

ಅಧ್ಯಕ್ಷರು :— ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸಂಜೆ ನಾಲ್ಕು ಗಂಟೆಗೆ ಸೇರೋಣ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ನಿಯಮ 69ರ ಪ್ರಕಾರ ಮಹಿಳೆಯರ ಸಮಗ್ರ ಚಿಂತನೆ ಬಗ್ಗೆ ಚರ್ಚೆ ಎಂದು ತಾವು ಹೇಳಿದ್ದೀರಿ. ಇದರಲ್ಲಿ ಪುರುಷರು ಭಾಗವಹಿಸಬಹುದಲ್ಲವೇ?

ಅಧ್ಯಕ್ಷರು :— ಅಗತ್ಯವಾಗಿ.

ಶ್ರೀ ವಾಟಾಳ್ ನಾಗರಾಜ್ :— ನಾವೆಲ್ಲಾ ಈ ಚರ್ಚೆಯಲ್ಲಿ ಭಾಗವಹಿಸಬಹುದೆಂದು ನಮ್ಮ ಕೈಯಿಂದ ಸೈನ್ ತೆಗೆದುಕೊಂಡಿದ್ದಾರೆ. ಭಾಗವಹಿಸುವ ಹಾಗಿಲ್ಲ ಎಂದರೆ ನಾವೆಲ್ಲಾ

ಹೊರಗಡೆ ಹೋಗುತ್ತೇವೆ. ತಾವು ಏನು ಹೇಳುತ್ತೀರೋ ಹಾಗೆ ಕೇಳುತ್ತೇವೆ. ಮಹಿಳೆಯರದ್ದು ಆ ತರಹ ಏನಾದರೂ ಮಡಿವಂತಿಕೆ ಆದರೆ ನಮ್ಮದೇನೂ ಅಭ್ಯಂತರವಿಲ್ಲ. ಮಹಿಳೆಯರ ಪರ ನಿಲ್ಲಬೇಕೆಂದು ಹೇಳಿ ನಾವು ಸೈನ್ ಹಾಕಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಶ್ರೀ ವಾಟಾಳ್ ನಾಗರಾಜ್‌ರವರ ಸಹಿಯನ್ನು ಮಾತ್ರ ತೆಗೆದುಕೊಂಡಿದ್ದಾರೆ ಅಂದರೆ ಉಳಿದವರ ಸಪೋರ್ಟ್ ಬೇಕಿಲ್ಲವೇ? ಶ್ರೀ ವಾಟಾಳ್ ನಾಗರಾಜ್‌ರವರು ಒಬ್ಬರು ಮಾತ್ರ ಮಹಿಳೆಯರ ಪರವಾಗಿರುವವರು ಬಾಕಿ ಇರುವವರು ಮಹಿಳೆಯರ ಪರವಾಗಿ ಇಲ್ಲ ಎಂದು ಅರ್ಥವೇ?

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ನಾನು ನೂರಕ್ಕೆ ನೂರು ಮಹಿಳೆಯರ ಪರವಾಗಿ ಇದ್ದೇನೆ. ಅದರಲ್ಲಿ ಅನುಮಾನವೇ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಮ್ಮ ಮೇಲೆ ಯಾರಿಗೂ ಅನುಮಾನ ಬೇಡ. ನಾವು ಏನಾದರೂ ಮಾತನಾಡುವುದಾದರೆ ನಿಮಗೋಸ್ಕರವೇ ಮಾತನಾಡುವುದು. ಇವತ್ತು ನಮ್ಮನ್ನು ತಿದ್ದಿಕೊಳ್ಳಬೇಕಾಗಿರುವುದು ಅಲ್ಲ, ಪುರುಷ ಸಮಾಜ ಯಾವ ರೀತಿಯಾಗಿ ಸ್ತ್ರೀಯನ್ನು ನೋಡುತ್ತದೆ ಎನ್ನುವುದರಿಂದ ನಿಮ್ಮನ್ನು ನಾವು ಹೆಚ್ಚುಕಡಿಮೆ ನೋಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ತಾವು ನಮಗೆ ರಕ್ಷಣೆ ಕೊಡಬೇಕಾಗುತ್ತದೆ ಏಕೆಂದರೆ ಪ್ರಾರಂಭದಲ್ಲಿಯೇ ಇವರು ನಮಗೆ ಭಯಭೀತಿ ಹುಟ್ಟಿಸುತ್ತಿದ್ದಾರೆ. ನಮ್ಮ ಕೈಯಿಂದಲೇ ಸಹಿ ತೆಗೆದುಕೊಂಡು ನಾವು ಶುರು ಮಾಡುವುದು ನಿಮ್ಮ ಮೇಲೆ ಎಂದು ಹೇಳಿ ಪ್ರಾರಂಭ ಮಾಡುತ್ತಿದ್ದಾರೆ. ಈ ತರಹ ಆದರೆ ಮಾನ್ಯ ಅಧ್ಯಕ್ಷರೇ, ನಮ್ಮ ಸಹಾಯಕ್ಕೆ ತಾವು ಬರಬೇಕು. ಇತ್ತೀಚೆಗೆ ನೀವು ಮಹಿಳೆಯರ ಬಗ್ಗೆ ಏಕೆ ಮೌನವಾಗಿರುತ್ತೀರಿ? ತಾವು ಬಹಳ ಉದ್ದುದ್ದ ಭಾಷಣ ಮಾಡುತ್ತಿದ್ದೀರಿ.

ಅಧ್ಯಕ್ಷರು :— ನನಗೆ ಇವತ್ತು ಬೆಳಿಗ್ಗೆ ಯಾರೋ ಒಬ್ಬ ಸ್ನೇಹಿತರು- ಏನ್ರೀ, ಪ್ರತಿ ದಿವಸ ನಿಮ್ಮ ಬಗ್ಗೆ ಏನಾದರೂ ಒಂದು ಪೇಪರ್‌ನಲ್ಲಿ ಸುದ್ದಿ ಇರುತ್ತದೆ. ಇವತ್ತು ಸಿಟ್ಟು ಮಾಡಿಕೊಂಡು ಹೋಗಿದ್ದಾರೆ. ಎಂದು ಇದೆ. ಸುಮ್ಮನೆ ಕುಳಿತುಕೊಂಡು ಬರುವುದಕ್ಕೆ ನಿಮಗೆ ಆಗುವುದಿಲ್ಲವೇ ಎಂದು ಹೇಳಿದರು. ಅದಕ್ಕೆ ನಾನು ಸುಮ್ಮನಿದ್ದೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) :— ಮಾನ್ಯ ಅಧ್ಯಕ್ಷರೆ, ಇವತ್ತು, ಜಾತಿ, ಮತ, ಪಕ್ಷಭೇದ ಬಿಟ್ಟು ಎಲ್ಲರೂ ಸೇರಿಕೊಂಡು ಇವತ್ತಿನ ದಿವಸ ಈ ವಿಧಾನ ಸಭೆಗೆ ಮಾರ್ಗದರ್ಶನ ಮಾಡಬೇಕಾಗಿರತಕ್ಕಂಥ ಸಂದರ್ಭ ಒದಗಿಬಂದಿದೆ. ಮಹಿಳಾ ವಿಮೋಚನಾ ಸಂಸ್ಥೆಯು ಬೆಂಗಳೂರಿನಲ್ಲಿ, ರಾಜ್ಯದಲ್ಲಿ ಮಹಿಳೆಯರ ಮೇಲೆ ಆಗುತ್ತಿರತಕ್ಕಂಥ ಅತ್ಯಾಚಾರ, ವರದಕ್ಷಿಣೆ ಮುಂತಾದವುಗಳಿಂದ ಎಷ್ಟು ಜನ ಹೆಣ್ಣುಮಕ್ಕಳು

ಸಾಯುತ್ತಿದ್ದಾರೆ ಇತ್ಯಾದಿ ಅಂಕಿಗಳನ್ನು ಸಂಗ್ರಹಿಸಿ ತಮಗೆ ಒಂದು ಮನವಿಯನ್ನು ಕೊಟ್ಟು ಮತ್ತು ಇಲ್ಲಿ ಸದರಿ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದಕ್ಕೋಸ್ಕರ ನಾನು ಮೊಟ್ಟಮೊದಲನೆಯದಾಗಿ ಆ ಸಂಘವನ್ನು ಅಭಿನಂದಿಸುತ್ತಿದ್ದೇನೆ. ತಾವು ಮತ್ತು ಮೇಲ್ಮನೆಯ ಸಭಾಪತಿಗಳು, ಈ ಸಭೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಇದರ ವಿಷಯವಾಗಿ ಬಹಳ ಕೂಲಂಕುಷವಾಗಿ ಇವತ್ತು ಚರ್ಚೆಯಾಗಲು ಅವಕಾಶ ಕೊಟ್ಟಿದ್ದಕ್ಕೆ ನಾನು ಕರ್ನಾಟಕದ ಎಲ್ಲಾ ಮಹಿಳೆಯರ ಪರವಾಗಿ ತಮಗೂ ಕೂಡ ಅಭಿನಂದಿಸುತ್ತೇನೆ. 1848ರಲ್ಲಿ ವುಮೆನ್ಸ್ ರೈಟ್ಸ್ ಕನ್‌ವೆನ್‌ಷನ್ಸ್ ಮ್ಯಾನಿಫೆಸ್ಟೋದಲ್ಲಿ ಈ ರೀತಿ ಹೇಳಿದರು.

``The history of mankind is history of repeated injuries and usurpations on the part of man towards woman, having in direct object the establishment of a tyranny over her'.

ಇದನ್ನು ನಾನಲ್ಲ ಹೇಳಿದ್ದುದು. ಆಗ ಈ ಮಾತನ್ನು ಮ್ಯಾನಿಫೆಸ್ಟೋದಲ್ಲಿ ಸೆನೆಟ್‌ಫಾಲ್ಸ್‌ನಲ್ಲಿ ಹೇಳಿದರು. ಇದಾದನಂತರ, ಶ್ರೀ ಜವಾಹರಲಾಲ್ ನೆಹರೂರವರು ಇದೇ ವಿಷಯವನ್ನು ಪ್ರಸ್ತಾಪಿಸುತ್ತಾ, ಒಂದು ಮಾತು ಹೇಳಿದರು, ಏನೆಂದರೆ,

``I am quite sure that our real and basic growth will only come when women have a full chance to play their part in public life. Whenever they have had this chance, they have, as a whole, done well, better, if I may say so, than the average man. Our laws are man-made, our society dominated by man, and so most of us naturally take a very lopsided view of this matter. We cannot be objective, becuase we have grown up in certain grooves of thought and action. But the future of India will probably depend ultimately more upon the woman than the men...

ಇದನ್ನು ನಾನಲ್ಲ ಹೇಳಿದ್ದು. ಶ್ರೀ ಜವಾಹರಲಾಲ್‌ರವರು ಹೇಳಿದ ಮಾತಿದು. ಇವತ್ತು ಇಡೀ ಭಾರತ ದೇಶದಲ್ಲಲ್ಲ, ಇಡೀ ವಿಶ್ವದಲ್ಲಿ ಒಂದು ಟಿರನಿ ಆಗುತ್ತಿದೆ. ಇದರ ಬಗ್ಗೆ ಸುಸಂಸ್ಕೃತರಾದ ನಾವೆಲ್ಲರೂ ಯೋಚಿಸಬೇಕಾಗಿದೆ. ನನಗನ್ನಿಸುತ್ತದೆ, ಇದರ ಬಗ್ಗೆ ಹಲವಾರು ದೇಶಗಳು ಮಾರ್ಗದರ್ಶನ ಮಾಡಿವೆ. ಆಸ್ಟ್ರೇಲಿಯಾ, ಕೆನಡಾ, ಅಮೆರಿಕಾ ದೇಶಗಳಲ್ಲಿ ಇದರ ಬಗ್ಗೆ ದೊಡ್ಡ ಆಂದೋಲನವಾಗಿ, ವಿಚಾರಗಳಾಗಿ, ತೀರ್ಮಾನಗಳನ್ನು ಕೊಟ್ಟು, ಇದರ ಬಗ್ಗೆ ಸೂಕ್ತವಾದ ಕಾನೂನು ತರುವುದಕ್ಕೆ ವ್ಯವಸ್ಥೆ ಮಾಡಿದರು. ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ, ಇದೇ ರೀತಿಯಾದಾಗ, ಅಲ್ಲಿಯೂ ಕೂಡ ಇದೇ ರೀತಿ ಈ ಸಂದರ್ಭದಲ್ಲಿ ಯಾವ ರೀತಿ ನಾವು ತರುತ್ತಿದ್ದೇವೆಯೋ, ಹಾಗೆ ತೀರ್ಮಾನವಾಗಿ

ಅಲ್ಲಿ ರಿಪ್ಪೋರ್ಟ್ಸ್ ಬಂತು. ಆದರೆ, ಕರ್ನಾಟಕದಲ್ಲಿ ಪ್ರಪ್ರಥಮವಾಗಿ ತಾವು ಇವತ್ತಿನ ದಿವಸ ನಮಗೆ ಅವಕಾಶ ಕೊಟ್ಟಿದ್ದೀರಿ. ನಾನಾದರೂ ಕೂಡ ಇದನ್ನು ಶುಭಲಕ್ಷಣವೆಂದು ತಿಳಿದುಕೊಂಡಿದ್ದೇನೆ. 5ನೇ ವರ್ಷವಿದ್ದು, ಅಸೆಂಬ್ಲಿಯ ಅವಧಿ ಮುಗಿಯುತ್ತಾ ಬಂದಿರುವ ಸಂದರ್ಭದಲ್ಲಿ ಈ ಒಂದು ಸಭೆ ಇವತ್ತು ಚಾರಿತ್ರಕವಾದ ತೀರ್ಮಾನವನ್ನು ತೆಗೆದುಕೊಂಡು, ಮಹಿಳೆಯ ಮೇಲಾಗುತ್ತಿರುವ ಆಘಾತ ಮತ್ತು ಅತ್ಯಾಚಾರಗಳನ್ನು ನಿಯಂತ್ರಣ ಮಾಡುವುದರಲ್ಲಿ ಯಾವ್ಯಾವ ಕಾನೂನುಗಳನ್ನು ರೂಪುಗೊಳಿಸಬೇಕು, ಯಾವ್ಯಾವ ಕಾನೂನಿನಲ್ಲಿ ಲೋಪದೋಷಗಳಿವೆ, ಅದನ್ನು ಹೇಗೆ ತಿದ್ದುಪಡಿ ಮಾಡಬೇಕು, ಮಹಿಳೆಯರ ಮೇಲಾಗುತ್ತಿರುವ ಅತ್ಯಾಚಾರಗಳನ್ನು ಹೇಗೆ ನಿಲ್ಲಿಸಬೇಕೆಂಬ ಬಗ್ಗೆ ಸಮಗ್ರವಾಗಿ ಇವತ್ತಿನ ದಿವಸ ಎಲ್ಲಾ ಮಹನೀಯರೂ ಸೇರಿ ಚರ್ಚೆ ಮಾಡಿ, ಮಾರ್ಗದರ್ಶನ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದು ಇಲ್ಲಿ ಚರ್ಚೆಯಾಗುತ್ತಿರುವಾಗ ತಾವು ಈ ಕಡೆ ಗಮನ ಕೊಡಬೇಕು.

ಅಧ್ಯಕ್ಷರು :— ಗಮನ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ಜೊತೆಗೆ ಬಹಳ ವಿಶೇಷವೆಂದರೆ, ಇದಕ್ಕೆ ಶ್ರೀ ಶ್ರೀರಾಮರೆಡ್ಡಿಯವರೂ ಸಹಿ ಹಾಕಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಏಕೆ ನೀವು ಗಮನಕೊಡಬೇಕೆಂದರೆ, ಈ ವಿಚಾರವನ್ನು ಹೇಳುತ್ತಿರುತ್ತೇವೆ, ತಾವು ಗಮನಿಸದಿದ್ದರೆ ಸರಿಯಲ್ಲ. ಬ್ರಹ್ಮಚಾರಿಯಾದ ಶ್ರೀ ರೆಡ್ಡಿಯವರು ಬಹಳ ಪ್ರಾಮುಖ್ಯವಾಗಿ ಇದಕ್ಕೆ ಸಹಿ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) :— ರೆಡ್ಡಿಯವರು ಹೆಂಗಸರೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇಲ್ಲಿ ಚರ್ಚೆ ಪ್ರಸ್ತಾಪ ಮಾಡುವುದಕ್ಕೆ ಹೇಳಿದ್ದೇ ನಾನು.

ಶ್ರೀ ವಾಟಾಳ್ ನಾಗರಾಜ್ :— ತಮಗೆ ಅರ್ಥವಾಯಿತಲ್ಲಾ. ಅವರು ಒಂದು ಹದಕ್ಕೆ ಬಂದಿದ್ದಾರೆ. ಆದ್ದರಿಂದ, ನಾವು ಅವರಿಗೆ ಮದುವೆ ಮಾಡಿಸುವುದಕ್ಕೆ ತೀರ್ಮಾನಿಸಿದ್ದೇವೆ. ಅದಕ್ಕೋಸ್ಕರ, ಬೇರೆ ಮಾತೇ ಇಲ್ಲ.

ಶ್ರೀ ಸಿ. ಬೈರೇಗೌಡ :— ಅವರೇನು ಹೆಂಗಸರೇ?

ಶ್ರೀ ವಾಟಾಳ್ ನಾಗರಾಜ್ :— ಅವರು ಗಂಡಸರೇ ಅದಕ್ಕೇ ಅವರಿಗೆ ಮದುವೆ ಮಾಡಿಸಬೇಕೆಂದು ಹೇಳಿದ್ದುದು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಬೈರೇಗೌಡರೆ, ಈ ರೀತಿ ಹೇಳುತ್ತೀರಲ್ಲಾ, ಅದನ್ನೇ ನಾವು ಪ್ರತಿಭಟಿಸುತ್ತಿರುವುದು. ಹೆಣ್ಣಿಂದ ಮಾತ್ರಕ್ಕೆ, ಕಡಿಮೆಯೇ ಅಥವಾ ಹೆಚ್ಚಿಂದು ಅಲ್ಲ. ಇದನ್ನು ನಾನು ನಿಜವಾಗಲೂ ಪ್ರತಿಭಟಿಸುತ್ತೇನೆ. ನಿಮ್ಮ ಈ ವಿಚಾರ, ಮನೋಭಾವನೆ ನಿಮ್ಮಲ್ಲಿ ಬರಬಾರದು.

ಶ್ರೀ ಸಿ. ಬೈರೇಗೌಡ :— ಆ ದೃಷ್ಟಿಯಿಂದಲ್ಲ, ರೆಡ್ಡಿಯವರಿಗೇ ವಿಶೇಷವಾಗಿ ಹೇಳಿದರಲ್ಲಾ, ಅದಕ್ಕೇ ನಾನು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ :— ನೀವೇಕೆ ಹೆಂಗಸರೆಂದು ಹೇಳುವುದು?

ಶ್ರೀ ಸಿ. ಬೈರೇಗೌಡ :— ನೀವೇ ಹೇಳಿದ್ದಕ್ಕೆ ನನಗೆ ಅನುಮಾನ ಬಂತು.

ಶ್ರೀ ವಾಟಾಳ್ ನಾಗರಾಜ್ :— ಅದರಲ್ಲೇನು ಅನುಮಾನ? ಮಹಿಳೆಯರ ಬಗ್ಗೆ ವ್ಯಂಗ್ಯವಾಗಿ ಮಾತನಾಡುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ :— ಖಂಡಿತ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನ್ನನ್ನು ಪ್ರಸ್ತಾಪ ಮಾಡಿ, ನಿಜವಾಗಿ ವಿಷಯದ ದಿಕ್ಕು ತಪ್ಪಿಸುವುದು ಬೇಡ.

MR. SPEAKER: It is a serious matter..

ಶ್ರೀಮತಿ ಪ್ರಮೀಳಾ ನೇಸರ್ಗಿ :— ನೀವೆಲ್ಲಾ ಇದರ ಬಗ್ಗೆ ಯೋಚಿಸಬೇಕು. ಹಾಸ್ಯವಾಗಿ ತೆಗೆದುಕೊಂಡು ಲಘುವಾಗಿ ಮಾತನಾಡಬಾರದು.

MR. SPEAKER :— ಅವತ್ತು I met the delegation.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಭಾರತದಲ್ಲಿ ಮಹಿಳೆಯರನ್ನು ಯಾವ ರೀತಿ ಚಿತ್ರಣ ಮಾಡುತ್ತಾರೆಂದರೆ, ದೇವಿ ಎನ್ನುತ್ತಾರೆ. ಆ ರೀತಿ ಕರೆದು, ಹೆಸರಿಗೆ ದೇವಿಯಷ್ಟೆ, ಆದರೆ, ಇವತ್ತು ಮನೆಯಲ್ಲಿ ಅವಳ ಪರಿಸ್ಥಿತಿ ಏನಾಗಿದೆಯೆಂಬುದನ್ನು ಯೋಚನೆ ಮಾಡಬೇಕು. ಏನಾಗಿದೆ ಎಂದರೆ ಬ್ಯಾಟರ್ಡ್ ವುಮನ್ ಎನ್ನುವುದಾದರೆ, ವಯಲೆನ್ಸ್ ಏನಾದರೂ ಆಗುವುದಾದರೆ ಏನು ಹೇಳುತ್ತಾರೆಂದರೆ, violence towards woman is due to power and control ಎಂದು ಹೇಳುತ್ತಾರೆ. ಇವತ್ತು ಗಂಡಿಗೆ ಮಹಿಳೆಯರ ಮೇಲೆ ಅಧಿಕಾರ ಮತ್ತು ಹತೋಟಿ ಇರಬೇಕಾಗಿರುವುದು, ಅದು ಅವನ ಕೈ ತಪ್ಪಿ ಹೋದಾಗ, ವಯಲೆನ್ಸ್ ಆಗುತ್ತದೆಂಬುದನ್ನು ನಾವು ಕೇಳಿದ್ದೇವೆ. ಈ ವಯಲೆನ್ಸ್ ಅಥವಾ ಹತೋಟಿ, ಈ ಅಧಿಕಾರ, ಇದನ್ನು ಅಹಂಕಾರವೆಂದು ಹೇಳಬಹುದು, ಅದು ಸ್ವಾಭಿಮಾನಕ್ಕೆ ಧಕ್ಕೆ ಬರುತ್ತದೆಂದು ಹೇಳಬಹುದು, ಈ ಪವರ್ ಮತ್ತು ಕಂಟ್ರೋಲ್ ಏನಿದೆ ಇದನ್ನು ತಪ್ಪಿಸಿ, ಮಹಿಳೆಯರ ಮೇಲಾಗುತ್ತಿರುವ ಅತ್ಯಾಚಾರ ತಪ್ಪಿಸುವುದಕ್ಕೆ ಏನು ಮಾಡಬೇಕೆಂಬುದರ

ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನನ್ನಲ್ಲಿರುವ ಮಾಹಿತಿಯ ಪ್ರಕಾರ ಭಾರತದಲ್ಲಿ on an average rape occurs every 54 minutes, a molestation every 26 minutes, a kidnapping every 23 minutes; and so called dowry death every 42 minutes; The case of female child abuse would perhaps be attributed to growing social and apathy cynicism which have gradually the earlier norms of conmunique and family. ಶರ್ಮರವರು ಸ್ಟಾಟಿಸ್ಟಿಕ್ಸ್ ಕೊಟ್ಟಿದ್ದಾರೆ. ನನಗೆ ದುಃಖವಾಗುವ ವಿಷಯವೆಂದರೆ, ಅದೂ ಕರ್ನಾಟಕದಲ್ಲಲ್ಲ, ವಿಶ್ವದಲ್ಲಿ ಎಲ್ಲೇ ಹೋದರೂ ನೋಡಿರುವುದು, ಮಹಿಳೆಯರ ಮೇಲೆ ಆಗುತ್ತಿರುವುದು ಅನ್ಯಾಯ ಭಾರತ ಮತ್ತು ಕರ್ನಾಟಕದಲ್ಲಿ ಮಾತ್ರವೆಂದು ನಾವಂದುಕೊಂಡಿರುವುದು ತಪ್ಪು. ಕೆನಡಾದಲ್ಲಿ, ಅಮೆರಿಕಾದಲ್ಲಿ, ಆಸ್ಟ್ರೇಲಿಯಾ, ಇಂಗ್ಲೆಂಡ್‌ನಲ್ಲಿ, ಪ್ರತಿಯೊಂದು ದೇಶದಲ್ಲಿಯೂ ಕೂಡ ಮಹಿಳೆಯರು ಇದನ್ನನುಭವಿಸಿಕೊಂಡು ಬರುತ್ತಿದ್ದಾರೆ- ಎನ್ನುವುದು ಅಲ್ಲಿರುವ ಸ್ಟಾಟಿಸ್ಟಿಕ್ಸ್ ಮತ್ತು ರಿಪೋರ್ಟ್ಸ್ ನೋಡಿದಾಗ ನಮಗೆ ತಿಳಿದು ಬರುತ್ತದೆ. ವಕೀಲಳಾಗಿ ನಾನು ನೋಡಿರುವ ಒಂದೆರಡು ದೃಶ್ಯಗಳನ್ನು ತಮ್ಮ ಮುಂದಿಡುವುದಕ್ಕಿಷ್ಟಪಡುತ್ತೇನೆ. ಒಂದು ಕೇಸ್‌ನಲ್ಲಿ ನಾನು ಹೆಸರು ಹೇಳಲು ಬಯಸುವುದಿಲ್ಲ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ಮಹಿಳೆಯಾಗಿದ್ದು, 18 ವರ್ಷದವಳಾಗಿದ್ದು, ಬಹಳ ಬುದ್ಧಿವಂತಳಾಗಿದ್ದು ಅಷ್ಟೇ ಅಲ್ಲ ಬಹಳ ಖರ್ಚು ಮಾಡಿ ಅವಳನ್ನು ಹಣವಂತನೊಬ್ಬನಿಗೆ ಮದುವೆ ಮಾಡಿಕೊಟ್ಟಿದ್ದರು. ಮದುವೆಯಾಗಿ 6 ತಿಂಗಳು ಕೂಡ ಆಗಿರಲಿಲ್ಲ, ಆ ಮಹಿಳೆ ತವರು ಮನೆಗೆ ಬರುತ್ತಿರಲಿಲ್ಲ. ತಂದೆ ತಾಯಿ, ತಮ್ಮ ಮಗಳನ್ನು ಗಂಡನ ಮನೆಯವರು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ಅದಕ್ಕೆ ಇವಳು ತಾಯಿ ಮನೆಗೆ ಬರುವುದಕ್ಕೆ ಇಷ್ಟಪಡುತ್ತಿಲ್ಲವೇನೋ ಎಂದುಕೊಂಡಿದ್ದರು. ಒಂದು ದಿವಸ ರಾತ್ರಿ 11.30ರ ಸಮಯದಲ್ಲಿ ಆ ಹುಡುಗಿ ನನ್ನ ಮನೆ ಬಾಗಿಲು ತಟ್ಟಿದಳು. ಕಾಲಲ್ಲಿ ಚಪ್ಪಲಿ ಕೂಡ ಇರಲಿಲ್ಲ. ಗೌನ್ ಹಾಕಿಕೊಂಡಿದ್ದಳು. ಮೈಯಿಂದ ರಕ್ತ ಹರಿಯುತ್ತಿತ್ತು. ನಾನು ವಿಷಯವೇನೆಂದು ಕೇಳಿದಾಗ, ಅವಳು ಹೇಳಿದ ಚಿತ್ರವನ್ನು ತಮ್ಮ ಮುಂದಿಡುವುದಕ್ಕೆ ಬಯಸುತ್ತೇನೆ. ಅವಳು ಮದುವೆಯಾದ ನಂತರ, ಎಷ್ಟೇ ಹಣ ಕೊಟ್ಟಿದ್ದರೂ, ವರದಕ್ಷಿಣೆ ಸಾಲದೆಂದು ಆಕೆಯ ಹೆಸರಿನಲ್ಲಿದ್ದ ಒಂದು ಮನೆಯನ್ನು ತನ್ನ ಹೆಸರಿಗೆ ಬರೆದುಕೊಡಬೇಕೆಂದು ಮಾವನ ಮನೆಯವರು ಕೇಳಿದರು. ಅದಕ್ಕವಳು ತನ್ನ ತಂದೆತಾಯಿ ಎಷ್ಟೊಂದು ಕಷ್ಟಪಟ್ಟು ಮದುವೆ ಮಾಡಿಕೊಟ್ಟಿದ್ದಾರೆ, ಹಣ ಆಭರಣ ಕೊಟ್ಟಿದ್ದಾರೆ, ಇನ್ನೂ ನೀವು ಹಣ ಕೇಳುವುದು ಸರಿಯಲ್ಲ, ನಾನು ನನ್ನ ತಂದೆತಾಯಿಯನ್ನು ಕೇಳುವುದಿಲ್ಲವೆಂದಾಗ, ಅವಳನ್ನು ಬಚ್ಚಲ ಮನೆಯ ಕಿಟಕಿಯಲ್ಲಿ ಕಾಲಿಗೆ ಸರಪಳಿ ಹಾಕಿ ಕಟ್ಟಿದ್ದರು. ಊಟವನ್ನೂ ಅಲ್ಲಿಗೆ ಕೊಡುತ್ತಿದ್ದರು. ನನಗೆ ಇದನ್ನು ಹೇಳುವಾಗ ಬಹಳ ದುಃಖವಾಗುತ್ತಿದೆ, ಆ ಹುಡುಗಿಗೆ ಅತ್ತೆ, ಮಾವ, ಮೈದುನರೆಲ್ಲರೂ ಸೇರಿ ಏನು ಕಿರುಕುಳ ಕೊಟ್ಟರೆಂದರೆ, ಅವಳು ಅಂಗೈ ತೋರಿಸಿದಳು, ಅದನ್ನು ಬ್ಲೇಡಿನಿಂದ ಕುಯ್ದಿದ್ದರು. ಅತ್ತೆ ಅಥವಾ ಮಾವ ಖಾರದ ಪುಡಿ

ತೆಗೆದುಕೊಂಡು ಬಂದು ರಕ್ತವಾಗಿದ್ದ ಕೈ ಮೇಲೆ ಹಾಕಿದರು. ಅವಳ ಚೀರಾಟ ಕೇಳುವುದಕ್ಕಾಗುತ್ತಿರಲಿಲ್ಲ. ಮಾವ, ಮೈದುನ ಬಂದು ಕೋಳಿಯ ಕತ್ತನ್ನು ಕತ್ತರಿಸಿ, ಆದರ ಬಿಸಿ ರಕ್ತವನ್ನು ಮೈದುನ ಆವಳನ್ನು ಹಿಡಿದುಕೊಂಡು ಬಾಯಿಗೆ ರಕ್ತವನ್ನು ಹಾಕಿ, ಆಸ್ತಿ ತರುತ್ತೀಯೋ, ಇಲ್ಲವೋ ಎಂದು ಕೇಳಿದ. ಆ ಹೆಣ್ಣು ಮಗುವಿಗೆ ತಡೆದು-ಕೊಳ್ಳುವುದಕ್ಕಾಗುತ್ತಿರಲ್ಲಿಲ್ಲ. ಮೈ ತುಂಬಾ ರಕ್ತವಾಗಿತ್ತು. ರಾತ್ರಿ ಸುಮಾರು ಹನ್ನೊಂದು ಗಂಟೆಯಲ್ಲಿ ಬಾತ್‌ರೂಮಿಗೆ ಹೋಗುತ್ತೇನೆಂದು ಹೇಳಿ, ಸರಪಣಿ ಬಿಚ್ಚಿಕೊಂಡು ಮನೆಯವರ ಕಣ್ಣುತಪ್ಪಿಸಿ ರಿಚ್‌ಮಂಡ್ ರೋಡ್‌ನಿಂದ ಇಂದಿರಾನಗರದವರೆಗೆ ಓಡೋಡಿ ನಮ್ಮ ಮನೆಗೆ ಬಂದಳು. ಆ ಪರಿಸ್ಥಿತಿಯಲ್ಲಿ ಅವಳನ್ನು ನೋಡಿದಾಗ ನನಗೆ ಏನು ಅನಿಸಿತು ಎಂದರೆ, ಇವತ್ತಿನ ಪರಿಸ್ಥಿತಿಯಲ್ಲಿ ಮಹಿಳೆ ಹೇಗೆ ಇದ್ದಾಳೆ ಎನ್ನುವುದನ್ನು ಇಲ್ಲಿರುವ ಎಲ್ಲಾ ಮಹನೀಯರು ಅರ್ಥ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಟಿ.ಪಿ. ಕೈಲಾಸಂರವರು ಬಹಳ ಹಿಂದೆ "ತಾಳಿ ಕಟ್ಟುವ ಕೂಲಿ"ನೇ ಎಂದು ಹೇಳಿದ್ದರು. ಅಂದು ಹೇಳಿರತಕ್ಕಂಥ ಮಾತು ಇಂದು ನಡೆಯುತ್ತಿದೆ. ತಾಳಿ ಕಟ್ಟುವುದಕ್ಕೆ ಕೂಲಿ ಕೇಳಿ ಮದುವೆಯಾದ ನಂತರ ಹಣವನ್ನು ತಂದುಕೊಡು ಎಂದು ಕೇಳಿ, ಟೈಪ್‌ರೈಟರ್, ಫ್ರಿಜ್, ರೇಡಿಯೋ, ತೆಗೆದುಕೊಂಡು ಬಾ ಎಂದು ಕೇಳತಕ್ಕಂಥ ಪರಿಸ್ಥಿತಿಯನ್ನು ನಾವಿಂದು ನೋಡುತ್ತಿದ್ದೇವೆ. ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಪ್ರಾಹಿಬಿಷನ್ ಆ್ಯಕ್ಟನ್ನು ನಾವೆಲ್ಲಾ ಸೇರಿ ಅಮೆಂಡ್ ಮಾಡಿದೆವು. ಮದುವೆಯಾದ ಏಳು ವರ್ಷದ ಒಳಗೆ ಈ ರೀತಿ ಏನಾದರೂ ಸತ್ತರೆ, ಅಥವಾ ಅಪಘಾತವಾದರೆ, ಇದರ ಮೇಲೆ ಕ್ರಮಕೈಗೊಳ್ಳಬೇಕು ಎಂದು ಕಾನೂನನ್ನು ತಂದೆವು. ಆದರೆ ಇದು ಯಾವ ಕಾನೂನೂ ಸಹ ಇಂಪ್ಲಿಮೆಂಟ್ ಅಥಾರೀಟಿಸ್, ಪೋಲಿಸ್‌ನವರು ಇದನ್ನು ಸರಿಯಾಗಿ ವ್ಯವಧಾನ ಮಾಡದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿ, ಕಾನೂನು ಕೇವಲ ಪುಸ್ತಕದಲ್ಲಿ ಮಾತ್ರ ಇದೆ ಎಂದು ನಾನು ಬಹಳ ದುಃಖದಿಂದ ಈ ಮಾತನ್ನು ಹೇಳಬೇಕಾಗಿದೆ. ರಾತ್ರಿ ವೇಳೆಯಲ್ಲಿ ನಮ್ಮ ಮನೆಗೆ ಬಂದಂಥ ಆ ಹೆಣ್ಣುಮಗುವಿಗೆ ಸಹಾಯ ಮಾಡುವ ದೃಷ್ಟಿಯಿಂದ, ಅವಳ ಗಂಡ ಮತ್ತು ಮೈದುನನ್ನು ಅರೆಸ್ಟ್ ಮಾಡಿಸುವುದಕ್ಕೆ ಪ್ರಯತ್ನಿಸಿದೆ. ಅರೆಸ್ಟ್ ಮಾಡಿಸಿದ ನಂತರ ಎರಡೂ ಕುಟುಂಬಗಳ ಕಡೆಯಿಂದ ದೊಡ್ಡ ಮನುಷ್ಯರು ನನ್ನ ಹತ್ತಿರ ಬಂದು, ಎರಡು ದೊಡ್ಡ ಮನೆತನಗಳು ಇವರನ್ನು ಕೋರ್ಟ್‌ನಲ್ಲಿ ಅರೆಸ್ಟ್ ಮಾಡಿಸುವುದು ಬೇಡ ಎಂದು ಹೇಳಿ, ರಾಜಿ ಮಾಡಿಸಿಬಿಡಿ ಎಂದು ಹೇಳುವಂತಹ ಪ್ರಸಂಗವನ್ನೂ ಕೂಡ ನಾನು ನೋಡಿದ್ದೇನೆ. ಇದೊಂದು ಸಾಮಾನ್ಯವಾದ ಘಟನೆ ಅಲ್ಲ ಇಂಥ ಸಹಸ್ರಾರು ಘಟನೆಗಳು ಆಗುವುದನ್ನು ನಾವು ನೋಡಿದ್ದೇವೆ. ಮೊನ್ನೆ ತಾನೇ ಬಿಜಾಪುರದಲ್ಲಿ ಜರುಗಿದಂಥ ನಮ್ಮ XXXX ಇತ್ತೀಚಿನ ವರ್ಷಗಳಲ್ಲಿ ಏನಾಯಿತು ಎಂಬುದನ್ನು ಕೂಡ ನೋಡಿದ್ದೇವೆ.

XXXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :— ಮಂತ್ರಿಗಳದ್ದು ವಿಚಾರ ತಮಗೇನೂ ಗೊತ್ತಿಲ್ಲ. ನೀವು ಈ ರೀತಿ ಹೇಳಿದರೆ ಪತ್ರಿಕೆಗಳವರಿಗೆ, ಸಾರ್ವಜನಿಕರಿಗೆ, ಮಂತ್ರಿಗಳ ಮೇಲೆ ಏನು ಅಭಿಪ್ರಾಯ ಬರುತ್ತದೆ? It will give a different meaning. No, it is a natural death, ಅನ್‌ನ್ಯಾಚುರಲ್ ಡೆತ್ ಕೇಸ್‌ನ್ನು ನಾವು ರಿಜಿಸ್ಟರ್ ಮಾಡಿಕೊಂಡಿದ್ದೇವೆ. ವಿಚಾರಣೆ ನಡೆಯುತ್ತಿದೆ. ಈ ರೀತಿ ಇದ್ದಾಗ ಮಂತ್ರಿಗಳ ಮೇಲೆ ಮಾತನಾಡಿದರೆ ಹೇಗೆ? ಈ ರೀತಿಯಾದಂಥ ಉದಾಹರಣೆಗಳನ್ನು ತೆಗೆದುಕೊಳ್ಳಬಾರದು. It should not go on record,

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅನ್‌ನ್ಯಾಚುರಲ್ ಡೆತ್ ಎಂದು ರಿಜಿಸ್ಟರ್ ಮಾಡಿಕೊಂಡಿದ್ದೀರಿ. ಅದನ್ನು ನ್ಯಾಚುರಲ್ ಡೆತ್ ಎಂದು ಕನ್‌ವರ್ಷನ್ ಆಗುತ್ತಿದೆ. ಇದೇ ವಿಷಯವನ್ನು ವಿಮೋಚನಾ ಸಂಸ್ಥೆಯವರು ತಮ್ಮ ಮುಂದೆ ಇಟ್ಟಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ :— xxxx ಇದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯ. that is not the case, that is not the truth. ನೀವು ಬೇಕಾದರೆ ಬೇರೆ ಉದಾಹರಣೆಗಳನ್ನು ತೆಗೆದುಕೊಳ್ಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಟ್ರೂಥ್ ಅಲ್ಲವೆಂದು ನೀವು ಹೇಗೆ ಹೇಳುತ್ತೀರಿ?....

SRI P.G.R. SINDHIA :— It is under investigation, ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ, xxxx ಸತ್ಯಾಂಶ ಏನು ಇದೆಯೋ ನಮಗೆ ಗೊತ್ತಿಲ್ಲ. ವಿಚಾರಣೆ ಮಾಡಿಸುತ್ತಿದ್ದೇವೆ. ಪೋಲಿಸ್ ನವರು ಅನ್ನಾಚುರಲ್ ಡೆತ್ ಎಂದು ಈಗಾಗಲೇ ಕೇಸ್ ರಿಜಿಸ್ಟ್ರು ಮಾಡಿಕೊಂಡಿದ್ದಾರೆ. ಆ ಹುಡುಗಿಯ ಕಡೆಯಿಂದಾಗಲಿ, ತಂದೆ-ತಾಯಿಗಳಿಂದಾಗಲಿ, ಮತ್ತೊಬ್ಬರ ಕಡೆಯಿಂದಾಗಲಿ ಯಾವುದೇ ದೂರು ಬಂದಿಲ್ಲ. ಹೀಗಿರುವಾಗ ಮಾನ್ಯ ಸದಸ್ಯರು, xxxx ಈ ರೀತಿ ಮಾತನಾಡಿದರೆ ಹೇಗೆ? ಬೇರೆ ಉದಾಹರಣೆಗಳನ್ನು ಕೊಡಿ. ನೀವು ಇದುವರೆವಿಗೂ ಏನು ಮಾತನಾಡಿದಿರಿ, ನಾವೆಲ್ಲಾ ಕೇಳಿಸಿಕೊಂಡು ಇಲ್ಲಿ ಕುಳಿತಿದ್ದೇವೆ. ಇಲ್ಲಿಯವರೆಗೆ ರೈಲು ಸರಿಯಾಗಿ ಹಳಿಯ ಮೇಲೆ ಹೋಗುತ್ತಿತ್ತು. ಈಗ ಹಳಿಯ ಮೇಲೆ ಹೋಗದೇ ಬೇರೆ ಕಡೆಗೆ ತಿರುಗುತ್ತಿದೆ. ಇವತ್ತು ಈ ವಿಷಯದ ಬಗ್ಗೆ ಮಾತನಾಡಲು ಸಭಾಧ್ಯಕ್ಷರು ಹಾಗೂ ಸಭಾಪತಿಗಳವರು ಎರಡು ಮನೆಯ ಮಹಿಳಾ ಸದಸ್ಯರ ಜೊತೆಯಲ್ಲಿ ಮಾತನಾಡಿ ಅವಕಾಶ ಕಲ್ಪಿಸಿಕೊಟ್ಟಂಥ ಸಂದರ್ಭದಲ್ಲಿ, ಮಾನ್ಯ ಭೈರೇಗೌಡರು ಹಾಗೂ ವಾಟಾಳ್ ನಾಗರಾಜ್‌ರವರು ಮಧ್ಯೆ ಪ್ರವೇಶಿಸಿದಾಗ ಇದನ್ನು ಲಘುವಾಗಿ ಪರಿಗಣಿಸಬೇಡಿ ಎಂದು ಹೇಳಿದರಲ್ಲದೇ ಬಹಳ ಗಂಭೀರವಾಗಿ ವಿಚಾರ, ಇದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ದೃಷ್ಟಿಯಿಂದ ನನಗೆ ನಿರ್ದಿಷ್ಟವಾಗಿ

---

xxxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಹೇಳಿದ್ದಾರೆ. ಈ ಸಂಬಂಧವಾಗಿ ನಾನು ಮತ್ತು ಉನ್ನತ ಅಧಿಕಾರಿಗಳ ಜೊತೆಯಲ್ಲಿ ಮೂರು ಸಭೆಗಳನ್ನು ಮಾಡಿದ್ದೇನೆ. ಕಾನೂನನ್ನು ಯಾವ ರೀತಿ ಬದಲಾವಣೆ ಮಾಡಿ, ಮಹಿಳೆಯರಿಗೆ ಯಾವ ರೀತಿ ಹೆಚ್ಚಿನ ರಕ್ಷಣೆ ಕೊಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿರುವಾಗ, ನೀವು ಈ ರೀತಿ ರಾಜಕೀಯ ದೃಷ್ಟಿಯಿಂದ ನೋಡಿದರೆ ಹೇಗೆ? ಭಾಷಣ ಮಾಡುವಂತಹ ಸಂದರ್ಭದಲ್ಲಿ ಈ ವಿಚಾರವಾಗಿ, ಪಕ್ಷ, ಗುಂಪು, ಭೇದ, ಮತ್ತೊಂದು ಎಲ್ಲಾ ಬಿಡುತ್ತೇವೆ ಎಂದು ತಾವೇ ಹೇಳಿದಿರಿ. ಈ ರೀತಿ ಮಂತ್ರಿಗಳ ಮೇಲೆ ಹೇಳಿದರೆ, ಅದು ಅವರ ಮೇಲೆ ಯಾವ ಪರಿಣಾಮ ಬೀರುತ್ತದೆ ಎನ್ನುವುದರ ಬಗ್ಗೆ ತಾವು ದಯವಿಟ್ಟು ವಿಚಾರ ಮಾಡಬೇಕು. ಆದ್ದರಿಂದ, ಪರಸ್ಪರ ದೋಷಾರೋಪಣೆ ಮಾಡುವುದು ಬೇಡ. ವಿಷಯದ ಗಂಭೀರತೆಯನ್ನು ಅರಿತು ಅದರ ಬಗ್ಗೆ ತಾವು ಹೇಳಿ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ವೈಯಕ್ತಿಕವಾಗಿ ನೀವು xxxx ಇಲ್ಲಿ ಇಲ್ಲದೇ ಇರುವುದರಿಂದ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. Case is under investigation. ಅವರ ಕೊಲೆಯಾಗಿದೆ ಎಂದು dowry harassment ಅಥವಾ ವರದಕ್ಷಿಣೆ ಕಿರುಕುಳವೆಂದು ಯಾರೂ ಇದುವರೆವಿಗೂ ದೂರನ್ನು ಕೊಟ್ಟಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಾನು ಹೇಳಿದ್ದನ್ನು ಮಾನ್ಯ ಸಚಿವರು, ಅರ್ಥ ಮಾಡಿಕೊಳ್ಳಲಿಲ್ಲ. It is under investigation, ಇನ್‌ವೆಸ್ಟಿಗೇಷನ್ ಆಗತಕ್ಕಂಥದ್ದು...

SRI P.G.R. SINDHYA :— There is not allegation as such which is now made. It is only the Hon. Member who is making an allegation on this floor. Nobody has complained. No complaint we have received.

ಅಧ್ಯಕ್ಷರು :— ನಮ್ಮ ಮುಂದಿರತಕ್ಕಂಥ ವಿಷಯದ ಗಾಂಭೀರತೆಯನ್ನು ಕಾಪಾಡುವ ದೃಷ್ಟಿಯಿಂದ ಬೇರೆ ವಿಷಯ ಪ್ರಸ್ತಾಪಿಸುವುದು ಬೇಡ. ಮಾನ್ಯ ಗೃಹ ಮಂತ್ರಿಗಳ ಹೇಳಿಕೆಯ ಮೇಲೆ ಅವರ ಮನೆಯಲ್ಲಿ ನಡೆದಂಥ ದುರ್ಘಟನೆ ಈ ತರಹದಕ್ಕೆ ಸಂಬಂಧಪಟ್ಟಿದೆಯೋ ಇಲ್ಲವೋ ಎನ್ನುವುದಕ್ಕೆ ನಮ್ಮ ಹತ್ತಿರ ಮಾಹಿತಿ ಇಲ್ಲ. ಈ ಹಂತದಲ್ಲಿ ಅವರ ಹೆಸರಿಗೆ ಕಳಂಕ ಹಚ್ಚುವುದು ಬೇಡ. I remove it from the records. No reference will be made to the Minister's family. Please kindly note it.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಕಳ್ಳನ ಮನಸ್ಸು ಹುಳಹುಳ್ಳಗೆ ಎನ್ನುವ ಒಂದು ಗಾದೆ ಇದೆ. ನಾನೇನಾದರೂ ಇವರು ಮಾಡಿದ್ದಾರೆಂದು ಹೇಳಿದನೇ? ಅಧ್ಯಕ್ಷರೆ, ದಯಮಾಡಿ ಅರ್ಥಮಾಡಿಕೊಳ್ಳಿ....

---

xxxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅಧ್ಯಕ್ಷರೆ, ಇದು ಸರಿಯಲ್ಲ, ಕಳ್ಳನ ಮನಸು ಹುಳಹುಳ್ಳಗೆ ಎಂದರೆ ನನ್ನ ಮನಸ್ಸು ಏಕೆ ಹುಳಹುಳ್ಳಗೆ ಆಗಬೇಕು? There is no `Kalla' here at all,

ಅಧ್ಯಕ್ಷರು :— ಇನ್ನೂ ಅನೇಕ ಅವಕಾಶಗಳು ತಮಗೆ ಸಿಗುತ್ತದೆ. ಅದು ನಿಜವಾಗಲೂ ಯುಡಿಆರ್ ಬಗ್ಗೆ ತನಿಖೆಯಾಗಿ ಅವರು ಅಪರಾಧಿಗಳು ಅಥವಾ ಇದಕ್ಕೆ ಏನಾದರೂ ಸಂಬಂಧವಿದೆ ಎಂದು ತಿಳಿದು ಬಂದರೆ ಮತ್ತೊಂದು ಬಾರಿ ನೀವು ಇಲ್ಲಿ ಚರ್ಚಿಸಬಹುದು. ದಯಮಾಡಿ, ಇವತ್ತು ನಮ್ಮ ಮುಂದಿರುವ ವಿಷಯದ ಬಗ್ಗೆ ಮಾತ್ರ ಮಾತನಾಡಿ...

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಾನು ಏನು ಹೇಳಿದೆ ಎಂದರೆ, ಅನ್‌ನ್ಯಾಚುರಲ್ ಡೆತ್ ರಿಜಿಸ್ಟು ಎಂದು ಇದೆ. ಬೆಂಗಳೂರಿನಲ್ಲಿ 711 ಕೇಸ್‌ಗಳು ರಿಪೋರ್ಟ್ ಆಗಿವೆ. ಈ ಎಲ್ಲಾ ಕೇಸ್‌ಗಳಲ್ಲಿ ಅಸಹಜ ಸಾವು ಎಂದು ರಿಪೋರ್ಟ್ ಮಾಡಿಕೊಳ್ಳುತ್ತಾರೆ. ಈ ಎಲ್ಲಾ ಕೇಸ್‌ಗಳಲ್ಲಿ ಸ್ಟೌವ್‌ಬರ್ಸ್ಟ್ ಆಗುವುದಕ್ಕೆ ಸಾಧ್ಯವೆ? ಇದು ಊಹೆಗೂ ಮೀರಿದ್ದು. ಯಾವ ಕಂಪನಿಯವರು ಈ ಸ್ಟೌವ್‌ಗಳನ್ನು ತಯಾರಿಸಿದವರು? ಈ ರೀತಿ ಸ್ಟೌವ್ ತಯಾರಿಸಿದವರ ಮೇಲೆ ನೆಗ್ಲಿಜೆನ್ಸಿ ಎಂದು ಹೇಳಿ ಏನಾದರೂ ಮೊಕದ್ದಮೆ ಹೂಡಿದ್ದಿರಾ? ಅಥವಾ ಈ ಸ್ಟೌವ್‌ಗಳ ಮಾರಾಟವನ್ನು ಏನಾದರೂ ತಡೆಹಿಡಿದಿದ್ದಿರಾ? ಇದರ ಬಗ್ಗೆ ತಾವು ಏನೂ ಮಾಡಿಲ್ಲ. ಆ ಸ್ಟೌವ್ ಸೀಜ್ ಮಾಡಿದ್ದೀರಾ? ನಿಮ್ಮಲ್ಲಿರತಕ್ಕಂಥ ಅನ್‌ನ್ಯಾಚುರಲ್ ಡೆತ್ ರಿಜಿಸ್ಟು ಏನಿದೆ, ಅದರಲ್ಲಿ ಅಸಹಜ ಸಾವು ಎಂದು ಹೇಳಿ ತಾವು ಕೇಸ್ ರಿಜಿಸ್ಟು ಮಾಡುತ್ತೀರಿ. ಇದಕ್ಕೆ ನಮ್ಮ ಕೂಗು ಏನೆಂದರೆ, ಎಲ್ಲಾ ಅಸಹಜ ಸಾವುಗಳಲ್ಲಿ ಕೂಡ ನ್ಯಾಚುರಲ್ ಡೆತ್ ಇರಬಹುದು ಅಥವಾ ಆತ್ಮಹತ್ಯೆ ಇರಬಹುದು ಅಥವಾ ಬೇರೆ ಯಾರಾದರೂ ಮಾಡಿರಬಹುದು. ತನಿಖೆಯಾಗತಕ್ಕಂಥ ಸಂದರ್ಭದಲ್ಲಿ ಸರಿಯಾಗಿ ತನಿಖೆ ಆಗುತ್ತಿದಿಯೇ ಅಥವಾ ಇಲ್ಲವೇ ಎನ್ನುವುದೇ ನಮ್ಮ ಇವತ್ತಿನ ಪ್ರಶ್ನೆ. ಈ 711 ಕೇಸ್‌ಗಳೂ ಕೂಡ ತಾವು ಸ್ಟೌವ್ ಬರ್ಸ್ಟ್ ಎಂದು ಹೇಳಿದರೆ ಹೇಗೆ? ನಾನೂ ಕೂಡ ವಿಕ್ಟೋರಿಯಾ ಆಸ್ಪತ್ರೆಯನ್ನು ನೋಡಿದ್ದೇನೆ, ಅಲ್ಲಿ ಬರ್ಸ್ಟ್ ವಾರ್ಡ್ ಇದೆ. ಒಂದು ದಿನಕ್ಕೆ ಸುಮಾರು 57 ಮಹಿಳೆಯರ ಬರ್ಸ್ಟ್ ಕೇಸ್‌ಗಳು ತೆಗೆದುಕೊಂಡು ಬರುತ್ತಾರೆ. ನಾನು ನಿಮ್ಮಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ತಾವು ಆ ಸಂದರ್ಭದಲ್ಲಿ ಡೈಯಿಂಗ್ ಡಿಕ್ಲರೇಷನ್ ತೆಗೆದುಕೊಳ್ಳುತ್ತೀರಲ್ಲಾ, ಇದನ್ನು ತಾವು ಸರಿಯಾಗಿ ತೆಗೆದುಕೊಳ್ಳುತ್ತೀರಾ? ಅತ್ತೆ-ಮಾವ-ಮೈದುನ-ಭಾವ ಇವರೆಲ್ಲರನ್ನು ಮುಂದೆ ಇಟ್ಟುಕೊಂಡು ಇವರ ಎದುರುಗಡೆ ಬರ್ನ್ಸ್ ಆಗಿರುವ ಮಹಿಳೆಯಿಂದ ಹೇಳಿಕೆಯನ್ನು ರೆಕಾರ್ಡ್ ಮಾಡಿಕೊಂಡರೆ, ಸಾಯುವ ಅಂಚಿನಲ್ಲಿ ಇರತಕ್ಕಂಥ ಮಹಿಳೆಗೆ ಸತ್ಯ ಹೇಳತಕ್ಕಂಥ ಪರಿಸ್ಥಿತಿ ಒದಗಿಬರುತ್ತದೆಯೇ? ಇದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡಬೇಕು. ಆ ಮಹಿಳೆ ಸತ್ಯ ಹೇಳಬೇಕಾದರೆ ಇವರೆಲ್ಲರನ್ನೂ ದೂರ ಇಟ್ಟು ಹೇಳಿಕೆ ತೆಗೆದುಕೊಳ್ಳಬೇಕು. ಇಂಥ ಸಂದರ್ಭದಲ್ಲಿ ವಿಮೋಚನಾ ಸಂಸ್ಥೆಯ ಇಬ್ಬರು ಮಹಿಳೆಯರು ಅಲ್ಲಿರಬೇಕು ಎಂದು ಡಾಕ್ಟರ್‌ಗಳನ್ನು

ಒಪ್ಪಿಸಿ, ನಾವೆಲ್ಲರೂ ತೀರ್ಮಾನ ಮಾಡಿ ಅಲ್ಲಿ ಸ್ಥಳದಲ್ಲಿ ಇಬ್ಬರು ಮಹಿಳೆಯರು ಇರುವಂತೆ ಏರ್ಪಾಡು ಮಾಡಿದ್ದೇವೆ. ಮೊನ್ನೆ ಅದೇ ಆಸ್ಪತ್ರೆಯಲ್ಲಿ ಈ ರೀತಿ ಸಂದರ್ಭ ಬಂದಾಗ ಅಲ್ಲಿರುವ ಮಹಿಳೆಗೆ ಬೆದರಿಕೆ ಹಾಕುವುದರ ಜೊತೆಗೆ ನೀನು ಆಚೆ ಬಾ ನೋಡಿಕೊಳ್ಳುತ್ತೇವೆ ಎನ್ನುವಂತಹ ಮಾತುಗಳನ್ನು ಹೇಳುತ್ತಾರೆ. ಈ ರೀತಿ ಆದರೆ ನಿಜವಾದ ತನಿಖೆಯಾಗುವುದಕ್ಕೆ ಸಾಧ್ಯವೇ? ಇದರ ಬಗ್ಗೆ ನಾವು ಆಲೋಚನೆ ಮಾಡಬೇಕು. ಪೋಲಿಸ್‌ನವರು ರೆಕಾರ್ಡ್ ಮಾಡುವಂತಹ ಸಂದರ್ಭದಲ್ಲಿ, ಸುಟ್ಟಿರುವ ಮಹಿಳೆ ಸ್ವಂತಿಕೆಯಿಂದ ಹೇಳಿಕೆ ಕೊಡುವಂತಹ ಸಂದರ್ಭದಲ್ಲಿ Doctor must certify that she is capable of giving the statement. ಎಂದು ಜಸ್ಟೀಸ್ ಸಲ್ದಾನ್‌ರವರು ತೀರ್ಮಾನ ಕೊಟ್ಟಿದ್ದಾರೆ. ಡಾಕ್ಟರ್ ಬಂದು ಸರ್ಟಿಫೈ ಮಾಡುವ ಹೊತ್ತಿಗೆ ಅವಳ ಅರ್ಧ ಪ್ರಾಣ ಹೋಗಿರುತ್ತದೆ. ಇದರ ಬಗ್ಗೆ ತಾವು ಏನಾದರೂ ಅಪೀಲ್ ಹಾಕಿದ್ದೀರಾ? ಈ ರೀತಿ ಸಂದರ್ಭದಲ್ಲಿ ವಾರ್ಡ್ ಒಳಗಡೆ ಹೊರಗಡೆಯವರು ಬಾರದ ಹಾಗೆ, ಪೋಲಿಸ್‌ನವರು ರೆಕಾರ್ಡ್ ಮಾಡುವಂತಹ ಸಂದರ್ಭದಲ್ಲಿ ಬೆದರಿಕೆ ಹಾಕಿ ಹೇಳಿಕೆ ತೆಗೆದುಕೊಳ್ಳಬಹುದಲ್ಲವೆ? ಮತ್ತೊಂದು ವಿಚಾರವನ್ನು ತಮ್ಮ ಮುಂದೆ ಹೇಳಬಯಸುತ್ತೇನೆ. ಆಸ್ಪತ್ರೆಗೆ ಯಾವುದಾದರೊಂದು

11.20 ಎ.ಎಂ.

ಆಸ್ಪತ್ರೆಗೆ ಯಾವುದಾದರೊಂದು ಬರ್ನ್ ಕೇಸ್ ಬಂದಾಗ ಮೊದಲು ಕಾನ್‌ಸ್ಟೆಬಲ್ ಮಾಡತಕ್ಕಂಥ ಕೆಲಸ ಏನೆಂದರೆ, ಒಂದು ಬ್ಲ್ಯಾಂಕ್ ಪೇಪರ್ ಮೇಲೆ ಆಕೆಯ ಹೆಬ್ಬೆಟ್ಟು ಗುರ್ತನ್ನು ತೆಗೆದುಕೊಳ್ಳುತ್ತಾರೆ. ಇದನ್ನು ಏಕೆ ತೆಗೆದುಕೊಳ್ಳುತ್ತಾರೆಂದರೆ, ಸ್ಟೇಟ್‌ಮೆಂಟ್ ತೆಗೆದುಕೊಳ್ಳುವುದಕ್ಕೋಸ್ಕರ ಬ್ಲ್ಯಾಂಕ್ ಪೇಪರ್ ತೆಗೆದುಕೊಂಡು ಬಂದು, ಅತ್ತೆ-ಮಾವನನ್ನು ಒಂದು ಕಡೆ ನಿಲ್ಲಿಸಿಕೊಂಡು ನನ್ನ ಹತ್ತಿರ ಬ್ಲ್ಯಾಂಕ್ ಪೇಪರ್ ಇದೆ, ನಿಮ್ಮನ್ನು ಜೈಲಿಗೆ ಕಳುಹಿಸಬೇಕೆಂದರೆ ನಾನು ಏನಾದರೂ ಬರೆದುಕೊಳ್ಳುತ್ತೇನೆಂದು ಹೇಳಿ, ದುಡ್ಡು ಕಿತ್ತುಕೊಳ್ಳುತ್ತಾರೆ. ಅವರು ದುಡ್ಡು ಕೊಟ್ಟರೆ, ಇಲ್ಲಿ ಇವಳು ಆತ್ಮಹತ್ಯೆ ಮಾಡಿಕೊಂಡಿಲ್ಲ, ಸ್ಟೌವ್ ಬರ್ಸ್ಟ್ ಆಗಿ ನಾನು ಸತ್ತನೆಂದು ಬರೆದುಕೊಳ್ಳುವುದು. ಇಂಥ ಸಂದರ್ಭದಲ್ಲಿ ಬ್ಲ್ಯಾಂಕ್ ಪೇಪರ್ ಮೇಲೆ ಸಿಗ್ನೇಚರ್ ತೆಗೆದುಕೊಳ್ಳುವುದಕ್ಕೆ ಇವರಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ? ಈಗ ನಾನು ಹೇಳುವುದೇನೆಂದರೆ, ಇಂಥ ಎಲ್ಲಾ ಕೇಸ್‌ಗಳಲ್ಲಿ ಆಕೆಯ ತಂದೆ-ತಾಯಿಗಳಿಗೆ ತಕ್ಷಣ ಇನ್‌ಫಾರ್ಮೇಶನ್ ಕೊಡತಕ್ಕಂಥ ವ್ಯವಸ್ಥೆ ಆಗಬೇಕು. ಇವತ್ತು ನಾನು ನಿಮಗೆ ಒಂದು ಸಜೆಷನ್ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಅಮೇರಿಕಾದಲ್ಲಿ ಇಂಥ ಕೇಸ್‌ಗಳ ವಿಷಯವನ್ನು ಆದಷ್ಟುಬೇಗ ತಿಳಿಸಲು ಹಾಟ್‌ಲೈನ್ ಓಪನ್ ಮಾಡಿದ್ದಾರೆ. ಹಾಟ್‌ಲೈನ್ ಫೋನ್ ನಂಬರ್ ಎಲ್ಲರ ಹತ್ತಿರ ಇರುತ್ತದೆ. ನಾವು ಇಲ್ಲಿ 100 ನಂಬರ್‌ಗೆ ಫೋನ್ ಮಾಡಿದರೆ ಹೇಗೆ ಪೊಲೀಸ್ ಕಂಟ್ರೋಲ್ ರೂಮ್‌ಗೆ ಮೆಸೇಜ್ ಹೋಗುತ್ತದೆಯೋ ಅದೇ ರೀತಿಯಲ್ಲಿ ಅಲ್ಲಿ ಯಾರುಬೇಕಾದರೂ ಕೂಡ ಹಾಟ್‌ಲೈನ್ ಫೋನ್ ಮಾಡಿ ಎಲ್ಲಾ ವಿಷಯವನ್ನು ತಿಳಿಸಿದಾಗ ತಕ್ಷಣ 10 ನಿಮಿಷ ಆಗುವುದರೊಳಗೆ ಪೊಲೀಸ್‌ನವರು ಸ್ಥಳಕ್ಕೆ

ಬರುತ್ತಾರೆ. ಈ ಕೆಲಸ ನಡೆಯುತ್ತಿರುವಾಗಲೇ ಹಾಟ್‌ಲೈನ್ ಮುಖಾಂತರವೇ ಅವರ ತಂದೆ-ತಾಯಿಗಳಿಗೆ ವಿಷಯವನ್ನು ತಿಳಿಸತಕ್ಕಂಥ ವ್ಯವಸ್ಥೆ ಕೂಡ ಅವರು ಮಾಡುತ್ತಾರೆ. ಈ ಹಾಟ್‌ಲೈನ್ ನಂಬರ್‌ನ್ನು ಪ್ರತಿಯೊಂದು ಮಾಧ್ಯಮಗಳಲ್ಲಿ ಅಂದರೆ, ಟಿ.ವಿ. ಮತ್ತು ನ್ಯೂಸ್ ಪೇಪರ್‌ನಲ್ಲಿ ಪಬ್ಲಿಷ್ ಮಾಡುತ್ತಾರೆ. ಯಾರಾದರೂ ಅವಶ್ಯಕತೆ ಇದ್ದರೆ ತಕ್ಷಣ ಫೋನ್ ಮಾಡಿ ಕೇಳಿ ತಿಳಿದುಕೊಳ್ಳತಕ್ಕಂಥ ವ್ಯವಸ್ಥೆ ಅಲ್ಲಿದೆ. ಇಂಥ ಹಾಟ್‌ಲೈನ್ ವ್ಯವಸ್ಥೆಯನ್ನು ಇಲ್ಲಿಯೂ ಮಾಡಿ ಒಂದು ಫೋನ್ ನಂಬರ್ ಕೊಡಬೇಕಾಗುತ್ತದೆ. ಇಂಥ ಪರಿಸ್ಥಿತಿ ಅಮೇರಿಕಾದಲ್ಲಿ ಬಂದಾಗ 1994ನೇ ಇಸವಿಯಲ್ಲಿ ಒಂದು ಆ್ಯಕ್ಟ್ ಮಾಡತಕ್ಕಂಥ ಸಂದರ್ಭದಲ್ಲಿ ಅವರು ಅಡ್ವೈಸರಿ ಕೌನ್ಸಿಲ್ ಕಮಿಟಿ ಮಾಡಿದರು. ಇದರ ಬಗ್ಗೆ ತೀಕ್ಷ್ಣವಾಗಿ ಸ್ಟಡಿ ಮಾಡಬೇಕೆಂದು ಒಂದು ಸಮಿತಿ ಮಾಡಿದರು. ಈ ಕಮಿಟಿಯಲ್ಲಿ ಯಾರ್‍ಯಾರು ಇರುತ್ತಾರೆಂದರೆ, No less than the Attorney General was made the Chairman. ಮತ್ತು ಇದರಲ್ಲಿ 58 ಜನ ಡಾಕ್ಟರ್‌ಗಳು ಮತ್ತು ಸೋಷಿಯಲ್ ವರ್ಕರ್‌ಗಳು, ಜಡ್ಜ್‌ಗಳು ಮತ್ತು ಪೊಲೀಸ್ ಆಫೀಸರ್, ಸೋಷಿಯಾಲಿಜಿಸ್ಟ್‌ಗಳು ಹಾಗೂ ಎಲ್ಲಾ ಹೆಡ್ ಆಫ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಇರುತ್ತಾರೆ. ಇದರಲ್ಲಿ ಪೊಲೀಸ್ ಕಮೀಷನರ್ ಅಥವಾ ಬೇರೆಯವರೂ ಸಹ ಇರಬಹುದು, ಆದರೆ ಆರ್ಡಿನರಿ ಅಧಿಕಾರಿಗಳು ಇರುವುದಿಲ್ಲ. ಇವರೆಲ್ಲರೂ ಸೇರಿ ಒಂದು ಅಡ್ವೈಸರಿ ಕೌನ್ಸಿಲ್ ಕಮಿಟಿ ಎಂದು ಮಾಡಿ ಅದರ ಮುಖಾಂತರ ಪೂರ್ಣವಾಗಿ ಇಂಥ ವಿಷಯಗಳ ಮೇಲೆ ಚರ್ಚೆ ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು ಈ ಆ್ಯಕ್ಟ್‌ನಲ್ಲಿ ಬಂದಿದೆ. ಅಷ್ಟೇ ಅಲ್ಲದೆ ಇವತ್ತು ಆಸ್ಟ್ರೇಲಿಯ, ಕೆನಡ, ಅಮೇರಿಕಾ ಹಾಗೂ ಬೇರೆ ಬೇರೆ ದೇಶಗಳಲ್ಲೂ ಈ ರೀತಿಯ ಸೆಂಟರ್‌ಗಳನ್ನು ಮಾಡಿದ್ದಾರೆ. ಇಂಥ ಅಸಹಜ ರೀತಿಯಲ್ಲಿ ಸಾಯುತಕ್ಕಂಥ ಮಹಿಳೆಯರಿಗೆ ತಕ್ಷಣ ಶೆಲ್ಟರ್ ಕೊಡಬೇಕೆಂದು, ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಶೆಲ್ಟರ್‌ಗಳನ್ನು ಮಾಡಿದ್ದಾರೆ. ಇಂಥ ಶೆಲ್ಟರ್‌ಗಳಿಗೆ ಹೋಗಿ ಆಸರೆ ಪಡೆದುಕೊಂಡು ಜೀವನ ಮಾಡುವುದಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಇದಕ್ಕೋಸ್ಕರ ಪ್ರತ್ಯೇಕವಾದ ಹಣಕಾಸಿನ ವ್ಯವಸ್ಥೆ ಇರುತ್ತದೆ. ಇವತ್ತು ದೇಶದ ಡಿಫೆನ್ಸ್‌ಗೋಸ್ಕರ ಯಾವರೀತಿ ಹಣವನ್ನು ಮೀಸಲಾಗಿಟ್ಟಿರುತ್ತಾರೋ, ಅದೇ ರೀತಿ ಹಣವನ್ನು ಅಮೇರಿಕಾದಲ್ಲಿ ಮೀಸಲಾಗಿಟ್ಟಿದ್ದಾರೆ. ಅಮೇರಿಕಾದಲ್ಲಿ ಕ್ಲಿಂಟನ್ ಅಧಿಕಾರದಲ್ಲಿ ಇವತ್ತು ಪ್ರತ್ಯೇಕವಾದ ಹಣವನ್ನು ತೆಗೆದಿಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಈ ಹಣದಿಂದ ಪೊಲೀಸ್ ಆಫೀಸರ್‌ಗಳಿಗೆ ಟ್ರೈನಿಂಗ್ ಕೊಡುವುದಕ್ಕೆ ಮತ್ತು ಇದನ್ನು ಟ್ರೀಟ್ ಮಾಡತಕ್ಕಂಥ ಜಡ್ಜ್‌ಗಳಿಗೆ ಸ್ಪೆಷಲ್ ಟ್ರೈನಿಂಗ್ ಮತ್ತು ಅವರ ಜೊತೆ ಸ್ಪಂದಿಸುವುದಕ್ಕೋಸ್ಕರ ಸ್ಪಂದನ ಇರತಕ್ಕಂಥ ಜಡ್ಜ್ ಆಗಬೇಕೆಂದು ಮತ್ತು ಪೊಲೀಸ್ ಆಫೀಸರ್, ಸೋಷಿಯಾಲಿಜಿಸ್ಟ್‌ಗಳು ಸ್ಪಂದಿಸಬೇಕೆಂದು ಹಾಗೂ ಸೈಕಿಯಾಟ್ರಿಸ್ಟ್ ಅಲ್ಲಿರಬೇಕೆಂದು, ಇವರಿಗೆ ಟ್ರೈನಿಂಗ್ ಕೊಡುವುದಕ್ಕಾಗಿ ಹಣವನ್ನು ಮೀಸಲಾಗಿಟ್ಟಿದ್ದಾರೆ. ಇದಕ್ಕೋಸ್ಕರ ಪ್ರತ್ಯೇಕವಾಗಿ ಇಟ್ಟಿರುವ ಹಣದಲ್ಲಿ 50 ಪರ್ಸೆಂಟ್‌ನಷ್ಟು ಕಡಿಮೆ ಮಾಡಬೇಕೆಂದು ಸೆನೆಟ್‌ನಲ್ಲಿ ಪ್ರಸ್ತಾಪ ಮಾಡಿದಾಗ, ಕ್ಲಿಂಟನ್‌ರವರು ಆ ರೀತಿ

ಆಗಬಾರದೆಂದು ಎಲ್ಲಾ ಹಣವನ್ನು ಹಾಗೆಯೇ ಮೀಸಲಾಗಿಟ್ಟಿದ್ದಾರೆ. ಅಮೇರಿಕಾದಲ್ಲಿ ಅಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೋ ಅದು ಪ್ರತಿಯೊಂದು ಸ್ಟೇಟ್‌ನಲ್ಲಿಯೂ ಈ ಹಣ ವಿನಿಯೋಗ ಮಾಡುತ್ತಿದ್ದಾರೆ. ಈಗ ಚೈನಾದಲ್ಲಿ ಬೀಜಿಂಗ್ ಕನ್ವೆನ್‌ಶನ್ ಎಂದು ಮಾಡಿದ್ದಾರೆ. ಅಲ್ಲಿಯೂ ಕೂಡ ಇದಕ್ಕೆ ಆದ್ಯತೆ ಕೊಡಬೇಕೆಂದು ಅಲ್ಲಿನ ಎಲ್ಲಾ ಸ್ಟೇಟ್‌ನಲ್ಲಿಯೂ ಕೂಡ ಬೌಂಡ್ ಆಗಲೇಬೇಕೆಂದು ಹೇಳಿ, ಇದಕ್ಕೆ ಹಣವನ್ನು ಒದಗಿಸಿ, ಇದರ ಬಗ್ಗೆ ರಿಪೋರ್ಟ್ ಕೊಡಬೇಕೆಂದು ಹೇಳಿದರು. ಪ್ರತಿಯೊಂದು ಸ್ಟೇಟ್‌ನಲ್ಲಿಯೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ಇವತ್ತಿನ ದಿವಸ ಕರ್ನಾಟಕ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇದರ ಬಗ್ಗೆ ಯಾವ ರಿಪೋರ್ಟ್‌ನ್ನು ತಾವು ತಯಾರು ಮಾಡಿದ್ದೀರಾ? ಇದರ ಬಗ್ಗೆ ಏನಾದರೂ ಮಾಡಬೇಕೆಂದು ಯಾವುದೇ ರೀತಿಯ ಬ್ಲೂ ಪ್ರಿಂಟ್ ಪ್ಲಾನ್ ಮಾಡಿದ್ದೀರಾ? ಈಗಾಗಲೇ ಬೀಜಿಂಗ್ ಕನ್ವೆನ್‌ಶನ್ ಮಾಡಿ ಎರಡು ವರ್ಷ ಆಯಿತು. ಈಗ ಎಲ್ಲಾ ಕಡೆ ಕನ್ವೆನ್‌ಶನ್ ಆಗಿದೆ. We are also part and parcel of UNO charter. ಇದಕ್ಕೆ ಒಂದು ಚಾರ್ಟರ್ಡ್ ಮಾಡಿ, ಎಲ್ಲರೂ ಕೂಡ ಬೌಂಡ್ ಎಂದು ಹೇಳಿದರು. ಬೀಜಿಂಗ್‌ಗೆ ಇಂಡಿಯಾದಿಂದ ನಮ್ಮ ರಾಜ್ಯದ ಪ್ರತಿನಿಧಿಯಾಗಿ ತಾವೂ ಕೂಡ ನಮ್ಮ ಮಹಿಳೆಯನ್ನು ಕಳುಹಿಸಿಕೊಟ್ಟಿದ್ದೀರಿ. ಅಲ್ಲಿಗೆ ಹೋಗಿ ಬಂದಂಥವರು ಇಲ್ಲಿ ಏನು ಮಾಡಿದ್ದಾರೆ? ಏತಕ್ಕೋಸ್ಕರ ಕಳುಹಿಸಿದ್ದೀರಿ? ತಾವು ಏನು ಮಾಡಿದ್ದೀರಿ? ಇದನ್ನೆಲ್ಲಾ ನಾವು ನೋಡಬೇಕಲ್ಲವೇ? ಹಣ ಖರ್ಚು ಮಾಡಿ ಕಳುಹಿಸಿದ ಮೇಲೆ ಏನು ಮಾಡಿದ್ದಾರೆಂದು ನಾವು ತಿಳಿದುಕೊಳ್ಳಬೇಕಲ್ಲವೆ? ಅಲ್ಲಿಗೆ ಹೋಗಿ ಬಂದ ಮೇಲೆ, ಅಲ್ಲಿನ ರಿಪೋರ್ಟ್ ಏನಾಯಿತು? ಮತ್ತು ಏನೇನು ರೆಕಮೆಂಡೇಷನ್ ಮಾಡಿದ್ದಾರೆ? ಅವರು, ಸರ್ಕಾರ ಏನು ಮಾಡಬೇಕೆಂದು ತಿಳಿಸಿದ್ದಾರೆ? ಇದರ ಬಗ್ಗೆ ನಮಗೆ ಮಾಹಿತಿ ಬೇಕಲ್ಲಾ? ಇದರ ಬಗ್ಗೆ ಇವತ್ತು ಕರ್ನಾಟಕದಲ್ಲಿ ಏನೂ ಆಗಿಲ್ಲ ಎನ್ನತಕ್ಕಂಥ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. sensitisation of the police force ಬಗ್ಗೆ ಡಿಬೇಟ್ ಮಾಡುತ್ತಿರುವುದರಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು, ನಾವೇನೂ ಮಾಡಿಲ್ಲ ಎನ್ನುವ ದೃಷ್ಟಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಈ ಪೊಲೀಸ್ ಆಫೀಸರಿಗೆ ಲೋಯರ್ ಲೆವಲ್‌ನಲ್ಲಿ, ಮಹಿಳೆಯ ತೊಂದರೆಗೆ ಸಂಬಂಧಪಟ್ಟ ಹಾಗೆ ಟ್ರೈನಿಂಗ್ ಕೊಡಬೇಕೆಂಬ ದೃಷ್ಟಿಯಿಂದ ಮೊನ್ನೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಮತ್ತು ಅದರ ಸದಸ್ಯರುಗಳು ಬಂದಾಗ, ಒಂದು ದಿನದ ಸೆಮಿನಾರ್‌ನ್ನು ನಾವು ಪೊಲೀಸ್ ಇಲಾಖೆಯಿಂದ ಸೀನಿಯರ್ ಆಫೀಸರ್‌ಗಳಿಗೆ ಇಟ್ಟುಕೊಂಡಿದ್ದೆವು. ಆ ಸಂದರ್ಭದಲ್ಲಿ ವಿಭಾ ಪಾರ್ಥಸಾರಥಿಯವರು ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರಿಗೆ ಸಿಗುತ್ತಿರುವ ಪ್ರೊಟೆಕ್ಷನ್ ಮತ್ತು ಅವರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವುದರಲ್ಲಿ ನಾವು ತೆಗೆದುಕೊಂಡಿರತಕ್ಕಂಥ ಕ್ರಮಗಳನ್ನು ಪ್ರಶಂಸೆ ಮಾಡಿದ್ದಾರೆಂದು ಇಲ್ಲಿ ನಾನು

ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೇರೆ ರಾಜ್ಯದಲ್ಲಿ ಇನ್ನೂ ಸತಿಪದ್ಧತಿ ಇರತಕ್ಕಂಥದ್ದು ನಮ್ಮ ಗಮನದಲ್ಲಿದೆ.

ಶ್ರೀಮತಿ ಪ್ರಮೀಳಾನೇಸರ್ಗಿ :— ನೀವು ಯಾವರೀತಿ ಪ್ರೊಟೆಕ್ಷನ್ ಕೊಡುತ್ತಿದ್ದೀರೆಂದು ನಾವು ನೋಡುತ್ತಿದ್ದೇವೆ. ತಾವು ಹೊಗಳಿಕೊಳ್ಳುವುದಾದರೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು :— ತಮ್ಮಲ್ಲಿ ಮತ್ತು ಮಾನ್ಯ ಗೃಹ ಮಂತ್ರಿಗಳ ಹತ್ತಿರ ಹಾಗೂ ಇತರೆ ಎಲ್ಲಾ ಸದಸ್ಯರುಗಳ ಹತ್ತಿರ ಆ ಹೆಣ್ಣುಮಕ್ಕಳು ಬಂದು ಭೇಟಿಯಾಗಿ ಅವರು ತಮ್ಮ ಸಂಕಟವನ್ನು ತೋಡಿಕೊಂಡಿದ್ದನ್ನು ನಾವೆಲ್ಲರೂ ಕೇಳಿದ್ದೇವೆ. ತಮಗೆ ಮತ್ತು ಇನ್ನು ಮಾತನಾಡತಕ್ಕಂಥ ಮಾನ್ಯ ಸದ್ಯಸರಿಗೆ ನಾನು ವಿನಂತಿ ಮಾಡುವುದೇನೆಂದರೆ, ಇಲ್ಲಿ ಯಾರ ಮೇಲೆ ಯಾರೂ ಕಂಪ್ಲೇಂಟ್ ಮಾಡುವುದಕ್ಕೆ ನಾವು ಸೇರಿಲ್ಲ. ಮಾನವೀಯತೆ ದೃಷ್ಟಿಯಿಂದ ಕೆಲವು ಸನ್ನಿವೇಶದಲ್ಲಿ ಹೆಣ್ಣುಮಕ್ಕಳನ್ನು ಎಷ್ಟು ಹೀನವಾಗಿ ಕಾಣುತ್ತಾರೆಂಬುದು ಹಾಗೂ ವ್ಯವಸ್ಥೆಯಲ್ಲಿರತಕ್ಕಂಥ ಲೋಪದೋಷಗಳು ಮತ್ತು ಸಾಮಾಜಿಕ ಅಥವಾ ಆರ್ಥಿಕ ವ್ಯವಸ್ಥೆ ಇದಕ್ಕೆ ಮುಖ್ಯ ಕಾರಣವಾಗಿರಬಹುದು. ನಾವೆಲ್ಲರೂ ಒಟ್ಟಾಗಿ ಸೇರಿ ಜನಪ್ರತಿನಿಧಿ ಸಭೆ ಮಾಡಿ ಇದಕ್ಕೆ ಒಂದು ಪರಿಹಾರ ಕಂಡುಹಿಡಿದುಕೊಳ್ಳುವ ದೃಷ್ಟಿಯಲ್ಲಿ ನಾವು ಹೋಗೋಣ. ಯಾರೋ ಒಬ್ಬ ಕಾನ್‌ಸ್ಟೇಬಲ್, ಡಾಕ್ಟರ್, ಎಸ್.ಪಿ. ಅಥವಾ ಡಿ.ಎಸ್.ಪಿ. ಎಂಬುದೆಲ್ಲಾ ಪ್ರಾಸಂಗಿಕವಾಗಿ ಎಲ್ಲಾದರೂ ಒಂದು ಕಡೆ ಬರಲಿ, ಇದೇ ಮುಖ್ಯವಾಗುವುದು ಬೇಡ. ಕಾರಣ ಏನೆಂದರೆ, ಇವತ್ತಿನದಿವಸ ಪೊಲೀಸ್ ಇಲಾಖೆಯಲ್ಲಿ ಮತ್ತು ರಾಜಕಾರಣದಲ್ಲಿ ಹಾಗೂ ಸಾಹಿತಿಗಳಲ್ಲಿ ಒಳ್ಳೆಯವರು ಹಾಗೂ ಕೆಟ್ಟವರು ಇದ್ದಾರೆ. ಇವತ್ತು ಇವರು ಎಲ್ಲಾ ಕಡೆ ಹಂಚಿ ಹೋಗಿದ್ದಾರೆ. ಇವತ್ತಿನ ಮುಖ್ಯವಾದ ವಿಷಯವೇನೆಂದರೆ, ಹೆಣ್ಣುಮಕ್ಕಳು ಒಬ್ಬೊಬ್ಬರಾಗಿ ತಮ್ಮ ಗೋಳನ್ನು ನಮ್ಮ ಎದುರಿಗೆ ತೋಡಿಕೊಂಡಾಗ ನಮಗೆ ಕಣ್ಣೀರು ತಡೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ಅವರು ಬಹಳ ನೋವಿನಿಂದ ಬಂದು ನಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ಇವತ್ತು ಸುಮಾರು ಜನ ಗ್ಯಾಲರಿಯಲ್ಲಿ ಕುಳಿತುಕೊಂಡು ನಮ್ಮ ಡೆಲಿಬರೇಶನ್‌ನನ್ನು ವಾಚ್‌ಮಾಡುತ್ತಿದ್ದಾರೆ. ಸಾಮಾನ್ಯ ಜನರಿಗೆ ಈ ಸದನದ ಕಾರ್ಯಕಲಾಪಗಳಲ್ಲಿ ಇರತಕ್ಕಂಥ ವಿಶ್ವಾಸವನ್ನು ಹೆಚ್ಚಿಸತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ. ನಮ್ಮ ಕಲಾಪ ಆ ದಿಕ್ಕಿನಲ್ಲಿ ಹೋಗಲಿ ಎಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಸನ್ಮಾನ್ಯ ಅಧ್ಯಕ್ಷರೆ, ಪೊಲೀಸ್‌ನವರು ಕಮೀಷನ್ ಮಾಡುತ್ತಿರುವ ಬಗ್ಗೆ ನಮ್ಮವರು ಕೂಡ ಅಲ್ಲಿಗೆ ಹೋಗಿ ನೋಡಿದ್ದಾರೆ ಮತ್ತು ನನ್ನ ಜೀವನದಲ್ಲಿ ಪ್ರತಿದಿವಸ ಇದರ ಬಗ್ಗೆ ನೋಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಬೇರೆಯವರು ಬಂದು ಹೇಳಿ ಹೋದರೆಂದು ಸನ್ಮಾನ್ಯ ಮಂತ್ರಿಗಳು ಹೇಳುವುದಾದರೆ, ಕರ್ನಾಟಕ ರಾಜ್ಯದಲ್ಲಿ ಇಷ್ಟು ಸಾವು-ನೋವುಗಳು ಆಗುತ್ತಿರಲಿಲ್ಲ.

ಮಹಿಳೆಯ ಕಣ್ಣೀರು ಇಷ್ಟೊಂದು ಹರಿಯತಕ್ಕಂಥ ಪರಿಸ್ಥಿತಿ ಕೂಡ ಬರುತ್ತಿರಲಿಲ್ಲ. ತಾವು ಹೇಳಿದ ಪರಿಸ್ಥಿತಿ ಹೊರಕ್ಕೆ ಬರುವುದಕ್ಕೆ ತಮ್ಮ ಮುಂದೆ ಏನು ಸ್ಟ್ಯಾಟಿಸ್ಟಿಕಲ್ ರೆಕಾರ್ಡ್ ಇಟ್ಟಿದ್ದಾರೆಯೋ, ಅದು ಸತ್ಯಕ್ಕೆ ದೂರವಾದಂತಹ ವಿಷಯ. ಇದರ ಬಗ್ಗೆ ತಾವು ಡೀಪ್ ಆಗಿ ಒಳಗಡೆ ಹೋದರೆ ಮಾತ್ರ ಅರ್ಥವಾಗುತ್ತದೆ. ಇದನ್ನೆಲ್ಲಾ ತಿಳಿದುಕೊಳ್ಳುವುದಕ್ಕೋಸ್ಕರವೇ ಇವತ್ತಿನದಿವಸ ಚರ್ಚೆ ಮಾಡುತ್ತಿದ್ದೇನೆ. ಇಲ್ಲಿರತಕ್ಕಂಥ ಎಲ್ಲಾ ಶಾಸಕರು ಒಂದಲ್ಲಾ ಒಂದು ರೀತಿಯಲ್ಲಿ ಎಷ್ಟೋ ಮನೆಗಳನ್ನು ಉಳಿಸಿದ್ದಾರೆ, ಆದರ ಬಗ್ಗೆ ನಾನು ಹೇಳುತ್ತಿಲ್ಲ. ನಾವು ಇವತ್ತು ಚರ್ಚೆ ಮಾಡುವುದರಿಂದ ಇನ್ನಷ್ಟು ಜೀವಗಳನ್ನು ಉಳಿಸುವುದಕ್ಕೆ ನಾವೇನಾದರೂ ಪ್ರಯತ್ನ ಮಾಡಿದರೆ, ಇದರಿಂದ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕಾಗುತ್ತದೆ. ಇದಕ್ಕೋಸ್ಕರ ನಾವೆಲ್ಲಾ ಒಂದು ನಿರ್ದಿಷ್ಟವಾದ ದಾರಿ ಮಾಡೋಣ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಹಿಲರಿ ಕ್ಲಿಂಟನ್‌ರವರು ಹೇಳಿರತಕ್ಕಂಥ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅದೇನೆಂದರೆ, ``When I travelled overseas on behalf of the United States, I always learn in new way how very much human experience we share across national boundaries. This probelm is all pervasive and yet very difficult to see. There is nothing visibly wrong with the picture. But I know too well that every country that I have visited, every country shares a hidden part of the scene. When some of those women go home at night, they live with fear, not fear of an invading army or a naturral disaster or even a stranger in an alien: They fear the very people, family members, on whom they are supposed to depend upon for help and comfort. That is the trust destroying fear that attends every step of victims of domestic voilence. For these women home provides inadequate refuge, the law, little protection, and public opinion even less empathy. Domestic and sexual voilence against women remains one of the most serious and under-reported human rights voilations in our region." ಅಧ್ಯಕ್ಷರೆ, ಇದಕ್ಕೆ ನಾವು ಏನಾದರೂ ವ್ಯತ್ಯಾಸವಾಗಿದ್ದೇವೆಯೇ? ನನಗೆ ಗೊತ್ತಿದೆ ಇವತ್ತೂ ಕೂಡ ಕೆಲಸ ಮಾಡತಕ್ಕಂಥ ಸಹಸ್ರಾರು ಮಹಿಳೆಯರು ಕೆಲಸವನ್ನು ಮಾಡಿ ಮನೆಗೆ ಹೋಗುವಾಗ ಅಳುತ್ತಾ ಹೋಗುವಂಥ ಪರಿಸ್ಥಿತಿ ಬಂದಿದೆ. ರಾತ್ರಿಯಾದರೆ ಮನೆಯಲ್ಲಿ ಹೇಗೆ ಇರಬೇಕೆನ್ನುವ ಪರಿಸ್ಥಿತಿ, ರಾತ್ರಿಯಿಂದ ಬೆಳಗಿನವರೆಗೆ ಹೇಗೆ ಇರಬೇಕೆನ್ನುವ ಭಯದ ಒಂದು ವಾತಾವರಣ. ಬಾಯಿಯಿಂದ ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಅಕ್ಕಪಕ್ಕದ ಜನರಿಗೆ ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಸರ್ಕಮ್‌ಸ್ಟನ್ಸ್‌ನಲ್ಲಿ ಇಂದು ಸಾವಿರಾರು ಮಹಿಳೆಯರು ಬರುತ್ತಿದ್ದಾರೆ ಎನ್ನುವುದನ್ನು

ನಾವು ನೋಡಬೇಕಾಗಿದೆ. ಅವರಿಗೆ ನಾವು ಏನು ಮಾಡಬೇಕೆನ್ನುವ ಬಗ್ಗೆ ಇವತ್ತು ನಾವೆಲ್ಲರೂ ಕೂಡಿ ತೀರ್ಮಾನ ಮಾಡಬೇಕಾಗಿದೆ. ಬಜಾರಿನಲ್ಲಿ ಆಯಿತೆಂದರೆ ಪೋಲೀಸ್‌ನವರು ರಿಜಿಸ್ಟರ್ ಮಾಡಿ ಕೇಸ್ ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತಾರೆ. ಗಂಡ-ಹೆಂಡತಿಯ ಜಗಳವಾಗಿದೆ, ಮನೆಯಲ್ಲಿ ಅತ್ತೆ-ಮಾವಂದಿರು ಹೊಡೆದಿದ್ದಾರೆ ಎಂದರೆ ಅಷ್ಟು ಆಸಕ್ತಿಯನ್ನು ತೋರಿಸುವುದಿಲ್ಲ. ಇವತ್ತು ಹೊಡೆದಾಟವಾದರೆ ಎಷ್ಟು ಆಸಕ್ತಿಯನ್ನು ವಹಿಸಿ ಪೋಲೀಸ್‌ನವರು ಕೇಸನ್ನು ಫೈಲ್ ಮಾಡುತ್ತಾರೋ, ಆದರೆ ಮಹಿಳೆಯರಿಗೆ ಮನೆಯಲ್ಲಿ ತೊಂದರೆ ಕೊಟ್ಟರೆ ಅಷ್ಟು ಆಸಕ್ತಿವಹಿಸುವುದಿಲ್ಲವೆನ್ನುವುದನ್ನು ತಾವು ನೋಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಹೋಗಿ ನೋಡಿ: ಪ್ರಾಕ್ಟಿಕಲ್ ನೋಡಬೇಕು. ಕಾನೂನು ಇರುವುದು ಬೇರೆ. ಅದು ಆಗುತ್ತಿರುವುದು ಬೇರೆ, ನಾವು ಇವತ್ತು ನೋಡಬೇಕಾಗಿದೆ. ಮನೆಯಲ್ಲಿ ಆಗತಕ್ಕಂಥ ಪರಿಸ್ಥಿತಿಯಲ್ಲಿ, ಆ ಮಹಿಳೆ ಯಾವ ವಿಧವಾದ ಭಯದಿಂದ ಅವಳು ನಡುಗುತ್ತಿದ್ದಾಳೆ ಎನ್ನುವುದನ್ನು ನಾವು ಇವತ್ತು ಅರ್ಥಮಾಡಿಕೊಳ್ಳಬೇಕಾಗಿದೆ. ಅಂಕಿಅಂಶಗಳ ಪ್ರಕಾರ every fifth woman ನಾನು ಎಲ್ಲರ ಮನೆಯಲ್ಲಿ ಆ ರೀತಿಯಾಗಿ ಇದೆ, ಭಯ ಇದೆ ಎಂದು, ಎಲ್ಲರ ಮನೆಯಲ್ಲಿ ಅತ್ತೆ-ಮಾವಂದಿರು ಆ ರೀತಿಯಾಗಿ ನೋಡಿಕೊಳ್ಳುತ್ತಾರೆಂದು ಹೇಳುವುದಿಲ್ಲ. There are exceptions, generalisation is always bad, more so with the human beings; ಆದರೆ 5 ಮಹಿಳೆಯರಲ್ಲಿ ಒಬ್ಬ ಮಹಿಳೆ ಈ ರೀತಿಯಾದ ಒಂದು ಭಯದ ವಾತಾವರಣದಲ್ಲಿ ಇದ್ದಾಳೆ. ಹೆಚ್ಚು ಕಡಿಮೆ ಆ ಮಹಿಳೆ ಮನೆಯಲ್ಲಿರುವ ಗಂಡ ಅಥವಾ ಅತ್ತೆ-ಮಾವಂದಿರಿಂದ ಹೊಡೆತವನ್ನು ತಿನ್ನುತ್ತಾಳೆ. a battered woman ಎನ್ನುವ ಮಾತನ್ನು ನಾವು ಇವತ್ತು ನೋಡುತ್ತಿದ್ದೇವೆ. ಇವರಿಗೆ ತಾವು ಏನು ಮಾಡುತ್ತೀರಿ? ಇವರ ಭಯವನ್ನು ನಿವಾರಣೆ ಮಾಡುವುದಕ್ಕೋಸ್ಕರ ತಾವು ಯಾವ ಕಾನೂನನ್ನು ತರುವವರು ಇದ್ದೀರಿ? ಇವರೆಲ್ಲರಿಗೂ ಕೂಡ ಭಯವು ಇಲ್ಲದೇ ಇರತಕ್ಕಂಥದ್ದರಲ್ಲಿ ಜೀವನ ಮಾಡುವುದಕ್ಕೋಸ್ಕರ ಯಾವ ಕಾನೂನನ್ನು ತಂದು ಅವರಿಗೆ ರಕ್ಷಣೆ ಕೊಡುತ್ತೀರಿ ಇದನ್ನು ನಾವು ನೋಡಬೇಕಲ್ಲಾ. ಹೊರಗಡೆ ಏನಾದರೂ ಆದರೆ ಕಾನೂನು ಇದೆ, ಪೋಲೀಸ್ ಸ್ಟೇಷನ್‌ದಲ್ಲಿ ಲಾ ಅ್ಯಂಡ್ ಆರ್ಡರ್ ಇದೆ, ಆದರೆ ಮನೆಯಲ್ಲಿ ಇರತಕ್ಕಂಥ ಅತ್ತೆ-ಮಾವಂದಿರು ರಕ್ಷಣೆ ಕೊಡತಕ್ಕಂಥ ಸಂದರ್ಭದಲ್ಲಿ ಆ ಮಹಿಳೆಯರಿಗೆ ರಕ್ಷಣೆ ಕೊಡಬೇಕಾದರೆ ಯಾವ ರೀತಿಯಾದ ಕಾನೂನನ್ನು ತರಬೇಕು, ಹೇಗೆ ಮಾಡಿದರೆ ಅವಳು ಸುರಕ್ಷಿತವಾಗಿ ಬಾಳಬಲ್ಲಳು ಅದನ್ನು ನಾವು ಇವತ್ತು ನೋಡಬೇಕಲ್ಲವೇ? ಅದಕ್ಕಾಗಿ ನಾವು ಇವತ್ತು ಯಾವ ಕಾನೂನನ್ನು ತರಬೇಕೆನ್ನುವ ಬಗ್ಗೆ ನೋಡಬೇಕಾಗಿದೆ. ಇವತ್ತು ಸೀಮೆಎಣ್ಣೆಯನ್ನು ಸುರಿದು ಸಾಯಿಸಬಹುದು.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಬಹಳ ಸೀರಿಯಸ್ಸಾಗಿ ವಿಷಯ ಹೋಗುತ್ತಿದೆ. ಇದರ ಜೊತೆಗೆ ನನ್ನ ಒಂದು ಸಲಹೆ: ಎಲ್ಲಾ ಪ್ರಕರಣಗಳಲ್ಲಿ ಕಂಪ್ಲೇಂಟ್ ಮಾಡಿದ್ದು ಮಾವನ ಮೇಲೆಯಾಗಲಿ ಅಥವಾ ಮೈದುನನ ಮೇಲೆ ಆಗಲಿ ಇಲ್ಲ. ಅತ್ತೆಯ

ಮೇಲೆ ಮತ್ತು ನಾದಿನಿಯ ಮೇಲೆ ಕಂಪ್ಲೇಂಟ್ ಆಗುತ್ತದೆ. ಹೀಗಾಗಿ ಯೋಗ್ಯವಾದ ಸಂಸ್ಕಾರವನ್ನು ಮಹಿಳೆಯರಿಗೆ ತುಂಬತಕ್ಕಂಥದ್ದು ಅಗತ್ಯ ಇದೆಯೋ ಏನೋ ಎಂದು ನನಗೆ ಅನಿಸುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರೆ, ಅತ್ತೆ, ಮಾವ ಹಾಗೂ ಭಾವ ಎಲ್ಲರೂ ಸೇರಿ ಜಾಯಿಂಟ್ ರೆಸ್ಪಾನ್ಸಿಬಲ್ ಆಗುತ್ತಾರೆ. ಅದರಲ್ಲಿ ಅತ್ತೆ ಒಬ್ಬಳೇ ಬರುವುದಿಲ್ಲ. ಆದ್ದರಿಂದ, ನೀವು ಅತ್ತೆಯ ಮೇಲೆ ಹೇಳಿ, ಹೆಣ್ಣಿನ ಮೇಲೆ ಹೆಣ್ಣಿಗೆ ಜಗಳ ತರುವ ವ್ಯವಸ್ಥೆ ಮಾಡತಕ್ಕಂಥದ್ದನ್ನು ಮಾಡಬೇಡಿ. ಆ ರೀತಿಯಾದ ಪರಿಸ್ಥಿತಿ ಅದು ಅಲ್ಲ. ಆ ಪರಿಸ್ಥಿತಿಯನ್ನು, ಒಂದು ಕುಟುಂಬ, ಒಟ್ಟಿಗೆ ಸೇರಿ ಆ ಹೆಣ್ಣಿನ ಮೇಲೆ ದಾಳಿ ಮಾಡಿದಾಗ ಏನು ಮಾಡುತ್ತಾರೆ, ಅದರಲ್ಲಿ ಅತ್ತೆ ಒಬ್ಬಳೇ ಬರುವುದಿಲ್ಲ, ಎಲ್ಲರೂ ಅದರಲ್ಲಿ ಬರುತ್ತಾರೆ ಎನ್ನುವುದನ್ನು ತಾವು ಇವತ್ತು ಯೋಚನೆ ಮಾಡಬೇಕಾಗಿದೆ. ಆದ್ದರಿಂದ, ಹೆಣ್ಣಿನ ಮೇಲೆ ಹೆಣ್ಣನ್ನು ಕಟ್ಟಿ ಈ ರೀತಿ ಮಾಡತಕ್ಕಂಥದ್ದು ಸರಿಯಲ್ಲವೆಂದು ಅಭಿಪ್ರಾಯ ಬರುತ್ತದೆ. ನನ್ನ ಈ ಒಂದು ಪರಿಸ್ಥಿತಿಯಲ್ಲಿ: ಹೆಣ್ಣು ಹುಟ್ಟುವುದಕ್ಕೆ ಮುಂಚೆ ಒಂದು ಪರಿಸ್ಥಿತಿ ಪ್ರಾರಂಭವಾಗುತ್ತದೆ. ನಾನು ಒಂದು ಸಮಯದಲ್ಲಿ ಬೆಂಗಳೂರಿನಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಮಾಡತಕ್ಕಂಥ ಅಂಕಿಅಂಶಗಳನ್ನು ನೋಡಿದಾಗ ಒಂದು ತಿಂಗಳಲ್ಲಿ, ಬೆಂಗಳೂರಿನಲ್ಲಿ ಮಾತ್ರ, ಹೆಣ್ಣು ಮಗುವಿದೆ ಎಂದು ನೋಡಿ ಅಬಾರ್ಷನ್ ಆಗಿದ್ದು 10 ಸಾವಿರ ಮಕ್ಕಳ ವಧೆಯಾಗಿದೆ. ನೀವು ಇವತ್ತು ಯೋಚನೆ ಮಾಡಿ ಕರ್ನಾಟಕದಲ್ಲಿ ಎಷ್ಟು ಆಗಿರಬಹುದು. ಇಡೀ ದೇಶದಲ್ಲಿ ಇವತ್ತು ಹೆಣ್ಣು ಮಗು ಹುಟ್ಟುವ ಮುಂಚೆ ಭ್ರೂಣ ಹತ್ಯೆ ಮಾಡಿರಬಹುದು. ಇವತ್ತು ನಾವು ಇದನ್ನು ಯೋಚನೆ ಮಾಡಬೇಕು. ಇದನ್ನು ತಪ್ಪಿಸಬೇಕಾದರೆ ನಾವು ಏನು ಮಾಡಬೇಕು. ಇವತ್ತೂ ಕೂಡ ಹೆಣ್ಣು ಮತ್ತು ಗಂಡು ಎಂಬ ಬೇದಭಾವ ಆರ್ಟಿಕಲ್ 15 ನಲ್ಲಿ ಅಥವಾ 14ರಲ್ಲಿ ಇಲ್ಲದೇ ಇದ್ದರೂ ಕೂಡ ಇವತ್ತು ಪ್ರತಿಯೊಂದು ಮನೆಯಲ್ಲಿ ನಾವು ನೋಡಿದ್ದೇವೆ. ಅಮೇರಿಕದಲ್ಲಿರುವ ಒಬ್ಬ ಫುಟ್‌ಬಾಲ್ ಆಟಗಾರರನ್ನು ನಿನಗೆ ಮಕ್ಕಳು ಎಷ್ಟು ಎಂದು ಕೇಳಿದಾಗ ಅವನು ಹೇಳುತ್ತಾನೆ. "one son and seven mistakes`` He says "one boy and seven mistakes" ಇದು ಒಂದೆ ಕಡೆ ಅಲ್ಲ. ಇದೇ ರೀತಿ ಪಾಕಿಸ್ಥಾನದಲ್ಲಿ ಆದಾಗ ಶ್ರೀಮತಿ ಬೆನಜೀರ್ ಬುಟ್ಟೋ ಕೂಡ ಬಂದು "I can never tolerate this, I will not do this". ಎಂದು ಹೇಳಿದ್ದಾರೆ. ಪ್ರತಿಯೊಬ್ಬರು ಕೂಡ ಹೇಳಿಕೊಂಡು ಬಂದಿದ್ದಾರೆ. ಆದರೆ ಅವ್ಯಾಹತವಾಗಿ ಇದು ನಡೆದುಕೊಂಡು ಬರುತ್ತಾ ಇದೆ. ಬಾಂಬೆಯಲ್ಲಿ ಕೂಡ ಒಂದು ದಿನಕ್ಕೆ ಎಷ್ಟೋ ಭ್ರೂಣ ಹತ್ಯೆಯಾಗುತ್ತಿವೆ. ನರ್ಸಿಂಗ್ ಹೋಮ್ ಆ್ಯಕ್ಟ್ ತರುತ್ತೇವೆಂದು ಹೇಳಿದರು, ಅದರ ಬಗ್ಗೆ ಕಾನೂನು ತಂದರು. ಆದರೆ, ಕಾನೂನು ಕಾನೂನಾಗಿಯೇ ಉಳಿದಿದೆ. ಗಲ್ಲಿಗಲ್ಲಿಗಳಲ್ಲಿಯೂ ಕೂಡ ಇವತ್ತು ಒಬ್ಬ ಮಹಿಳೆ ಪ್ರೆಗ್ನೆಂಟ್ ಆದರೆ, ಅವಳ ಗರ್ಭದಲ್ಲಿರುವ ಮಗು ಹೆಣ್ಣು ಅಥವಾ ಗಂಡು ಎಂದು ಪರೀಕ್ಷೆ ಮಾಡಿ ಅದು

ಬೇಡವೆಂದು ಹೇಳುವಂಥ ಒಂದು ಪರಿಸ್ಥಿತಿ ಬಂದಿದೆ. ಒಂದು ಅಡ್‌ವರ್ಟೈಸ್‌ಮೆಂಟ್ ಬರುತ್ತದೆ, ಭಾರತ ದೇಶದಲ್ಲಿ ಹೆಣ್ಣು ಮಗು ಹುಟ್ಟುವ ಮುಂಚೆ, ಸಾಯಿಸುವುದಕ್ಕೆ 38 ರೂಪಾಯಿಗಳು ಖರ್ಚು. ಆದರೆ ನಿಮಗೆ ಮದುವೆ ಮಾಡಲಿಕ್ಕೆ ಕೊಡಬೇಕಾಗಿರುವ ವರದಕ್ಷಿಣೆಯ ಖರ್ಚು 38 ಸಾವಿರ ರೂಪಾಯಿಗಳು, ಇದರಲ್ಲಿ ನಿಮಗೆ ಯಾವುದು ಬೇಕು ಯೋಚನೆ ಮಾಡಿ ಎಂದು ಅಡ್‌ವರ್ಟೈಸ್‌ಮೆಂಟ್ ಬರುತ್ತದೆಂದರೆ, ಇವತ್ತು ನಾವು ಯೋಚನೆ ಮಾಡಬೇಕು. ಸಾಯಿಸಬೇಕಾದರೆ 38 ರೂಪಾಯಿಗಳು, ಇಲ್ಲವಾದರೆ ಆ ಹೆಣ್ಣು ಮಗಳು ಹುಟ್ಟಿ ಬೆಳೆದರೆ ನೀವು 38 ಸಾವಿರ ರೂಪಾಯಿಗಳ ವರದಕ್ಷಿಣೆ ಕೊಡಬೇಕಾಗುತ್ತದೆ. ಇದನ್ನು ಮುಗಿಸಿ ಎಂದು ಹೇಳಿದರೆ ನಾವು ಇವತ್ತು ಯಾವ ಪರಿಸ್ಥಿತಿಯಲ್ಲಿದ್ದೇವೆ ಅದನ್ನು ನಾವು ನೋಡಬೇಕು. ನಾವು ಇವತ್ತು ಯಾವ ಪರಿಸ್ಥಿತಿಯಲ್ಲಿ ನಡೆಯುತ್ತಿದ್ದೇವೆ ಅದನ್ನು ನೋಡಬೇಕಲ್ಲಾ. ಹುಟ್ಟುವ ಮುಂಚೆ ಸಾವು, ಒಬ್ಬ ಪಾರ್ಸಿಯ ಮಹಿಳೆ ಸತ್ತಾಗ ಅವಳು ಬೇರೆ ಜಾತಿಯ ಗಂಡಿನ ಜೊತೆ ಮದುವೆಯಾಗಿದ್ದರೆ, ಅವರಿಗೆ ಪಾರ್ಸಿಯವರ ಗೋರಿಯಲ್ಲಿ ಜಾಗವಿಲ್ಲ. ಏಕೆಂದರೆ ಬೇರೆ ಜಾತಿಯವರನ್ನು ಮದುವೆಯಾಗಿರುವುದರಿಂದ. ಹೆಣ್ಣು ಮಗು ಹುಟ್ಟುವ ಮುಂಚೆ ಅಂತಹ ವ್ಯವಸ್ಥೆ, ಹುಟ್ಟಿ ಸತ್ತ ನಂತರ ಇಂತಹ ವ್ಯವಸ್ಥೆ. ಹುಟ್ಟುವುದಕ್ಕಿಂತ ಮುಂಚೆಯಿಂದ ಹಿಡಿದು ಸಾಯುವವರೆಗೆ ಕೂಡ ಹುಟ್ಟಿದ ನಂತರ ಆ ಹೆಣ್ಣುಮಗು ಶಾಲೆಗೆ ಹೋಗಿ ಏಕೆ ಓದಬೇಕು ಎಂದು ಅವಳಿಗೆ ವಿದ್ಯಾಭ್ಯಾಸವಿಲ್ಲ. Genocide, Infenticide, circumcision...

MR. SPEAKER :— We have taken up this as a special subject. ನೀವು ಸ್ವಲ್ಪ ಹಿಂದಕ್ಕೆ ಬನ್ನಿ. ಮೆಹರ್ ಏಕೆ ಇಂಟ್ರಡ್ಯೂಸ್ ಮಾಡಿದರು. ಕನ್ಯಾಶುಲ್ಕ ಏಕೆ ಇತ್ತು? ರಾಜಮಹಾರಾಜರ ಮನೆಗಳಲ್ಲಿ ಸ್ವಯಂವರದ ಪದ್ಧತಿ ಏಕೆ ಬಂದಿತ್ತು? Emancipation of women-you come stage by stage. ನಮ್ಮ ಸೋಷಿಯಲ್ ಆರ್ಡರ್ ಮತ್ತು ಎಕಾನಾಮಿಕ್ ಆರ್ಡರ್‌ಗಳು ಹೇಗೆ ಬದಲಾವಣೆಯಾಗಿವೆ ಇವತ್ತು ಈ ರೀಸಲ್ಟ್ ಏಕೆ ಬದಲಾವಣೆಯಾಗಿವೆ. ಇವತ್ತು ಕೂಡ ಇದರ ಬಗ್ಗೆ ನೀಖಾ ಮಾಡಬೇಕಾದರೆ ಮೆಹರ ಕೊಟ್ಟೇ ನೀಖಾ ಮಾಡಿಕೊಳ್ಳುವುದು. ಇದು ಒಂದು ವಿಪರ್ಯಾಸ. ಮೇಹರ ಕೊಟ್ಟು ಹುಡುಗ, ಹುಡುಗಿಗೆ ನೀಖಾ ಖಾಯಂ ಮಾಡುತ್ತಾರೆ. ಆದರೆ, ಅವರ ಸಮಾಜದಲ್ಲಿ ಕೂಡ ವರದಕ್ಷಿಣೆ ತೆಗೆದುಕೊಳ್ಳುತ್ತಿದ್ದಾರೆ. The main reason for all this is, the change in social order, economic order and change of value system and this House should find answer to these problems. We must go on these lines.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರೆ, ನಾವು ರೋಮನ್‌ರ ಕಾಲಕ್ಕಿಂತಲೂ ಮುಂಚೆ ಹೋಗಬೇಕು. ರೋಮನ್‌ರ ಕಾಲದಲ್ಲಿ ಸ್ಲೇವ್ಸ್ ಇದ್ದರು. ಯಾರು ಸ್ಲೇವ್ಸ್ ಎನ್ನುವುದು ತಮಗೂ ಕೂಡಾ ಗೊತ್ತಿದೆ. ಯಾರು ಮಾರಾಟ ಮಾಡುತ್ತಿದ್ದರು ಅವರನ್ನು

ಸ್ಲೇವ್ಸ್ ಎಂದು ಕರೆಯುತ್ತಿದ್ದರು. ಅವರು ಮಾರಾಟದ ವಸ್ತುಗಳಾಗಿದ್ದರು. ನಾನು ಈ ಮಾತನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇವತ್ತು ಏನಾಗಿದೆ, ತಾವು ಹೇಳಿದಂತೆ ಇವತ್ತು ಜಾತಿ ಇಲ್ಲ, ಮುಸ್ಲಿಂ ಇರಬಹುದು, ಕ್ರಿಶ್ಚಿಯನ್ ಇರಬಹುದು, ಹಿಂದೂ ಇರಬಹುದು, ಪ್ರತಿಯೊಂದು ಜನಾಂಗದಲ್ಲಿ ಇವತ್ತು ಗಂಡು ಮದುವೆಯ ಮಾರ್ಕೆಟ್‌ನಲ್ಲಿ ಮಾರಾಟದ ವಸ್ತುವಾಗಿದ್ದಾನೆ. He has reduced himself to a slave. ಮಾರಾಟದ ವಸ್ತುವಾಗಿರುವುದರಿಂದ ಈ ಪರಿಸ್ಥಿತಿ ಇವತ್ತು ಒದಗಿ ಬಂದಿರುತ್ತದೆ. ಆದ್ದರಿಂದ ಇವತ್ತು ಆ ಗಂಡನ್ನು ಇವತ್ತು ಆ ಸ್ಲೇವ್ಸ್‌ದಿಂದ ಬಿಡುಗಡೆ ಮಾಡಬೇಕಾಗಿದೆ. ಆ ಸ್ಲೇವ್ಸ್‌ದಿಂದ ತೆಗೆದು ಹಾಕಿ, ಆ ಗಂಡನ್ನು ನೀನು ಮನುಷ್ಯನಾಗಿ ಬಾಳು, ನೀನು ಮಾರಾಟದ ವಸ್ತುವಾಗಿ ಬಾಳಬೇಡ ಎಂದು ಹೇಳುವಂಥ ಪರಿಸ್ಥಿತಿ ಬಂದಿದೆ.

ಶ್ರೀ ಎಸ್.ಎಸ್. ಪಾಟೀಲ್ :— ಅಧ್ಯಕ್ಷರೆ, ಮಾನ್ಯ ಸದಸ್ಯಣಿಯರು ಹೇಳುವುದಕ್ಕೆ ಇಲ್ಲಿ ಯಾರದ್ದೂ ಎರಡು ಮಾತಿಲ್ಲ. ಆದರೆ, ಅದನ್ನು ನಿಲ್ಲಿಸಬೇಕಾದರೆ ಏನು ಮಾಡಬೇಕು ಎಂಬುದರ ಬಗ್ಗೆ ಪರಿಹಾರವನ್ನು ಹೇಳಬೇಕು. ವರದಕ್ಷಿಣೆಯ ಬಗ್ಗೆ ಹೇಳಬೇಕಾದರೆ, ಅದರ ಹಿಂದೆ ಹೆಣ್ಣೇ ಇರುತ್ತಾಳೆ. ಇವತ್ತು ಬಹಳ ಕಡೆ ನಾವು ಅದನ್ನು ನೋಡುತ್ತಿದ್ದೇವೆ. ಅದಕ್ಕೆ ನಾವು ಪರಿವರ್ತನೆ ತರಬೇಕಾಗುತ್ತದೆ.

ಅಧ್ಯಕ್ಷರು :— ನೀಚತನಕ್ಕೆ ಹೆಣ್ಣು-ಗಂಡು ಜಾತಿ ಏನೂ ಇಲ್ಲ. ನೀಚರಾದವರೆಲ್ಲಾ ಆ ಕೆಲಸ ಮಾಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಎಂತಹ ನೀಚನೂ ಕೂಡ ತನ್ನ ಮಗಳನ್ನು ಅತ್ಯಾಚಾರ ಮಾಡುವುದಿಲ್ಲ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಅತ್ಯಾಚಾರವನ್ನು ಮಾಡುವಂತಹ ವ್ಯಕ್ತಿಗಳಿಗೆ, ಅಂತದ್ದರಲ್ಲಿ ಒಬ್ಬ ಕುಡುಕನನ್ನು ಹುಡುಕಿಕೊಂಡು ಬನ್ನಿ, ಕುಡಿದುಕೊಂಡು ಮನೆಗೆ ಬಂದ ವ್ಯಕ್ತಿಯೂ ತಾಯಿಯ ಜೊತೆ ಮಲಗುವುದಿಲ್ಲ. ನಾನು ತುಂಬಾ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನೀಚತನ ಇರುವ ವ್ಯಕ್ತಿಯೂ ಕೂಡ ಬೇರೆ ಹೆಣ್ಣು ಮಗಳೂ ಕೂಡ ಅವಳು ನನ್ನ ಮಗಳು ಎನ್ನುವ ಭಾವನೆಯೂ ಕೂಡ ಎಲ್ಲಿಯವರೆಗೆ ಈ ಸಮಾಜದಲ್ಲಿ ಬರುವುದಿಲ್ಲವೋ, ಅಲ್ಲಿಯತನಕ ಈ ಹೆಣ್ಣಿಗೆ ಶೋಷಣೆಯೂ ನಡೆಯುತ್ತಿರುತ್ತದೆ.

ಅಧ್ಯಕ್ಷರು :— ಅದು ಬರದೇ ಇರುವುದೇ ನೀಚತನ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ.

ಡಾ : ಎಂ.ಪಿ. ಕರ್ಕಿ :— ಒಂದು ಹೆಣ್ಣು ತನಗೆ ಹೆಣ್ಣು ಮಗಳು ಹುಟ್ಟಿದಾಗ ಅಳುತ್ತಾಳೆ. ಏಕೆಂದು ಕೇಳಿದರೆ ಅವಳಿಗೆ ನೋವಾಗಿದೆ ಎಂದು ಹೇಳುವುದಿಲ್ಲ. ಹಣೆಬರಹವನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಮನೆಯಲ್ಲಿ ಬೈಯುತ್ತಾರೆ. ಒಂದು ಹುಡುಗಿ ಆದ ಮೇಲೆ ಮತ್ತೊಂದು ಹುಡುಗಿಯನ್ನು ಏಕೆ ಮಾಡಿದೆ ಎಂದು ಬೈಯುತ್ತಾರೆ ಎಂದು ಹೇಳುವಂತಹ

ಒಂದು ರೀತಿಯ ವಿಪರ್ಯಾಸದ ವ್ಯವಸ್ಥೆಯಾಗಿದೆ. ಇದು ಬರೀ ಹೆಂಗಸರಿಗೆ ತೊಂದರೆಯನ್ನು ಕೊಡುವಂತದ್ದಲ್ಲ, ಇದರಲ್ಲಿ ಮಾವ, ಗಂಡ ಮತ್ತು ಎಲ್ಲರೂ ಇದ್ದಾರೆ. ಈ ಸಮಾಜವು ಕೂಡ ಹಾಗೆಯೇ ಇದೆ.

ಅಧ್ಯಕ್ಷರು :— ಇದಕ್ಕೊಂದು ಬಹಳ ದೊಡ್ಡದಾದ ಇತಿಹಾಸವಿದೆ. ನಾನು ಪದೇಪದೇ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನಾವು ಮೊದಲು ಲಗ್ನ ಮಾಡುತ್ತಿದ್ದೆವು. ಕನ್ಯಾದಾನವನ್ನು ಮಾಡುವ ಹೊತ್ತಿಗೆ ಕನ್ಯೆಯ ಕಡೆಯವರು ಅವರ ಎಲ್ಲಾ ಸಂಬಂಧಿಕರು ಕಣ್ಣಿನಲ್ಲಿ ನೀರು ಹಾಕುತ್ತಿದ್ದರು. ಇಷ್ಟೊಂದು ಪ್ರೀತಿಯಿಂದ ನಿನ್ನನ್ನು ಬೆಳೆಸಿ, ಸಾಕಿ, ಎಲ್ಲಾ ನಾವು ಮಾಡಿದ್ದೇವೆ. ನಿನ್ನನ್ನು ಅವರ ಕೈಯಲ್ಲಿ ಇಡುತ್ತಿದ್ದೇವೆಂದು ಧಾರೆಯನ್ನು ಎರೆಯುವಾಗ ಅವರನ್ನು ಕೇಳಿಕೊಳ್ಳುವರು. ನನ್ನ ಮಗುವನ್ನು ನೀವು ಚೆನ್ನಾಗಿ ಕಾಪಾಡಿಕೊಂಡು ಹೋಗಬೇಕು ಎಂದು ಅವರನ್ನು ಕೇಳಿಕೊಳ್ಳುತ್ತಿದ್ದರು. ಈಗ ಆ ಭಾವನೆಗಳು ಹೊರಟುಹೋಗಿದೆ. ನಿನ್ನೆ ಈ ಸದನದಲ್ಲಿ ಒಬ್ಬ ಸದಸ್ಯರು ಹೇಳಿದರು 1 ಲಕ್ಷ, 2 ಲಕ್ಷವನ್ನು ಕಲ್ಯಾಣಮಂಟಪಕ್ಕೆ ಕೊಟ್ಟು, ಫ್ಲೋರಲ್ ಡೆಕೋರೇಷನ್ ಮಾಡಿ, ಅಡಿಗೆಯವರನ್ನು ಕರೆಯಿಸಿ, ಬ್ಯಾಂಡ್ ಬಾರಿಸಿ ಮದುವೆ ಮಾಡುತ್ತಿದ್ದರು. ಈ ಕಲ್ಚರಿಗೆ ನಾವು ಬಂದಿದ್ದೇವೆ. ಮ್ಯಾರೇಜ್‌ಗೆ ಸ್ಯಾಂಕ್ಟಿಟಿ ಎಲ್ಲಿದೆ. ಆ ರಿಲೇಷನ್‌ಶಿಫ್ ಎಲ್ಲಿದೆ, ಏಕೆ ಮೆಟರ್‌ನಲ್ ರಿಲೇಷನ್‌ಶಿಫ್‌ನಲ್ಲೇ ಹೆಚ್ಚು ಮದುವೆಗಳನ್ನು ನಮ್ಮವರು ಮಾಡುತ್ತಿದ್ದರು. please go back a little. ಸ್ವಲ್ಪ ಟೈಮ್ ತೆಗೆದುಕೊಂಡರೂ ಚಿಂತೆಯಿಲ್ಲ. Let us somehow try to find some solution for this.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಸನ್ಮಾನ್ಯ ಅಧ್ಯಕ್ಷರೆ, ಹೆಣ್ಣು ಹೆಣ್ಣಿಗೆ ಎಂದು ನಾನು ತಮಗೆ ಹೇಳಬೇಕು ಎಂದು The experience in my life, I have seen in my bare eyes. ನನ್ನ ಹತ್ತಿರ ಕೆಲವು ಜನರು ಬಂದು ನನಗೆ ಡೌರಿ ಬೇಕಿಲ್ಲ, ಮದುವೆ ಮಾಡಿಸಿಕೊಡಿ ಮೇಡಂ ಎಂದು ಹೇಳುತ್ತಾರೆ. ನಾವು ಗಂಡು ಮತ್ತು ಹೆಣ್ಣು ಇಬ್ಬರು ಒಪ್ಪಿದ್ದೇವೆ ಎಂದು ಹೇಳುತ್ತಾರೆ. ನಾಳೆ ನೀನು ಬಾ ರಿಜಿಸ್ಟರ್ ಮದುವೆ ಮಾಡಿಸೋಣ ಎಂದು ಹೇಳಿದರೆ ಅವನು ಮಾರನೇ ದಿವಸ ಬರುತ್ತಾನೆ. ಮೇಡಂ, ನನಗೇನೂ ಡೌರಿ ಬೇಕಾಗಿಲ್ಲ, ಆದರೆ ನಮ್ಮ ತಂದೆತಾಯಿಂದಿರು ಕೇಳುತ್ತಾರೆ. ನೀನು ವರದಕ್ಷಿಣೆಯನ್ನು ತೆಗೆದುಕೊಂಡು ಬರದಿದ್ದರೆ ನೀನು ಬೇರೆ ಮದುವೆ ಮಾಡಿಕೊಳ್ಳಬೇಕು ಎಂದು ಹೇಳುತ್ತಾರೆ. ನಾನು ಇವತ್ತು ಕೇಳುತ್ತೇವೆ, ಆ ಗಂಡಿಗೇನು ಹೃದಯವಿಲ್ಲವೇ? ಅವನು ಗಂಡಾಗಿದ್ದಾನೋ ಅಥವಾ ಇನ್ನೇನು ಅಂದುಕೊಂಡಿದ್ದಾನೆ. ಅಪ್ಪಅಮ್ಮಂದಿರು ಹೇಳಿದರು ಅದಕ್ಕೋಸ್ಕರ ನಾನು ಡೌರಿ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾನಲ್ಲಾ, ಅವನೆಂಥ ಗಂಡು ಎಂದು ನೀವೆಲ್ಲಾ ಪ್ರಶ್ನೆ ಮಾಡಬೇಕಲ್ಲವೇ? ಅವನಲ್ಲಿ ನಾನು ನನ್ನ ಹೆಂಡತಿಯನ್ನು ಸಾಕುತ್ತೇನೆಂಬ ಶಕ್ತಿ ಇದಿದ್ದರೆ ಆ ರೀತಿ ಅವನು ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ಈ ವಿಷಯವನ್ನು ತಾವು ಸುದೀರ್ಘವಾಗಿ ಪ್ರಶ್ನೆ ಮಾಡಬೇಕಾಗುತ್ತದೆ. ಮಾನ್ಯ

ಅಧ್ಯಕ್ಷರೇ, ತಾವು ಒಂದು ಮಾತನ್ನು ಹೇಳಿದ್ದೀರಿ. ಒಂದು ಕಾಲದಲ್ಲಿ ಕನ್ಯಾಶುಲ್ಕ ಎಂದು ಇತ್ತು. ಕನ್ನೆಯನ್ನು ಕೊಟ್ಟು ಶುಲ್ಕವನ್ನು ತೆಗೆದುಕೊಂಡು ಹೋಗುವಂತಹ ಕಾಲ ಈಗ ಬದಲಾವಣೆಯಾಗಿದೆ. ಮೆಹರ್ ಬಗ್ಗೆ ತಾವು ಹೇಳಿದ್ದೀರಿ. ಮಹಮದಿಯರ ಕಾಲದಲ್ಲೂ ಬಹಳ ಒಳ್ಳೆಯ ಕಾನೂನುಗಳಿತ್ತು. ಇಲ್ಲ ಎಂದು ನಾನು ಹೇಳುವುದಿಲ್ಲ. ಅವರು ಮೆಹರ್‌ನ್ನು ಕೊಡುತ್ತಾರೆ. ಆದರೆ ಡೈವರ್ಸ್ ಮಾಡಬೇಕಾಗದರೆ ಆ ಮೆಹರನ್ನು ನೀನು ತೆಗೆದುಕೊಂಡು ಹೋಗು ಎಂದು ಹೇಳುತ್ತಾರೆ. ಯಾವ ಕಾಲದಲ್ಲಿ ಯಾರು ಮೆಹರ್ ಕೊಟ್ಟಿದ್ದರು ಆ ಹಣ ಅವಳಿಗೆ ಜೀವನ ನಡೆಸುವುದಕ್ಕೆ ಸಾಕಾಗುತ್ತದೆಯೇ ಅಥವಾ ಇಲ್ಲವೇ ಎನ್ನುವುದನ್ನೂ ಸಹ ನಾವು ನೋಡಬೇಕಾಗುತ್ತದೆ. ಅದನ್ನು ಕೂಡ ನಾವು ಈ ಪರಿಮಿತಿಯಲ್ಲಿ ಯೋಚನೆ ಮಾಡಬೇಕಾಗುತ್ತದೆ. ನನ್ನ ಹತ್ತಿರ ಬಹಳ ಕೇಸುಗಳು ಇದರ ಬಗ್ಗೆ ಬಂದಿದೆ. ಇಷ್ಟೇ ಇಷ್ಟು ಮೆಹರ್ ನಮ್ಮದು ಆಗಿಹೋಯಿತು ಎಂದು ಹೇಳತಕ್ಕಂತಹ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ಈ ಮೆಹರ್‌ನಿಂದ ಅವಳ ಜೀವನ ಸಾಗಿಸುವುದಕ್ಕೆ ಸಾಕಾಗುತ್ತದೆಯೇ? It is high time ನಾವು ಇವತ್ತು ಯೋಚನೆ ಮಾಡಬೇಕಾಗುವಂತಹ ಪರಿಸ್ಥಿತಿ ಬಂದಿದೆ. ಹಲವಾರು ಮಹಿಳೆಯರು, ಅಲ್ಪಸಂಖ್ಯಾತ ಮಹಿಳೆಯರೂ ಕೂಡ ಇವತ್ತು ನನ್ನ ಹತ್ತಿರ ಬರುತ್ತಾರೆ. ಡೈವರ್ಸ್ ಎಂದು ಹೇಳಿ ತಲಾಖ್, ತಲಾಖ್ ಎಂದು ಮಾಡಿ ಅವರನ್ನು ಮನೆಗೆ ಕಳುಹಿಸುವಂತಹ ಪರಿಸ್ಥಿತಿಯಲ್ಲಿ ಅವಳಿಗೂ ಮತ್ತು ಅವಳ ಮಕ್ಕಳ ಗತಿಯೇನು ಎಂಬುದನ್ನು ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಆ ಹೆಣ್ಣಿನ ಜೀವನದ ಬಗ್ಗೆಯೂ ಕೂಡ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಅವಳು ಸಮಾಜದಲ್ಲಿ ಹೇಗೆ ಬದುಕಬೇಕು ಎಂದು ನಾವು ಯೋಚನೆ ಮಾಡಬೇಕಾಗಿದೆ. ಅದೇ ರೀತಿ ಕ್ರಿಶ್ಚಿಯನ್ಸ್ ಲಾನಲ್ಲಿಯೂ ಕೂಡ, ಕೇರಳದಲ್ಲಿ Adultery is the only ground ನಾಲ್ಕು ಗೋಡೆಯ ಮಧ್ಯೆ ನಡೆಯುವಂತಹ ಡೈವರ್ಸ್ ಒಂದೇ ಒಂದು ಗ್ರೌಂಡ್ಸನಲ್ಲಿ ಆಗುತ್ತಿರುವುದು ಡೈವರ್ಸ್ ಎಂದು ಹೇಳಿ ಕೇರಳದಲ್ಲಿ ಹೊಡೆದು ಹಾಕಿದರು. ಇವತ್ತೂ ಕೂಡ ಈ ಕರ್ನಾಟಕದಲ್ಲಿ ಏನೂ ಕೂಡ ಆಗಿಲ್ಲ. ಆ ಒಂದು ಪರಿಸ್ಥಿತಿಯಲ್ಲಿ ಕ್ರಿಶ್ಚಿಯನ್ ಮಹಿಳೆಯರು ಬರುತ್ತಾರೆ. ನನ್ನ ಗಂಡ ಇಂಥವರ ಜೊತೆಯಲ್ಲಿ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದಾನೆ ಎಂದು ಹೇಳಿದಾಗ ಅದನ್ನು ಪ್ರೂವ್ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದಾಗ, ನಾವು ಪ್ರೂವ್ ಮಾಡುವುದು ಹೇಗೆ ಮೇಡಂ 4 ಗಂಟೆಯಲ್ಲಿ ಯಾರು ಬಂದು ಹೇಳುತ್ತಾರೆ. ಇವತ್ತು ಅವರು ಡೈವರ್ಸ್‌ನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಹೀಗೆ ಅಖಂಡವಾಗಿ, ಸಮಗ್ರವಾಗಿ ಎಲ್ಲಾ ಮಹಿಳೆಯರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಆ ಮಹಿಳೆಗೆ ಆಗಿರುವಂತಹ ದುಃಖವನ್ನು ಸರಿಪಡಿಸುವುದು ಹೇಗೆ? ಗಂಡ ಕುಡಿದು ಮನೆಗೆ ಬಂದು ಹೆಂಡತಿಗೆ ಹೊಡೆದಾಗ ಅದನ್ನು ತಪ್ಪಿಸುವುದು ಹೇಗೆ ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. ನಾವು ಇದಕ್ಕೆ ಪರಿಹಾರವೇನು ಎಂಬುದನ್ನು ಕೇಳುತ್ತಿದ್ದೇವೆ. ಇದಕ್ಕೆ ಪರಿಹಾರವೇನು ಎಂದು ತಾವು ಹೇಳಿದ್ದೀರಿ. ನಿಮ್ಮ ಸರ್ಕಾರ ಪಾನ ನಿರೋಧವನ್ನು ಜಾರಿಗೆ ತರುತ್ತೇವೆಂದು

ಹೇಳಿದ್ದೀರಿ. ಅದನ್ನು ತೆಗೆದುಕೊಂಡು ಬಂದಿರಿ, ಏನೂ ಮಾಡಲಿಲ್ಲ. ಆ ವ್ಯಕ್ತಿ ಕುಡಿದು ಮನೆಗೆ ಬಂದು ಆ ಹೆಣ್ಣಿಗೆ ಹೊಡೆತ, ಬಡಿತ ಹಾಗೂ ಅವಳ ಮಾಂಗಲ್ಯಕ್ಕೂ ಕೂಡ ಧಕ್ಕೆ. ಆ ಮಾಂಗಲ್ಯವನ್ನು ತೆಗೆದುಕೊಂಡು ಹೋಗಿ ಮಾರಿ ನನಗೆ ಹಣ ಕೊಡು ಬಾ ಎಂದು ಹೇಳುತ್ತಾರೆ. ಇವತ್ತು ಮಧ್ಯಮ ವರ್ಗದ ಮಹಿಳೆಯರಿಗಿಂತ ಹೆಚ್ಚಾಗಿ ಕೆಳವರ್ಗದ ಮಹಿಳೆಯರೆಲ್ಲರೂ ದುಡಿಯುತ್ತಿದ್ದಾರೆ. ಅವರು ಬೆಳಿಗ್ಗೆಯಿಂದ ಸಾಯಂಕಾಲದ ತನಕ ದುಡಿದು ಮನೆಗೆ ಬಂದರೆ ಸಂಜೆ ಗಂಡನಾದವನು ಕುಡಿದು ಮನೆಗೆ ಬಂದು ಆ ಹಣವನ್ನು ಅವಳಿಂದ ಕಿತ್ತುಕೊಂಡು ಹೋಗುತ್ತಾನೆ. ಆ ಮಕ್ಕಳಿಗೆ ಗಂಜಿ ಕೂಡ ತರದೆ ಇರುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಈ ಮಹಿಳೆಯರ ಪರಿಸ್ಥಿತಿ ಏನಾಗಿದೆ, ಮಧ್ಯಮ ವರ್ಗಕ್ಕೆ ಸೇರಿದ ಮಹಿಳೆಯ ಪರಿಸ್ಥಿತಿ ಏನಾಗಿದೆ ಎನ್ನುವುದನ್ನೂ ಸಹ ನಾವು ನೋಡಬೇಕಾಗಿದೆ. ಈ ಅತ್ಯಾಚಾರ, ಅನಾಚಾರ ಹೇಗೆ ಮಾಡುತ್ತಿದ್ದಾರೆಂದು ತಾವು ನೋಡಬೇಕು. ಇವತ್ತು ಕೆನಡಾದಲ್ಲಿ ರೇಪ್ ಎನ್ನುವಂತಹ ಅಕ್ಷರವನ್ನು ತೆಗೆದುಹಾಕಿದ್ದಾರೆ. ಸೆಕ್ಸುಯಲ್ ಅಸಾಲ್ಟ್ ಎಂದು ಕರೆಯಿರಿ, ರೇಪ್ ಎಂದು ಕರೆಯಬೇಡಿ ಎಂದು ಹೇಳುತ್ತಾರೆ. ನಮ್ಮಲ್ಲಿಯೂ ಕೂಡ ಕಾನೂನು ಇದೆ. ಗಂಡ ಹೆಂಡತಿಯ ಮನಸ್ಸಿಗೆ ವಿರುದ್ಧ ಅವನೇನಾದರೂ ಇಂಟರ್‌ಕೋರ್ಸ್‌ನ್ನು ಕೇಳಿದರೆ ಇಟ್ ಇಸ್ ರೇಪ್ ಎಂದು ಹೇಳುತ್ತಾರೆ. ಮನಸ್ಸಿಗೆ ವಿರುದ್ಧವಾಗಿ ಮಾಡುವ ಹಾಗಿಲ್ಲ. ಆದರೆ ಎಷ್ಟು ಮಹಿಳೆಯರು ಇವತ್ತು ಕುಡಿದು ಬಂದ ಗಂಡನ ಕೈಯಲ್ಲಿ ಮನಸ್ಸಿಲ್ಲದೆ ಹೋರಾಟ ಮಾಡುತ್ತಿರುವುದನ್ನು ನಾವು ನೋಡುತ್ತಿಲ್ಲವೇ? ಇದೆಲ್ಲ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಯಾರು ನೋಡುತ್ತಾರೆ? ನಾವು ಇದರ ಬಗ್ಗೆ ಕಂಪ್ಲೆಂಟ್‌ನ್ನು ಕೊಟ್ಟರೆ ಪೊಲೀಸ್‌ನವರು ಏನಾದರು ಮಾಡುತ್ತಿದ್ದಾರಾ? ಇದರ ಬಗ್ಗೆ ಯಾವುದಾದರೂ ಕಂಪ್ಲೆಂಟ್ ರಿಜಿಸ್ಟರ್ ಆಗಿದೆಯೇ? ನಮಗೆ ಇದರ ಬಗ್ಗೆ ಸ್ಟ್ಯಾಟಿಸ್ಟಿಕ್ಸ್‌ನ್ನು ಕೊಡಿ ನಾವು ಅದನ್ನು ನೋಡೋಣ. ಈ ತರಹ ಎಷ್ಟು ಕಂಪ್ಲೆಂಟ್ ರಿಜಿಸ್ಟರ್ ಆಗಿದೆ? ಆ ಕಂಪ್ಲೆಂಟ್‌ಗಳು ರಿಜಿಸ್ಟರ್ ಆಗುವುದಿಲ್ಲ. ಇದು ನಡೆದುಕೊಂಡು ಬರುತ್ತಲೇ ಇದೆ. ಅವಳಿಗೆ ಇದರಿಂದ ಮುಕ್ತಿ ಇಲ್ಲ, ಈ ಪರಿಸ್ಥಿತಿಯಲ್ಲಿ ನಾವೆಲ್ಲರೂ ಇದ್ದೇವೆ. ಹಿಂದಿನ ಕಾಲದಲ್ಲಿ ನಮಗೆ ಮದುವೆ ಮಾಡಿ ಕಳುಹಿಸುವ ಕಾಲದಲ್ಲಿ ನಮಗೆ ಹೇಳುತ್ತಿದ್ದರು. ಸಂಬ್ರಾಜ್ಞಿ, ಶಶಿನೋಭವ ಸಂಬ್ರಾಜ್ಞೆ, ಶಶ್ಯಾಂಭವ, ನನಾಗರಿ ಸಂಬ್ರಾಜ್ಞೆಭವ, ಅತ್ತೆ ಮಾವಂದಿರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಮೈದುನನ್ನು ಮತ್ತು ನಾದಿನಿಯರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಭಾವ ಮೈದುನರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ನೀವು ಚೆನ್ನಾಗಿ ಇರು ಎಂದು ಹೇಳಿ ಆಶೀರ್ವಾದವನ್ನು ಮಾಡಿ ಕಳುಹಿಸಿಕೊಡುತ್ತಿದ್ದರು. ಇವತ್ತು ಏನಾಗಿದೆ ಎಂದು ಹೇಳಿದರೆ ನೋಡಿಕೊಳ್ಳಲು ಹೋಗುವಂತಹ ಮಹಿಳೆಯರಿಗೆ ಸಿಗುತ್ತಿರುವುದು ಈ ಕುಟುಂಬದವರಿಂದಲೇ ಅವಳ ಮೇಲೆ ಅತ್ಯಾಚಾರ, ಅವಳ ಕೊಲೆ, ಅವಳ ಮೇಲೆ ಸೀಮೆಎಣ್ಣೆಯನ್ನು ಹಾಕುವುದು, ಅವಳಿಗೆ ಪಾಯಿಸನ್ ಕುಡಿಸುವುದು, ಇವರನ್ನೂ unpaid servants ಎಂದು ಕರೆಯುತ್ತಾರೆ ಇವತ್ತು ಹೇಳುತ್ತಾರೆ. ಪೇಯ್ಡ್ ಸರ್ವೆಂಟ್ಸ್ ಇರಬಹುದು ಅಥವಾ ಅನ್‌ಪೇಯ್ಡ್ ಸರ್ವೆಂಟ್ಸ್ ಇರಬಹುದು. ಕೆಲಸವನ್ನು ಮಾಡಿದವರು ಮಾತ್ರ

ಕೆಲಸವದರ ಮನೆಯಲ್ಲ. ಗಂಡನಾದವನು ಕೆಲಸವನ್ನು ಮಾಡಿ ಸಂಪಾದನೆ ಮಾಡಿಕೊಂಡು ಮನೆಗೆ ತರುತ್ತಾನೆ. ಆದರೆ ಅದೇ ಸಮಯದಲ್ಲಿ ಮಹಿಳೆಯು ಮಕ್ಕಳನ್ನು ನೋಡಿಕೊಂಡು, ಮನೆಯ ಕೆಲಸವನ್ನು ಮಾಡಿಕೊಂಡು, ಆಕೆಯೂ ಕೂಡ She also contributes to the family. ಆದ್ದರಿಂದ ಅವಳು ಮನೆಯಲ್ಲಿ ಚಾಕರಿಯನ್ನು ಮಾಡತಕ್ಕಂತಹ ಹೆಣ್ಣಲ್ಲ ಎನ್ನುವಂತಹ ದೃಷ್ಟಿಕೋನದಿಂದ ನಾವು ನೋಡಬೇಕಾಗಿದೆ. ಈ ಒಂದು ದೃಷ್ಟಿಕೋನದಲ್ಲಿ ನಾವು ನೋಡಬೇಕಾದರೆ ಅವಳಿಗೂ ಒಂದು ಶಕ್ತಿ, ಮನಸ್ಸು ಇದೆ, ಅವಳ ಧಮನಿಯಲ್ಲಿ ಹರಿಯತಕ್ಕಂತಹ ರಕ್ತ ಕೂಡ, ಗಂಡಿನಲ್ಲಿ ಹರಿಯತಕ್ಕಂತಹ ರಕ್ತ, ಹೆಣ್ಣಿನಲ್ಲಿ ಹರಿಯತಕ್ಕಂತಹ ರಕ್ತ ಎರಡು ಒಂದೇ ಎನ್ನುವುದನ್ನು ನಾವು ಅರ್ಥಮಾಡಿಕೊಂಡು ಅವರ ಕಷ್ಟವನ್ನು ದೂರಮಾಡುವುದಕ್ಕೋಸ್ಕರ ನಾವು ಪ್ರಯತ್ನಪಡಬೇಕಾಗಿದೆ. ಈ ದಿಸೆಯಲ್ಲಿಯೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. ನನಗೆ ಬಹಳ ದುಃಖವಾಗುವ ವಿಷಯವೇನೆಂದರೆ ಗಂಡ ಹೆಂಡತಿಯರ ಮಧ್ಯದಲ್ಲಿ ಕೂಸು ಬಡವಾಯಿತು ಇದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಗಂಡನಾದವನು ಮನೆಗೆ ಬಂದು ಮಕ್ಕಳ ಎದುರಿನಲ್ಲಿ ಹೆಂಡತಿಗೆ ಹೊಡೆಯುವುದು. ಇದರಿಂದ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಇವತ್ತು ಕ್ರಿಮಿನಲ್ಸ್, ಚೈಲ್ಡ್ ವಿಕ್ಟೀಮ್ಸ್ ಮತ್ತು ರೋಡಿನಲ್ಲಿ ಓಡಾಡುವಂತಹ ಮಕ್ಕಳನ್ನು ನಾವು ಪರೀಕ್ಷೆ ಮಾಡಿದಾಗ, ಅವರು ಹೇಳುವಂತದ್ದು ನಾವು ತಂದೆತಾಯಿಂದಿರ ಜಗಳವನ್ನು ಮತ್ತು ಹೊಡೆದಾಟವನ್ನು ನಾವು ನೋಡಲಾರದೆ ಮನೆಯನ್ನು ಬಿಟ್ಟು ಬಂದಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಸ್ಟ್ರೇ ಚಿಲ್ಡ್ರನ್ಸ್ ಆ ಮಕ್ಕಳನ್ನು ಏನು ಮಾಡಬೇಕು ಎಂದು ನಾವು ನೋಡಬೇಕಾಗಿದೆ. ಇದು ಮಕ್ಕಳ ಮನಸ್ಸಿನ ಮೇಲಾಗುವ ಪರಿಣಾಮ, ಹೆಂಡತಿಗೆ ಸುಖವಿಲ್ಲ, ಮನೆಯಲ್ಲಿ ಶಾಂತಿಯಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಈ ಮಹಿಳೆಯರ ಬಗ್ಗೆ ಏನು ಗಮನವನ್ನು ಹರಿಸಬೇಕು. ಇದರ ಬಗ್ಗೆ ಏನು ಕಾನೂನನ್ನು ಮಾಡಬೇಕು ಎಂಬುದರ ಬಗ್ಗೆ ಒಂದು ಸಮಗ್ರವಾದ ಚಿಂತನೆಯಾಗಬೇಕು. ಈ ವಿಚಾರದಲ್ಲಿ ಎರಡು ಸದನದ ಜಾಯಿಂಟ್ ಸೆಲೆಕ್ಟ್ ಕಮಿಟಿಯಾಗಬೇಕು. ಈ ಕಮಿಟಿಯಲ್ಲಿ ಎಲ್ಲಾ ಅನುಭವಸ್ಥರ, ಸೋಷಿಯಾಲಿಜಿಸ್ಟ್ ಆಗಬಹುದು, ಲಾ ಕಾಲೇಜಿನ ಪ್ರಿನ್ಸಿಪಾಲ್ ಆಗಬಹುದು, ಅಡ್ವೋಕೇಟ್ ಜನರಲ್ ಆಗಬಹುದು, ಜಡ್ಜ್ ಮತ್ತು ಪೊಲೀಸ್ ಆಫೀಸರ್ ಆಗಬಹುದು. ಇವೆರಲ್ಲರೂ ಸೇರಿದಂತಹ ಒಂದು ಅಡ್ವೈಸರಿ ಕಮಿಟಿಯನ್ನು ತಾವು ಮಾಡಬೇಕು. ಆ ಅಡ್ವೈಸರಿ ಕಮಿಟಿಯಲ್ಲಿ ಕಾನೂನಿನಲ್ಲಿ ಯಾಯಾವ ಲೂಫ್‌ಹೋಲ್ಸ್‌ಗಳಿವೆ, ಹೆಣ್ಣುಮಕ್ಕಳಿಗೆ ಏನೇನು ಅನ್ಯಾಯವಾಗುತ್ತಿದೆ ಇವೆಲ್ಲವನ್ನೂ ಕೂಡ ಪರಾಮರ್ಶೆ ಮಾಡಿ ಅದನ್ನು ಹೇಗೆ ಸರಿಪಡಿಸಬೇಕೆಂಬುದರ ಬಗ್ಗೆ ಅವಕಾಶವನ್ನು ತಾವು ಕೊಡಬೇಕು. ಆ ಕಮಿಟಿಯ ವರದಿಯು ಆದಷ್ಟು ಬೇಗ ಬರುವಂತೆ ಮಾಡಬೇಕು. ಎಲ್ಲಾ ದೇಶಗಳಲ್ಲಿ ಈ ಸಂಬಂಧವಾಗಿ ಏನೇನು ಕಾನೂನುಗಳಿವೆ, ಅದನ್ನು ತರಿಸಿ ನೋಡಬೇಕು. ಈ ಹೆಣ್ಣುಮಕ್ಕಳಿಗೆ ಬಂದಿರುವಂತಹ ಪರಿಸ್ಥಿತಿಯನ್ನು ಸುಧಾರಣೆ ಮಾಡಿ ಹೆಣ್ಣುಮಗಳು ನಿರಾತಂಕವಾಗಿ ಮನೆಯಲ್ಲಿ ಜೀವನ ಮಾಡಿ, ರಸ್ತೆಯಲ್ಲಿ ನಿರಾಂತಕವಾಗಿ ಓಡಾಡುವುದಕ್ಕೆ ಅವಕಾಶವನ್ನು

ಕಲ್ಪಿಸಿಕೊಡುವುದಕ್ಕೆ ತಾವು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ನಾವು ಆಳವಾಗಿ ಚಿಂತನೆಯನ್ನು ಮಾಡಬೇಕು. ಅದರ ಬಗ್ಗೆಯೂ ತಾವು ಯೋಚನೆ ಮಾಡಬೇಕೆಂಬುದು ನನ್ನ ಅನಿಸಿಕೆಯಾಗಿದೆ.

11.50 ಎ.ಎಂ.

ಈ ಸಂದರ್ಭದಲ್ಲಿ ನನಗೆ ತಿಳಿದ ವಿಚಾರ ಹೇಳುತ್ತೇನೆ. ತಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಒಬ್ಬರು ಮಂತ್ರಿಯನ್ನು ಮಾಡಿದ್ದೀರಿ. ಬೇರೆ ಕಡೆ ಸಹ ಇದೇ ರೀತಿ ಮಾಡಿದ್ದಾರೆ. ಹ್ಯೂಮನ್ ರಿಸೋರ್ಸ್ ಡಿಪಾರ್ಟ್‌ಮೆಂಟ್ ಎಂದು ಇಲ್ಲಿ ಮತ್ತು ಬೇರೆ ಕಡೆ ಮಾಡಿದ್ದಾರೆ. ನಮ್ಮಲ್ಲೂ ಸಹ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೋಸ್ಕರ ಒಬ್ಬರು ಮಂತ್ರಿ ಮಾಡಿದ್ದೀರಿ. ಆದರೆ ಅವರಿಗೆ ಅಧಿಕಾರ ಏನು ಕೊಟ್ಟಿದ್ದೀರಿ? ಹೆಸರಿಗೆ ಮಾತ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ. ಆ ಹೆಸರಿಗೊಬ್ಬರು ಮಂತ್ರಿ. ಅಧಿಕಾರ ಮಾತ್ರ ನನಗಂತೂ ಖಂಡಿತಾ ಏನೂ ಕಂಡಿಲ್ಲ. ಮಕ್ಕಳಿಗೆ ಯಾವುದಾದರೂ ರೀತಿಯಲ್ಲಿ ಆಹಾರ ಕೊಡತಕ್ಕದ್ದು ಮಾಡಿದ್ದೀರಾ? ಒಳ್ಳೆಯ ಆಹಾರವನ್ನು ಮಕ್ಕಳಿಗೆ ಕೊಡೋಣವೆಂದರೆ ಅದನ್ನು ತೆಗೆದುಕೊಂಡು ಹೋಗಿ ಜಿಲ್ಲಾ ಪಂಚಾಯಿತಿಗಳಿಗೆ ಕೊಟ್ಟಿದ್ದೀರಿ. ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಏನಾದರೂ ಮಹಿಳೆಯರಿಗೆ ನೋಡೋಣವೆಂದರೆ, ಅವರಿಗಾಗಿ ಇರತಕ್ಕ ಹಣವನ್ನು ಮಹನೀಯರಿಗೆ ಕೊಡಲಿಕ್ಕೆ ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿದ್ದೀರಿ. ಯಾವುದೇ ಒಂದು ಹಣವನ್ನು ಈ ಕೈಯಲ್ಲಿ ಕೊಟ್ಟು ಬೇರೆ ಕಡೆ ಯಥಾಪ್ರಕಾರ ಮಹನೀಯರು ಹಣವನ್ನು ಉಪಯೋಗ ಮಾಡಿಕೊಂಡು ಗರ್ಭಿಣಿ ಸ್ತ್ರೀಯರಿಗೆ ಬರಬೇಕಾದ ಹಣವನ್ನು ಕೂಡ ವಿನಿಯೋಗವಾಗದಂತೆ ತಾವು ಮಾಡಿದ್ದೀರಿ. ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇಂತಹದ್ದಕ್ಕೆ ನಮಗೆ ಮಂತ್ರಿಗಳೊಬ್ಬರು ಬೇಕಾ? ನಿಮಗೆ ನಿಜವಾಗಿಯೂ ಮನಸ್ಸಿದ್ದರೆ ಈಗಿರತಕ್ಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳಿಗೆ ಏನಾದರೂ ಮಾಡಬೇಕೆಂದು ಮನಸ್ಸು ಇದೆ, ಆದರೆ ಅವರಿಗೆ ಮಾಡುವುದಕ್ಕೆ ದಾರಿಯಿಲ್ಲ. ಕೈಕಾಲು ಕಟ್ಟಿಹಾಕಿ ಹೆಸರಿಗೆ ಮಾತ್ರ ಮಂತ್ರಿ ಮಾಡಿದ್ದೀರಿ. ಅವರ ಎಲ್ಲ ಹಕ್ಕುಗಳನ್ನು ಹರಿದು ಹಂಚಿ ವಿಕೇಂದ್ರೀಕರಣ ಅಲ್ಲ, ಛಿದ್ರೀಕರಣ ಮಾಡಿದ್ದೀರಿ. ನೀವು ವಿಕೇಂದ್ರೀಕರಣದ ಹೆಸರಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳನ್ನು ಛಿದ್ರೀಕರಣ ಮಾಡಿ ಬೇರೆ ಬೇರೆಯವರಿಗೆ ಕೊಟ್ಟಿರತಕ್ಕ ಸಂದರ್ಭದಲ್ಲಿ ಹೆಸರಿಗೆ ಮಾತ್ರ ಮಂತ್ರಿ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಬಾಲಭವನ ಎಂದು ಮಾಡಿದ್ದೀರಿ. ಮಕ್ಕಳ ಕಲ್ಯಾಣಕ್ಕೋಸ್ಕರ ಬಾಲಭವನ ಎಂದು ಮಾಡಿ ಅದಕ್ಕೆ ಒಬ್ಬರು ಛೇರ್ಮನ್ ಮಾಡಿದ್ದೀರಿ. ಬಾಲಭವನಕ್ಕೆ ಕೊಟ್ಟಿರತಕ್ಕ ಹಣವೆಷ್ಟು? 40 ಲಕ್ಷ ರೂಪಾಯಿ ಹಣ. ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಮಕ್ಕಳ ಏಳಿಗೆಗಾಗಿ ಕೊಟ್ಟಿರತಕ್ಕ ಹಣ 40 ಲಕ್ಷ. ಕೊಟ್ಟಿರುವ 20 ಲಕ್ಷದಲ್ಲಿ ಸಂಬಳ ಸಾರಿಗೆ ಕೊಡಬೇಕು. 40 ಲಕ್ಷದಲ್ಲಿ ಇವತ್ತು ಇನ್ನೂ 20 ಲಕ್ಷ ಕೊಟ್ಟಿಲ್ಲ. ನಾನು ಕೇಳುತ್ತೇನೆ, ಮಕ್ಕಳ ಕಲ್ಯಾಣ

ಹೇಗೆ ಆಗುತ್ತದೆ? ಮಹಿಳೆಯರ ಕಲ್ಯಾಣ ಹೇಗೆ ಆಗುತ್ತದೆ? ಈ ತರಹ ನಾವು ಮಹಿಳೆಯರಿಗೆ ಒಂದು ನೆಪ ಮಾಡಿ ಅವರಿಗೊಂದು ಅಧ್ಯಕ್ಷಸ್ಥಾನ ಕೊಟ್ಟು ಮಹಿಳೆಯರಿಗೆ ಒಂದು ಮಂತ್ರಿಸ್ಥಾನ ಕೊಟ್ಟು ಯಾವುದೇ ವಿಧವಾದ ಅಧಿಕಾರಿಗಳು ಇಲ್ಲ. ಹೆಸರಿಗೆ ಮಾತ್ರ ಮಹಿಳೆ, ಆದರೆ ಆಗತಕ್ಕ ಕೆಲಸ ಮಹನೀಯರದ್ದು. ಈ ರೀತಿಯ ಕೆಲಸಗಳಾದರೆ ಎಲ್ಲೂ ಕೂಡ ಮಹಿಳೆಯರ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ನಿಮಗೆ ಮನಸ್ಸಿದ್ದರೆ ಮಹಿಳೆಯರ ಏಳಿಗೆಯಾಗಬೇಕು, ಮಹಿಳೆಯರು ಕಷ್ಟ ಸಂಕೋಲೆಗಳಿಂದ ಬಿಡುಗಡೆಯಾಗಬೇಕೆಂದು ಏನಾದರೂ ತಮ್ಮ ಮನಸ್ಸಿನಲ್ಲಿ ಇದ್ದಿದ್ದೇಯಾದರೆ ತಾವು ಯೋಚನೆ ಮಾಡಬೇಕು. ಇವತ್ತು ಸೆಂಟ್ರಲ್ ಜೈಲ್ ಇದೆ. ಅಲ್ಲಿಗೆ ಹಿಂದೆ ನಾನೂ ಕೂಡ ಹೋಗಿದ್ದೇನೆ. ಗರ್ಭಿಣಿ ಮಹಿಳೆಯರನ್ನು ಅಲ್ಲಿಟ್ಟಿದ್ದಾರೆ. ಹೆರಿಗೆಯಾದ ಮೇಲೆ ಆ ಮಗು ಏನು ಅಪರಾಧ ಮಾಡಿತ್ತು? ಹೆರಿಗೆಯಾದ ಮೇಲೆ ಆ ಮಗುವನ್ನು ಅಲ್ಲಿಯೇ ಇಡುತ್ತಾರೆ. ಆ ಮಗುವಿಗೆ ಏನಾದರೂ ಜೈಲಿನಲ್ಲಿರಬೇಕೆಂದು ಶಿಕ್ಷೆಯಾಗಿದೆಯೆ? ಅದನ್ನು ನಾವೆಲ್ಲಾ ಯೋಚನೆ ಮಾಡಬೇಕಲ್ಲಾ. ಆ ಮಗುವಿಗೆ ಏನಾದರೂ ಶಿಕ್ಷೆಯನ್ನು ಕೋರ್ಟ್‌ನಲ್ಲಿ ಕೊಟ್ಟಿದ್ದಾರೆಯೆ? ನೀವು ಗರ್ಭಿಣಿ ಮಹಿಳೆಯನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕುತ್ತೀರಿ. ಬೇರೆ ಬೇರೆ ದೇಶಗಳಲ್ಲಿ ಗರ್ಭಿಣಿ ಮಹಿಳೆಯರಿಗೆ ಜೈಲಿನಲ್ಲಿ ಹಾಕುವಂತಹ ಪರಿಸ್ಥಿತಿ ಇಲ್ಲ. ಅವರಿಗೆ ಸ್ಪೆಷಲ್ ಟ್ರೀಟ್‌ಮೆಂಟ್ ಕೊಟ್ಟು ಹೆರಿಗೆ ಆಗುವವರೆಗೆ ನೋಡಿಕೊಂಡು ಆ ಮಗುವಿಗೆ ಒಳ್ಳೆಯ ಸ್ಥಾನವನ್ನು ಕಲ್ಪಿಸಿಕೊಂಟ್ಟು ಆ ಮಗುವನ್ನು ನೋಡಿಕೊಳ್ಳುವಂತಹ ವ್ಯವಸ್ಥೆ ಮಾಡುತ್ತಾರೆ. ಇವತ್ತು ಸೆಂಟ್ರಲ್ ಜೈಲಿನಲ್ಲಿ ಯಾವ ಪರಿಸ್ಥಿತಿ ಇದೆಯೋ ನನಗೆ ಗೊತ್ತಿಲ್ಲ. ನಾನು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ನೋಡಿದಾಗ ಆ ಮಕ್ಕಳೂ ಕೂಡ ತಾಯಿಯ ಜೊತೆ ಅಲ್ಲೆ ಜೈಲಿನಲ್ಲಿ ಆ ವಾತಾವರಣದಲ್ಲಿ ಬೆಳೆಯುತ್ತಿರತಕ್ಕದ್ದನ್ನು ನೋಡಿದಾಗ, ಮಹಿಳೆಯರ ಕಲ್ಯಾಣ ಮತ್ತು ಮಕ್ಕಳ ಕಲ್ಯಾಣ ಇದು ಹೇಗೆ ಆಗುತ್ತದೆ ಎನ್ನುವುದನ್ನು ನಾವು ಇವತ್ತು ಯೋಚನೆ ಮಾಡಬೇಕು. ಇವತ್ತು ಮನೆಯಲ್ಲಿ ಸಂಬಳ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ, ಪ್ರತಿಯೊಬ್ಬರಿಗೂ ರೈಟ್ ಟು ಲೈಫ್ ಇವತ್ತು ರೈಟ್ ಟು ಡಿಗ್ನಿಟಿ, ರೈಟ್ ಟು ಲೈಫ್ ಎಂದು ಏನು ಹೇಳುತ್ತಾರೆ ಜೀವಿಸುವ ಹಕ್ಕು ಈವೊಂದು ಒಳ್ಳೆಯ ವಾತಾವರಣದಲ್ಲಿ ಜೀವಿಸುವಂತಹ ಹಕ್ಕು ಬದುಕುವ ಹಕ್ಕು ಇದು ರೈಟು ಟು ಲೈಫ್ ಎನ್ನತಕ್ಕದ್ದನ್ನು ನಾವು ಸಂವಿಧಾನದಲ್ಲಿ ನೋಡಿದ್ದೇವೆ. ಇದು ಆಗಬೇಕಾಗಿದೆ. ಮತ್ತೊಂದು ದುಃಖವಾದ ವಿಚಾರ ಅದನ್ನು ಹೇಳಬೇಕಾಗಿದೆ. ಇದು ವಿದೇಶಗಳಲ್ಲಿ ಮತ್ತು ಇಲ್ಲಿಯೂ ಕೂಡ ಬಂದಿದೆ. ತಮಿಳುನಾಡಿನಲ್ಲಿ ಹೆಚ್ಚಾಗಿ ಆಗುತ್ತಿದೆಯೆಂದು ಕೇಳಿದ್ದೇನೆ. ಹುಟ್ಟಿದ ಮಗುವಿಗೆ, ಹೆಣ್ಣುಮಗು ಹುಟ್ಟಿದ ಮಗುವಿಗೆ ಅದಕ್ಕೆ ಸರ್ಕಂಸೇಶನ್. ನಾನೂ ಕೂಡ ಕೇಳಿರಲಿಲ್ಲ, ಕೇಳಿ ಬಹಳ ದುಃಖವಾಯಿತು. ಹೆಣ್ಣುಮಗುವಿಗೆ circumcision ಈ ರೀತಿಯ ಪರಿಸ್ಥಿತಿ. ಹುಟ್ಟಿದ ಹೆಣ್ಣುಮಕ್ಕಳನ್ನು ಇವತ್ತು ಮಾರಾಟ ಮಾಡುತ್ತಿದ್ದಾರೆ. ಕಂಪಲ್ಸ್ಡ್ ಪ್ರಾಸ್ಟಿಟ್ಯೂಷನ್ ಅವರನ್ನು ಅಲ್ಲಿಗೆ ಕಳುಹಿಸತಕ್ಕ ವ್ಯವಸ್ಥಿತ ರೀತಿ. ಹೋಗುವುದು ಬೇರೆ ಮಾಡುವುದು ಬೇರೆ. ಆ ರೀತಿಯಾಗತಕ್ಕ ಪರಿಸ್ಥಿತಿಯಲ್ಲಿ ನಾವು ಮಹಿಳೆಯರು

ಬದುಕಿ ಯಾವ ರೀತಿ ಬಾಳಬೇಕು. ಅದನ್ನು ತಾವು ಹೇಳಬೇಕಾಗಿದೆ. ಇದು ಬಹಳ ದುಃಖವಾಗುತ್ತಿದೆ. ಕಾರ್ಮಿಕ ಮಹಿಳೆಯರಿಗೆ ಅಲ್ಲಿ ಹೋದರೆ ಹೆಚ್ಚು ಹೆಚ್ಚು ಹಿಂಸೆ. ಅದೂ ಕೂಡ ಪರಿಸ್ಥಿತಿಗಳನ್ನು ನೋಡಿದ್ದೇವೆ. ಇನ್‌ಸ್ಟೆನ್ಸ್‌ಗಳನ್ನು ನೋಡಿದ್ದೇವೆ. ಅಮೇರಿಕಾದಲ್ಲಿ ಇಂಡಿಯಾದಿಂದ ಹೋದಂತಹ ಒಂದು ಕುಟುಂಬದ ಮೇಲೆ ಯಾವರೀತಿ ಆಯಿತು? ಕೌರ್ ಅನ್ನತಕ್ಕ ಕುಟುಂಬ. 14 ಜನರ ಕೊಲೆ ಹೇಗಾಯಿತು ಅದನ್ನು ನೋಡಿದ್ದೇವೆ. ಅದೇ ರೀತಿ ಅಂಜನಾಮಿಶ್ರ ಅವರ ಮೇಲೆ ನಡೆದ ಕೃತ್ಯಗಳನ್ನು ನಾವು ನೋಡುತ್ತಿದ್ದೇವೆ. ಯಾವರೀತಿ ಪರಿಸ್ಥಿತಿ ಇದೆಯೆಂದರೆ, ಇದಕ್ಕೆ ಕೊನೆ ಇದೆಯೇ ಇಲ್ಲವೇ, ಅದು ನನಗೂ ಗೊತ್ತಿದೆ ಇದಕ್ಕೆ ಕೊನೆ ಇರುವುದಕ್ಕೆ ಸಾಧ್ಯವಿಲ್ಲ. ತಕ್ಷಣ ನಾವು ಏನಾದರೂ ಮಾರ್ಪಾಟು ಮಾಡುತ್ತೇವೆಂದರೆ, ನಾವು ಅಂದುಕೊಂಡಹಾಗೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಅದನ್ನು ಮಾಡುವುದಕ್ಕೆ ಸಾಧ್ಯವೂ ಇಲ್ಲ. ಆದರೂ ಸಹ ನಾವೆಲ್ಲರೂ ಮನಸ್ಸು ಮಾಡಿದರೆ ಎಲ್ಲರ ಮನಸ್ಸನ್ನು ಪರಿವರ್ತನೆ ಮಾಡತಕ್ಕ ಕೆಲಸವನ್ನು ಮಾಡಿದರೆ Attitude of Man towards Women ಏನಿರಬೇಕೆನ್ನುವುದನ್ನು ಭಾವನೆಗಳನ್ನು ಮಾಡಿಕೊಳ್ಳುತ್ತಾ ಹೋಯಿತು ಅಂದರೆ, ಯೂನಿವರ್ಸಿಟಿಗಳಲ್ಲಿ ಕಾಲೇಜುಗಳಲ್ಲಿ, ವರ್ಕ್ಸ್‌ಪ್ಲೇಸ್‌ಗಳಲ್ಲಿ, ಕ್ಯಾಂಟೀನ್‌ಗಳಲ್ಲಿ, ಹೋಟೆಲ್‌ಗಳಲ್ಲಿ, ವಿಧಾನಸೌಧದಲ್ಲಿ ಎಲ್ಲಾ ಕಡೆ ಕೆಲಸ ಮಾಡತಕ್ಕ ಸಂದರ್ಭಗಳಲ್ಲಿ ಈವೊಂದು ಸಂದೇಶವನ್ನು ಅವರಿಗೆ ನೀಡಿ ಡೊಮ್ಯಾಸ್ಟಿಕ್ ವಯಲೆನ್ಸ್ ಹೆಣ್ಣುಮಕ್ಕಳಿಗೆ ಮಾಡತಕ್ಕ ವಯಲೆನ್ಸ್ ಇದು ಆಗಬಾರದು ಆದರೆ ಇಂತಹ ಪನಿಷ್‌ಮೆಂಟ್ ಇದೆ ಎನ್ನತಕ್ಕ ಸಂದೇಶವನ್ನು ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ಹೇಳುತ್ತಾ ಹೋಯಿತು ಅಂದರೆ ಮನಸ್ಸಿನ ಮೇಲೆ ಪರಿಣಾಮವಾಗಿ ಮಕ್ಕಳ ಮನಸ್ಸಿನ ಮೇಲೆ ಪರಿಣಾಮವಾಗಿ ಇದರ ಬಗ್ಗೆ ಪರಿಣಾಮಕಾರಿಯಾಗಿ ಇದರ ಬಗ್ಗೆ ಚಿಂತಿಸಬಹುದೇ ಹೊರತು ಈ ರೀತಿ ಏನಾದರೂ ಮಾಡುತ್ತೇವೆಂದರೆ ಕಾನೂನಿನ ಮುಖಾಂತರವೇ ಮಾಡುತ್ತೇವೆ ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದರೆ ಅದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ನಾನಾದರೂ ಕೂಡ ಈ ಸಂದರ್ಭದಲ್ಲಿ ಯೂನಿವರ್ಸಿಟಿ, ವಿದೇಶಗಳಲ್ಲಿ ಅಮೇರಿಕಾದಲ್ಲಿ ಮತ್ತು ಬೇರೆ ಕಡೆಗಳಲ್ಲಿ ಎಲ್ಲರಿಗೂ ಕೂಡ ಕರೆ ಕೊಟ್ಟು ಅವರು ಮತ್ತೊಂದು ಮುಖ್ಯವಾದ ಕೆಲಸವನ್ನು ಮಾಡಿದರು. ಈ ಕಾನೂನನ್ನು ತರುವುದಕ್ಕೆ ಮುಂಚೆ ಎಲ್ಲಾ ರಿಲಿಜಿಯಸ್ ಹೆಡ್ಸ್ ಧರ್ಮಾಧಿಕಾರಿಗಳನ್ನು ಕರೆದು ಅವರಿಗೂ ಕೂಡ ಈ ಸಂದೇಶವನ್ನು ಕೊಟ್ಟರು. ನಿಮ್ಮ ನಿಮ್ಮ ಚರ್ಚಗಳಲ್ಲಿ ಮಸೀದಿಗಳಲ್ಲಿ ದೇವಸ್ಥಾನಗಳಲ್ಲಿ, ಗುರುದ್ವಾರಗಳಲ್ಲಿ ಎಲ್ಲಾ ಕಡೆ ಇದರ ಬಗ್ಗೆ ಪರಿಣಾಮಕಾರಿಯಾದ ಚಿಂತನೆಯಾಗಬೇಕೆಂದು ಹೇಳಿ ಇದರ ಬಗ್ಗೆ ಸಂದೇಶ ನೀಡಬೇಕೆಂದು ಹೇಳಿ ಇದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿ ಒಂದು ಕಮಿಟಿಯಲ್ಲಿ ರಿಲಿಜಿಯಸ್ ಹೆಡ್ಸ್‌ಗಳ ಒಪೀನಿಯನ್ ತೆಗೆದುಕೊಂಡರು. ನಾನಾದರೂ ಸಹ ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದು ಧರ್ಮಾಧಿಕಾರಿಗಳು ಸಮಾಜದಲ್ಲಿರತಕ್ಕ ಆಗುಹೋಗುಗಳ ಬಗ್ಗೆ ಚಿಂತನೆ ಮಾಡತಕ್ಕ ಧರ್ಮಾಧಿಕಾರಿಗಳು ಇದರ ಬಗ್ಗೆ ಚಿಂತನೆ ಮಾಡಿದರೆ ಹೆಣ್ಣುಮಕ್ಕಳ ಮೇಲೆ ಆಗತಕ್ಕ ವೈಮನಸ್ಸುಗಳನ್ನು ಪರಿಹಾರ ಮಾಡುವುದರಲ್ಲಿ

ಅವರ ಕೃಪೆ ಬಹಳ ಜಾಸ್ತಿಯಿರುತ್ತದೆ. ಅವರು ಹೇಳುವ ಮಾತುಗಳನ್ನು ಜನರು ಕೇಳುವಂತಹ ಪರಿಸ್ಥಿತಿಯಲ್ಲಿದ್ದಾರೆ. ಆದುದರಿಂದ ಎಲ್ಲಾ ಧರ್ಮದರ್ಶಿಗಳನ್ನು ಈ ಸಂದರ್ಭದಲ್ಲಿ ಒಂದು ಕಡೆ ಕರೆಸಿ ಅವರಿಗೂ ಕೂಡ ಈ ಸಂದೇಶವನ್ನು ನೀಡಿ ಅವರ ಪಾಲನ್ನೂ ಕೂಡ ತೆಗೆದುಕೊಂಡು ಇದಕ್ಕೆ ಏನು ಮಾಡಬೇಕೆನ್ನುವುದರ ಬಗ್ಗೆ ತಾವೂ ಕೂಡ ಯೋಚನೆ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ಇಂಡಿಯನ್ ಕ್ರಿಮಿನಲ್ ಪ್ರೊಸೀಜರ್ ಕೋಡ್ 125. ನಾವು ಇದನ್ನು ಕೇಳುತ್ತಿದ್ದೇವೆ. ಮೆಂಟೇನೆನ್ಸ್ ಮಾಕ್ಸಿಮಮ್ ಫೀ ಫಾರ್ ವುಮೆನ್ 500 ರೂಪಾಯಿಗಳನ್ನು ನಾವು ಕೇಳುತ್ತಿದ್ದೇವೆ. ಕರ್ನಾಟಕದಲ್ಲಿ ಅಮೆಂಡ್‌ಮೆಂಟ್ ಮಾಡುವುದಕ್ಕೆ ನಮಗೆ ಪವರ್ ಇದೆ. ಕಳೆದ ಹತ್ತು ವರ್ಷಗಳಿಂದ ಎಲ್ಲಾ ಅಮೆಂಡ್‌ಮೆಂಟ್ಸ್‌ಗಳನ್ನು ಮಾಡಬೇಕೆಂದು ಕೇಳುತ್ತಿದ್ದೇವೆ. ಫ್ಯಾಮಿಲಿ ಕೋರ್ಟ್, ಕುಟುಂಬ ಕಲ್ಯಾಣ ಯೋಜನೆಗಳು ಯಾವುದೂ ಕೂಡ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಯಾವ ರೀತಿ ಆ ಕೋರ್ಟ್‌ಗಳು ಇರಬೇಕೆಂದು ಕೂಡ ನೋಡುತ್ತಿಲ್ಲ. ಫ್ಯಾಮಿಲಿ ಕೋರ್ಟ್‌ಗಳಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬೇಕಲ್ಲಾ. ಆ ಕೋರ್ಟನ್ನು ಶಿಫ್ಟ್ ಮಾಡಿಬಿಟ್ಟಿದ್ದಾರೆ. 5ನೇ ಫ್ಲೋರ್‌ಗೆ ಫ್ಯಾಮಿಲಿ ಕೋರ್ಟನ್ನು ತೆಗೆದುಕೊಂಡು ಹೋಗಿ ಹಾಕಿದ್ದಾರೆ. ಅಚೆ ಕಡೆ ಕುಳಿತುಕೊಳ್ಳುವುದಕ್ಕೆ ಬೆಂಚ್ ಇಲ್ಲ. ಗಂಡ ಹೆಂಡತಿ ಅಲ್ಲಿ ಬಂದು ಜಗಳವಾಡಿದರೆ ಅವರನ್ನು ನಿಭಾಯಿಸತಕ್ಕ ಶಕ್ತಿಯಿಲ್ಲ. ಇಂತಹ ಪರಿಸ್ಥಿತಿಯಿದೆ, ಇದನ್ನೂ ಕೂಡ ನಾವು ಸರಿ ಮಾಡಬೇಕಲ್ಲ. ಕುಟುಂಬ ನ್ಯಾಯಾಲಯಗಳು, ಪೋಲೀಸ್ ಅಧಿಕಾರಿಗಳು, ಇನ್‌ವೆಸ್ಟಿಗೇಟಿಂಗ್ ಆಫೀಸರ್ಸ್ ಇವರು ಹೇಗಿರಬೇಕೆಂಬುದನ್ನೂ ಕೂಡ ಚಿಂತನೆ ಮಾಡಬೇಕು. ಇನ್‌ಕ್ವೆಸ್ಟ್ ಹೇಗೆ ಮಾಡಬೇಕು ಎಲ್ಲಿ ಮಾಡಬೇಕು, ಹೇಗೆ ಮಾಡಬೇಕು ಅದರ ಬಗ್ಗೆ ಚಿಂತನೆಯಾಗಬೇಕು. ಪೋಸ್ಟ್ ಮಾರ್ಟಂ ಮಾಡುವಾಗ ತಪ್ಪು ಬರೆಯುತ್ತಾರಲ್ಲಾ ಅದನ್ನು ಹೇಗೆ ತಿದ್ದಬೇಕು ಅದರ ಬಗ್ಗೆ ಚಿಂತನೆಯಾಗಬೇಕು. ನನಗೆ ಗೊತ್ತಿದೆ ನಾನು ಯಾರ ಮೇಲೂ ಕಂಪ್ಲೈಂಟ್ ಮಾಡಬೇಕೆಂದು ಹೇಳುತ್ತಿಲ್ಲ. ಡಾಕ್ಟರುಗಳು ಯಾವರೀತಿ ಪೋಸ್ಟ್‌ಮಾರ್ಟಂ ಮಾಡುತ್ತಿದ್ದಾರೆ ಯಾವರೀತಿ ರಿಪೋರ್ಟ್ ಕೊಡುತ್ತಾರೆ ಡೆತ್ ಡ್ಯು ಟು ಶಾಕ್; ಡೆತ್ ಡ್ಯು ಟು ಬರ್ನಿಂಗ್ ಅಲ್ಲ; ಡೆತ್ ಡ್ಯು ಟು ಶಾಕ್. ನಾನು ಅದನ್ನು ನೋಡಿದ್ದೇನೆ ಅದಕ್ಕಾಗಿ ಹೇಳುತ್ತೇನೆ. ಅದರ ಬಗ್ಗೆ ಅಸಿಫಿಕ್ಸಿಯಾ ಡ್ಯು ಟು ವಾಟ್ ಬರೆಯುವುದಿಲ್ಲ. ಡೆತ್ ಡ್ಯು ಟು ಶಾಕ್ ಅಷ್ಟೇ ಬರೆಯುತ್ತಾರೆ. ಡೆತ್ ಡ್ಯು ಟು ವಾಟ್ ಬರೆಯಬೇಕಲ್ಲಾ, ನಾನು ಹೇಳುತ್ತಿದ್ದೇನೆ. ಡೆತ್ ಡ್ಯು ಟು ವಾಟ್ ಎಂದು ಬರೆದರೆ ಗೊತ್ತಾಗುತ್ತದೆ.

MR. SPEAKER :— Iam sorry, my attention was elsewhere. ನನ್ನ ಗಮನ ಬೇರೆ ಕಡೆ ಇತ್ತು ಡಾಕ್ಟರ್ ಕರ್ಕೆಯವರು ಏನೋ ಹೇಳಿದರು.

ಶ್ರೀಮತಿ ಪ್ರಮೀಳಾನೇಸರ್ಗಿ :— ಪೋಸ್ಟ್‌ಮಾರ್ಟಂ ಆಗಬೇಕಾದರೆ, ಡೆತ್ ಡ್ಯು ಟು ಶಾಕ್ ಎಂದು ಹೇಳುತ್ತಾರೆ. ಶಾಕ್ ಡ್ಯು ಟು ವಾಟ್ ಎಂದು ಬರೆಯುವುದಿಲ್ಲ. ಅಂದರೆ ಸಾವಿಗೆ ಕಾರಣ ಶಾಕ್‌ನಿಂದ ಸತ್ತರು ಎಂದು ಹೇಳುತ್ತಾರೆ. ಅವಳು ಸತ್ತಿದ್ದು

ಹೇಗಾದರೂ ಇರಲಿ. ಡಾಕ್ಟರ್ ಹೇಳತಕ್ಕದ್ದು ಡೆತ್ ಡ್ಯು ಟು ಶಾಕ್ ಎಂದು ಬರೆಯಬೇಕೆಂದು. ನಾನು ಕೇಳತಕ್ಕದ್ದು ಶಾಕ್ ಏತಕ್ಕೋಸ್ಕರ ಆಯಿತು, ಅವರು ಸುಟ್ಟಿದ್ದರಿಂದ ಆಯಿತೇ, ಅದನ್ನು ನಾವು ಕೇಳುತ್ತೇವೆ. ಅದನ್ನು ಬರೆಯಬೇಕೋ ಬೇಡವೊ? ಅದನ್ನು ಬರೆಯುವುದಿಲ್ಲವೆನ್ನತಕ್ಕದ್ದು ನಮ್ಮ ಕಂಪ್ಲೆಂಟ್.

ಅಧ್ಯಕ್ಷರು :— ನಾನು ಅದನ್ನೇ ಹೇಳಿದ್ದು ನಾನು ಎಷ್ಟು ಸಲ ಹೇಳಬೇಕು? ಆ ಡಾಕ್ಟರ್ ವರದಕ್ಷಿಣೆ ತೆಗೆದುಕೊಂಡು ಬಂದಿರುವವನು ಆಗಿದ್ದರೆ ಏನು ಮಾಡುತ್ತೀರಿ? ಅವರ ಅಪ್ಪ ಅಮ್ಮ ಇವನನ್ನು ತೋರಿಸಿ ವ್ಯಾಪಾರ ಮಾಡಿದ್ದರೆ, ನಮಗೆ ಅಷ್ಟು ಲಕ್ಷ ಖರ್ಚಾಯಿತು ಇವನ ಡಾಕ್ಟರ್ ಮಾಡುವುದಕ್ಕೆ ಎಂದು ಹೇಳಿ ಹೇಳುವವನು ಇಲ್ಲಿ ಎಲ್ಲಾ ಕಾಲೇಜುಗಳಲ್ಲಿ ಡೊನೇಷನ್ ಕೊಟ್ಟು ಬಂದಿರುವವನು ಆದರೆ ಅವರ ಅಪ್ಪ ಅಮ್ಮ ವ್ಯಾಪಾರ ಮಾಡಿ ಇವನು ಡಾಕ್ಟರ್ ಮಾಡಿದ್ದರೆ ಅವನು ಪೋಸ್ಟ್‌ಮಾರ್ಟಂ ಮಾಡಿದರೆ, ಎಲ್ಲಿಗೆ ಬರುತ್ತೆ? Please try to get out of this pit in which you have fallen. Economic order, Social order.

ಶ್ರೀಮತಿ ಪ್ರಮೀಳಾನೇಸರ್ಗಿ :— ನಮ್ಮ ಸಿಸ್ಟಂನಲ್ಲಿ ತಪ್ಪಿದೆ, ನಾನು ಒಪ್ಪುತ್ತೇನೆ.

ಡಾ: ಎಂ.ಪಿ. ಕರ್ಕಿ :— ನಾನೊಂದು ಕ್ಲಾರಿಫಿಕೇಷನ್ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯೆಯವರು ಅವಕಾಶ ಕೊಡಬೇಕು. ಮಾನ್ಯ ಅಧ್ಯಕ್ಷರೆ ಇದು, Ultimately it is shock. It could be by burning, bleeding or any such thing. ಶಾಕ್ ಎಂದು ಹೇಳಿದರೆ, ಬ್ಲಡ್ ಸಪ್ಲೈ ಸಾಕಾಗದೆ ಇರತಕ್ಕ ಒಂದು ಸನ್ನಿವೇಶ. Shock doesn't mean something else. ಇದು ಮೆದುಳಿಗೆ ರಕ್ತ ಸಾಕಾಗದೆ ಶಾಕ್ ಆಗಿರತಕ್ಕಂಥಾದ್ದು. That is a proper way to give it. ಆದರೆ ಇತಿಹಾಸ ಇರುತ್ತದೆ, ಬರ್ನಿಂಗ್ ಆಗಿರತಕ್ಕಂಥಾದ್ದು ಮತ್ತೊಂದು ಅಂತ ಇರುತ್ತದೆ. Shock is due to the burning ಎಂದು ಹೊಸದಾಗಿ ಹೇಳಬೇಕಾಗುತ್ತದೆ.

MR. SPEAKER :— Generally they assign two reasons. ಒಂದು ಶಾಕ್. ಇನ್ನೊಂದು ಅಸ್‌ಫಿಕ್ಸಿಯಾ. ಬರ್ನಿಂಗ್ ಆದರೆ ಶಾಕ್. ಹ್ಯಾಂಗಿಂಗ್ ಆದರೆ ಅಸ್‌ಫಿಕ್ಸಿಯಾ.. ಅದೆಲ್ಲಾ ಕಾಮನ್ ಟರ್ಮಿನಾಲಜೀಸ್. ಯಾರೂ ಬೇಕಾದರೂ ಸರ್ಟಿಫಿಕೇಟ್ ಕೊಡಬಹುದು. ಡಾಕ್ಟರೇ ಕೊಡಬೇಕು ಎಂದು ಏನೂ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರೇ, ಏತಕ್ಕೋಸ್ಕರ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ, ಕಾಲಮ್‌ಗಳನ್ನೇ ಫಿಲ್‌ಅಪ್ ಮಾಡಿರುವುದಿಲ್ಲ. ಕೊನೆಗೆ ಸುಮ್ಮನೆ ಬರೆಯುತ್ತಾರೆ. ಇವರು ಒಂದು ಸಾವು ಆಗುತ್ತಿದ್ದಹಾಗೆ ಪೊಲೀಸಿನವರ ಹತ್ತಿರ ಹೋಗುತ್ತಾರೆ, ಡಾಕ್ಟರುಗಳ ಹತ್ತಿರ ಹೋಗುತ್ತಾರೆ. ಯಾವರೀತಿ ಸ್ಟೇಟ್‌ಮೆಂಟ್ ಬರೆಯಬೇಕು? ಪೋಸ್ಟ್‌ಮಾರ್ಟೆಮ್ ರಿಪೋರ್ಟ್ ಹೇಗೆ ಆಗಬೇಕು? ಅಲ್ಲಿವರೆಗೂ ಹೊರಟುಹೋಗುತ್ತಾರೆ.

ಇವತ್ತು ಕೋರ್ಟಿನಲ್ಲಿ ಕೇಸ್ ಸ್ಟ್ಯಾಟಿಸ್ಟಿಕ್ಸ್ ಪರ್ಪಸ್‌ಗೋಸ್ಕರ ಏನು ಮಾಡಿದ್ದಾರೆ ಎಂದರೆ ಪೊಲೀಸಿನವರು ಹೇಳಬಹುದು ನಾವೆಲ್ಲಾ ಕೇಸ್‌ಗಳನ್ನು ಡೌರಿ ಡೆತ್‌ನಲ್ಲಿ ಹಾಕುತ್ತಿದ್ದೇವೆ, ಡೌರಿ ಹರ್‍ಯಾಸ್‌ಮೆಂಟ್ ಕೇಸ್‌ನಲ್ಲಿ ಕೇಸ್‌ಗಳನ್ನು ಬುಕ್ ಮಾಡುತ್ತಿದ್ದೇವೆ ಎಂದು ಅವರು ಹೇಳುತ್ತಾರೆ. ಇವತ್ತು ಡೌರಿ ಹರ್‍ಯಾಸ್‌ಮೆಂಟ್‌ನಲ್ಲಿ ಬಂದಿರತಕ್ಕಂಥ ಎಲ್ಲಾ ಕೇಸ್‌ಗಳನ್ನು ರೆಕಾರ್ಡ್ ಮಾಡಿ ತಮಗೆ ನಾನು ಕಳುಹಿಸಿಕೊಡುತ್ತೇನೆ. ತಾವು ನೋಡಬಹುದು. ಆದರೆ ಏನಾಗುತ್ತದೆ ಎಂದರೆ ಡೌರಿ ಹರ್‍ಯಾಸ್‌ಮೆಂಟ್‌ಮೆಂಟ್ ಎಂದು ಕೇಸ್ ಬುಕ್ ಮಾಡುತ್ತಾರೆ ಮತ್ತು ಕೋರ್ಟಿನಲ್ಲಿ ಕೇಸು ಹಾಕುತ್ತಾರೆ. ಆದರೆ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿರುತ್ತಾರಲ್ಲಾ, ಅದರಲ್ಲಿ ಇವರಲ್ಲಿ ಯಾವುದೇ ವರದಕ್ಷಿಣೆ ಕೇಳಿರಲಿಲ್ಲ, ಯಾರೂ ಏನೂ ಮಾಡಿರಲಿಲ್ಲ, ಬಹಳ ಚೆನ್ನಾಗಿ ಸಂತೋಷವಾಗಿ, ಸುಖವಾಗಿ ಇದ್ದರು ಎಂದು ಸ್ಟೇಟ್‌ಮೆಂಟ್ ಬರೆದಿರುತ್ತಾರೆ.

MR. SPEAKER :— Enactment of any legislation is not the answer for the social problems that we have. For example: Now we have the PCR Act, rather Untouchability Act. Do we have the courage to say that untouchability is not there in our Society? Untouchability is there. There are still a large number of people who practice untouchability and the people who suffer from it despite enacting the PCR Act. These are all social problems. Mass education in required. You must come on those lines. Digging up something here and there is not the answer.

ಡಾ: ಎಂ.ಪಿ. ಕರ್ಕಿ :— ಅನ್‌ಟಚಬಿಲಿಟಿ ಆ್ಯಕ್ಟ್‌ನಲ್ಲಿ the reverse is also true. ಅಟ್ರಾಸಿಟೀಸ್ ಏನೂ ಮಾಡದೇಹೋದರೂ ಕೂಡ ಅಟ್ರಾಸಿಟಿ ಆಗುತ್ತದೆ. ನಮ್ಮಲ್ಲಿ ಅದು ಆಗುತ್ತಾ ಇದೆ.

ಅಧ್ಯಕ್ಷರು :— ಸಹಜವಾಗಿ ಅದು ಆಗಿಯೇ ಆಗುತ್ತದೆ. ಜನರಿಗೆ ಯಾವಾಗ ತಿಳಿವಳಿಕೆ ಇರುವುದಿಲ್ಲ, ಉಪಯೋಗಕ್ಕಿಂತ ದುರುಪಯೋಗವೇ ಹೆಚ್ಚು ಆಗುವುದು.

ಡಾ: ಎಂ.ಪಿ. ಕರ್ಕಿ :— ನಮ್ಮ ಜಿಲ್ಲೆಯಲ್ಲಿ. Untouchability, I don't think, is practised in a big way. Inspite of it, the reverse is true. ಈಗ ಇಲ್ಲಿ ಕೇಳಿರತಕ್ಕಂಥ ಅಟ್ರಾಸಿಟಿ ಕೇಸ್‌ಗಳು.. ನನಗೆ ಹೊಡದರು...

ಅಧ್ಯಕ್ಷರು :— ಡಾಕ್ಟ್ರೇ, ನಾನು ಅದನ್ನೇ ಹೇಳುವುದು. ಯಾವುದೇ ಒಂದು ಕಾನೂನನ್ನು...

MR. P.G.R. SINDHIA :— Please don't say that. ತಮ್ಮ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ತಮ್ಮ ಜಿಲ್ಲೆಯ ವಾತಾವರಣವೇ ಬೇರೆ. ನಿಮ್ಮ ಜಿಲ್ಲೆಯಲ್ಲಿ ಪರಿಶಿಷ್ಟ

ಜಾತಿ, ಪರಿಶಿಷ್ಟ ವರ್ಗದ ಜನಸಂಖ್ಯೆಯೂ ಕಡಿಮೆ ಇದೆ. ಆದ್ದರಿಂದ ಈ ರೀತಿ ವಾತಾವರಣ ಇದೆಯೇ ವಿನಹ ಬಾಕಿ ಕಡೆಗಳಲ್ಲಿ ಇಲ್ಲವೆಂದು ಹೇಳಬೇಡಿ. ಮಾನ್ಯ ಅಧ್ಯಕ್ಷರು ಹೇಳಿರತಕ್ಕಂಥಾದ್ದು ನೂರಕ್ಕೆ ನೂರು ಸತ್ಯವಾಗಿರತಕ್ಕಂಥ ವಿಚಾರ.

ಡಾ : ಎಂ.ಪಿ. ಕರ್ಕಿ :— ನಾನು ನಮ್ಮ ಜಿಲ್ಲೆಮಟ್ಟಿಗೆ- I qualified. ನಮ್ಮ ಜಿಲ್ಲೆಯಲ್ಲಿ ಈ ರೀತಿ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ನಾನು ಯೂನಿವರ್ಸಲ್ ಆಗಿ ಹೇಳಲಿಲ್ಲ.

ಅಧ್ಯಕ್ಷರು :— ಡೌರಿ ಆ್ಯಕ್ಟ್ ಇದೆ. ಈ ಆ್ಯಕ್ಟನ್ನು ಹೇಗೆ ಹೇಗೆ ಯಾವ್ಯಾವ ಸಂದರ್ಭದಲ್ಲಿ ಉಪಯೋಗಿಸಬೇಕು ಎನ್ನುವ ತಿಳುವಳಿಕೆ ಇಲ್ಲದ ಸಮಾಜದಲ್ಲಿ a handful of people will exploit, not make the proper usage of it.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಆ್ಯಕ್ಟ್ ಇದೆ. ಆದರೆ ಅದು ಪರಿಣಾಮಕಾರಿಯಾಗಿ ಇಂಪ್ಲಿಮೆಂಟ್ ಆಗುತ್ತಿಲ್ಲ.

ಅಧ್ಯಕ್ಷರು :— ಇವತ್ತು ನಮ್ಮ ಸದನದ ಕರ್ತವ್ಯ ಆ ನಿಟ್ಟಿನಲ್ಲಿ ಯೋಚನೆ ಮಾಡುವುದು ಆಗಬೇಕಾಗಿದೆ, ನಾವು ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅದು ಆಗುತ್ತಿದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕಲ್ಲಾ. ಅದು ಇವತ್ತು ಆಗುತ್ತಿಲ್ಲ. ಡೌರಿ ತೆಗೆದುಕೊಂಡವರು ಮಾತ್ರವಲ್ಲ ಕೊಟ್ಟವರೂ ಕೂಡ ಅಷ್ಟೇ ತಪ್ಪಿತಸ್ಥರು. ಅವರ ಮೇಲೂ ಕೂಡ ತಾವು ಕ್ರಮ ತೆಗೆದುಕೊಳ್ಳಬೇಕು. ಆದರೆ ಒಂದು ಕೇಸನ್ನೂ ತೆಗೆದುಕೊಂಡಿಲ್ಲ. ಅಧ್ಯಕ್ಷರೇ, ಇವತ್ತು ಆ್ಯಕ್ಟ್ ಇದೆ, ಕೊಟ್ಟವರ ಮೇಲೂ ಕೂಡ ಕೇಸ್ ರಿಜಿಸ್ಟರ್ ಮಾಡಬೇಕು ಎಂದು ಇದೆ. ಅವರು ಕೂಡ ಅಷ್ಟೇ ತಪ್ಪಿತಸ್ಥರು.

ಅಧ್ಯಕ್ಷರು :— ಆಲ್‌ರೈಟ್. ಬೇರೆ ನಿಮ್ಮ ಸಹೋದರಿಯರು ಮಾತನಾಡುತ್ತಾರೆ ಎಂದು ಕಾಣುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಾನು ಜಾಸ್ತಿ ಮಾತನಾಡುವುದಿಲ್ಲ, ನನಗೆ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಿಮ್ಮ ಸಲಹೆ ಏನು?

ಅಧ್ಯಕ್ಷರು :— ಅವರು ಹೇಳಿದ್ದಾರೆ. She has suggested.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಡ್ವೈಸರಿ ಕೌನ್ಸಿಲ್ ಮಾಡಿ ಎಲ್ಲಾ ದೊಡ್ಡ ದೊಡ್ಡ ಹಿರಿಯರು ಅಟಾರ್ನಿ ಜನರಲ್‌ನಲ್ಲಿ ಯಾವರೀತಿ ಮಾಡಿದ್ದಾರೋ ಆ ರೀತಿ ಇಲ್ಲಿ ಕೂಡ ಮಾಡಬೇಕು...

ಅಧ್ಯಕ್ಷರು :— ಅಡ್ವೈಸರಿ ಕೌನ್ಸಿಲ್ ಎಂದರೆ ಒಂದು ಜಾಯಿಂಟ್ ಹೌಸ್ ಕಮಿಟಿಯನ್ನು ಮಾಡಬೇಕು ಎಂದು ಅವರು ಹೇಳಿದ್ದಾರೆ. ಜಾಯಿಂಟ್ ಹೌಸ್ ಕಮಿಟಿ ಮಾಡಿ ಆ ಅಡ್ವೈಸರಿ ಕೌನ್ಸಿಲ್ ಹತ್ತಿರ ಅವರು ಸಂಪರ್ಕ ಮಾಡಿ ಎಂಟು-ಹತ್ತು ವಾರಗಳ ಅವಧಿಯಲ್ಲಿ ಅವರ ಶಿಫಾರಸ್ಸುಗಳನ್ನು ಫೈನಲೈಸ್ ಮಾಡಿಕೊಡಬೇಕು. ಅವರು ಕಾಂಕ್ರೀಟ್ ರೆಕಮೆಂಡೇಷನ್ಸ್‌ನ್ನು ಕೊಡಬೇಕು, ಅದನ್ನು ಸರ್ಕಾರ ಇಂಪ್ಲಿಮೆಂಟ್ ಮಾಡಬೇಕು. ಅದೇ ಅಲ್ವೇನಮ್ಮ, ತಾವು ಹೇಳಿದ್ದು?

ಶ್ರೀಮತಿ ಪ್ರಮೀಳಾ ನೇಸರ್ಗಿ :— ಹೌದು. ಅದರಲ್ಲಿ ಮಹಿಳೆಯರ ಬಗ್ಗೆ ಸ್ಪಂದಿಸತಕ್ಕಂಥ, ಹೃದಯ ಇರತಕ್ಕಂಥ ಎಲ್ಲರನ್ನೂ ಹಾಕಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಡೌರಿ ಬಗ್ಗೆ ಮಾತನಾಡುವಾಗ ವೈದ್ಯರವರೆಗೆ ಮುಟ್ಟಿದರು. ಅದರ ಬಗ್ಗೆ ವಾದ ಮಾಡುವವರು, ತೀರ್ಮಾನ ಮಾಡುವವರು ಎಲ್ಲರೂ ತೆಗೆದುಕೊಂಡರೆ ಇವತ್ತಿನ ಸಮಾಜದಲ್ಲಿ ಪರಿಸ್ಥಿತಿ ಏನಾಗುತ್ತದೆ?

ಮಾನ್ಯ ಸದಸ್ಯರು :— ವಕೀಲರೂ ತೆಗೆದುಕೊಂಡರೆ ಏನಾಗುತ್ತದೆ ಎಂದು ಕೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಆಗ ಇಬ್ಬರೂ ಅಫೆಂಡರ್ಸ್. ಅದನ್ನು ನಾನು ಹೇಳಿದ್ದೇನೆ. ಆದರೆ ನನಗೆ ದುಃಖವಾಗತಕ್ಕಂಥಾದ್ದು ಏನೆಂದರೆ ಬರ್ನ್ ಕೇಸ್ ಆದರೆ ತಕ್ಷಣ ಬರ್ನ್ ಆಗಲಿ, ಹ್ಯಾಂಗಿಂಗ್ ಆಗಲಿ, ಆ ಮಹಿಳೆಯನ್ನು ಮೇಲಿನಿಂದ ತೆಗೆದಿಟ್ಟುಬಿಡುತ್ತಾರೆ. ಆದರೆ ಅದಕ್ಕೆ ಮೊದಲು ಅದು ವಿಡಿಯೋಗ್ರಾಫ್ ಆಗಬೇಕು. ಯಾವ ಸೀನ್ ಆಫ್ ಅಕರೆನ್ಸ್ ಇರುತ್ತದೆ ಆ ಮಹಿಳೆಯನ್ನು ಯಾವ ರೀತಿ ಕೊಲೆ ಮಾಡಿರುತ್ತಾರೆ ಅಥವಾ ಬರ್ನ್ ಕೇಸ್ ಏನು ಆಗಿರುತ್ತದೆ ಆ ಸೀನ್ ಆಫ್ ಅಕರೆನ್ಸ್‌ನ್ನು ವಿಡಿಯೋಗ್ರಾಫ್ ಆಗತಕ್ಕಂಥ ಪರಿಸ್ಥಿತಿ ಬರಬೇಕು. ತತ್‌ಕ್ಷಣ ಒಬ್ಬ ಅಧಿಕಾರಿ ಹೋಗಿ ಎನ್‌ಕ್ವೈರಿ ಮಾಡಿ, ಇನ್ವೆಸ್ಟಿಗೇಟ್ ಮಾಡತಕ್ಕಂಥ ವ್ಯವಸ್ಥೆಯಾಗಬೇಕು. ಆ ಆಫೀಸರ್ ಸ್ಪೆಶಲಿ ಟ್ರೈನ್ಡ್ ಆಫಿಷಿಯಲ್ ಆಗಿರಬೇಕು. ಒಳ್ಳೆಯ ಕಾನ್‌ಸ್ಟೇಬಲ್ ಆದರೂ ಆಗಬಹುದು. ಕೆಲವು ಕಡೆ ಬಹಳ ಒಳ್ಳೆಯ ಕಾನ್‌ಸ್ಟೇಬಲ್ ಕೂಡ ಇದ್ದಾರೆ. ದೊಡ್ಡ ಅಧಿಕಾರಿಯೇ ಬೇಕು ಅಂತಿಲ್ಲ. ಈ ಇನ್ವೆಸ್ಟಿಗೇಷನ್ ಮಾಡತಕ್ಕಂಥ ಅಧಿಕಾರಿಯನ್ನು ಅಲ್ಲಿ ಕಳುಹಿಸಿ ಅವರು ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡತಕ್ಕಂಥ ಸಂದರ್ಭದಲ್ಲಿ, ಪೋಲೀಸಿನವರು ತೆಗೆದುಕೊಳ್ಳದ ಹಾಗೆ ಮಾಡಿ, ಅಲ್ಲಿ ಅವರ ತಂದೆತಾಯಿಗಳು ಮುಖ್ಯವಾಗಿ ಇರತಕ್ಕಂಥ ಪರಿಸ್ಥಿತಿಯನ್ನು ಒದಗಿಸಿ-starting from there to investigation...

ಅಧ್ಯಕ್ಷರು :— ಈ ಎಲ್ಲಾ ಶಿಫಾರಸ್ಸುಗಳನ್ನು ನಿಮ್ಮ ಕಮಿಟಿಯಲ್ಲಿ ಕೊಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಈ ರೀತಿ ಆಗತಕ್ಕಂಥ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ನನಗಾದರೂ ಕೂಡ ತಾವು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಒಂದು ಮಾತನ್ನು ನಾನು

ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಆಗುತ್ತದೆ ಎನ್ನತಕ್ಕಂಥ ನಮ್ಮ ಆಸೆಗಳು ನೂರಾರು ಇರುತ್ತವೆ. ತಾವು ಕೇಳಬಹುದು ಅದು ಆಗುತ್ತದೆಯೇ, ಇಲ್ಲವೇ ಎಂದು. ಆಗಲೇಬೇಕು ಎಂದು ನಮ್ಮ ಆಸೆ ಇಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. American poet Emily Dickinson ಎನ್ನತಕ್ಕಂಥ ಅವರು ಒಂದು ಮಾತನ್ನು ಹೇಳುತ್ತಾರೆ. ಏನು ಹೇಳುತ್ತಾರೆ ಎಂದರೆ

``I dwell in possibility. Today, together we dwell in possibility. For this is a moment that is infused with hope in a time ripe for positive social change."

ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಜಣ್ಣ:— ಒಂದು ಕ್ಲಾರಿಫಿಕೇಷನ್. ಐದು ಕುಟುಂಬದಲ್ಲಿ ಒಬ್ಬ ಮಹಿಳೆಗೆ ಎಫೆಕ್ಟ್ ಆಗುತ್ತದೆ ಎಂದು ನೀವು ಹೇಳಿದ್ದೀರಿ. ಅದು ಸ್ವಲ್ಪ ನಿಜ. ಇಷ್ಟು ಹೊತ್ತು ನೀವು ಹೇಳಿದ ಕಷ್ಟವನ್ನು ಕೇಳಿದ್ದೇನೆ. ನೀವು ಹೇಳಿದ್ದು ನಿಜ. ಆದರೆ ಹತ್ತು ಕುಟುಂಬದಲ್ಲಿ ಇಲ್ಲ ಇಪ್ಪತ್ತು ಕುಟುಂಬಗಳಲ್ಲಿ ಒಬ್ಬ ವ್ಯಕ್ತಿಗೆ ಹೆಂಗಸರೇ ತೊಂದರೆ ಕೊಟ್ಟು ಫಾಲ್ಸ್ ಕಂಪ್ಲೇಂಟ್ ಕೊಡುತ್ತಾರಲ್ಲಾ, ಇದನ್ನು ಹೇಗೆ ಸಾಲ್ವ್ ಮಾಡುತ್ತೀರಿ?

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅದು ಇವತ್ತು ಬೇಡ. ಅದನ್ನು ಇನ್ನೊಂದು ದಿವಸ ಇಟ್ಟುಕೊಳ್ಳೋಣ.

ಶ್ರೀ ಎನ್. ರಾಜಣ್ಣ:— ಬೆಂಗಳೂರು ನಗರದಲ್ಲಿ ಇಂಥಾದ್ದು ಬರುತ್ತಿವೆ. ಅವರ ಗೋಳು ಹೇಳುವುದಕ್ಕೇ ಆಗುವುದಿಲ್ಲ.

ಅಧ್ಯಕ್ಷರು :— ಬಿ.ಟಿ. ಲಲಿತಾನಾಯಕ್ ಅವರು...

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಮಾನ್ಯ ಅಧ್ಯಕ್ಷರೇ, ಇವತ್ತು ಮಹಿಳೆಯರಿಗೆ ಆಗುತ್ತಿರುವ ಹಲವಾರು...

ಅಧ್ಯಕ್ಷರು :— ಶ್ರೀಮತಿ ಲೀಲಾದೇವಿಯವರೇ, ತಮಗೆ ನಾನು ಅವಕಾಶ ಕೊಡುತ್ತೇನೆ. ಈ ಸದಸ್ಯರುಗಳೆಲ್ಲಾ ಮಾತನಾಡಲಿ. ಖಂಡಿತವಾಗಿಯೂ ನಿಮಗೆ ನಾನು ಅವಕಾಶ ಕೊಡುತ್ತೇನೆ. ಈ ಚರ್ಚೆಯಲ್ಲಿ ನೀವು ಮಂತ್ರಿಯಾಗಿ ಭಾಗವಹಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಬರೇ ಮಹಿಳೆಯರಿಗೋ ಅಥವಾ ಬೇರೆಯವರಿಗೂ ಅವಕಾಶ ಕೊಡುತ್ತೀರಿ, ಅಲ್ವಾ?

ಅಧ್ಯಕ್ಷರು :— ಅವರದ್ದು ಎಲ್ಲಾ ಮುಗಿದ ಮೇಲೆ ಮಾನ್ಯ ಘೋರ್ಪಡೆಯವರನ್ನು ನಾನು ಕೇಳಿಕೊಳ್ಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ವಿಶೇಷವಾಗಿ ಶ್ರೀರಾಮರೆಡ್ಡಿಯವರಿಗೆ ಅವಕಾಶ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನೂ ಕೂಡ ಒಬ್ಬ ಸಿಗ್ನೇಟರಿ. ನಮಗೂ ಅವಕಾಶ ಏನಾದರೂ ಉಂಟಾ?

ಅಧ್ಯಕ್ಷರು :— ಕೊಡುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) :— ಮಾನ್ಯ ಅಧ್ಯಕ್ಷರೇ, ಇವತ್ತು ತಾವು ಮಹಿಳಾ ಶೋಷಣೆ ಬಗ್ಗೆ ಮಾತನಾಡುವುದಕ್ಕೆ ಸ್ತ್ರೀ ಪುರುಷರೆಲ್ಲರಿಗೂ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ ಮಹಿಳೆ ಮಾತನಾಡುವುದು ಮಹಿಳೆಗಾಗಿ ಅಲ್ಲ, ಇಡೀ ಸಮಾಜಕ್ಕಾಗಿ. ಮಹಿಳೆ ಎನ್ನುವವಳನ್ನು ತಾವು ಒಬ್ಬ ಮನುಷ್ಯಳಾಗಿ ಮೊದಲು ತೀರ್ಮಾನ ಮಾಡಬೇಕು. ಮನುಷ್ಯರಲ್ಲಿರುವಂಥ ಎಲ್ಲಾ ರೀತಿಯ ಕರುಣೆ, ದುಷ್ಟತನ, ನೀಚತನ, ಕ್ರೌರ್ಯ ಒಳ್ಳೆಯದು ಮತ್ತು ಕೆಟ್ಟದ್ದು ಎಲ್ಲವನ್ನೂ ಒಳಗೊಂಡಂಥ ಒಬ್ಬ ಮನುಷ್ಯಳಾಗಿ ಇಲ್ಲಿ ತಾವು ಮಹಿಳೆಯನ್ನು ನೋಡಬೇಕಾಗಿದೆ. ಮಹಿಳೆ ಅಂದಕೂಡಲೇ ಆಕಾಶದಿಂದ ಉದುರಿ ಬಂದಿಲ್ಲ. ಮತ್ತು ಪುರುಷನಿಗಿಂತ ಬೇರೆ ಅಲ್ಲ. ಯಾವ ಯಾವ ಲೋಪದೋಷಗಳು ಪುರುಷರಿಂದ ಆಗುತ್ತಾ ಇವೆಯೋ ಅವು ಮಹಿಳೆಯರಿಂದಲೂ ಕೂಡ ಆಗುತ್ತಾ ಇವೆ. ಆದರೆ ನಮ್ಮ ಕೂಗು ಏನು? ನಾವು ಇವತ್ತು ಏನು ಕೇಳುತ್ತಾ ಇದ್ದೇವೆ. ಮಹಿಳೆಗಾಗಿ ನಮ್ಮ ಬೇಡಿಕೆ ಏನು ಎಂದರೆ, ಮಹಿಳೆ ಎಂಬ ಒಂದೇ ಕಾರಣಕ್ಕಾಗಿ ನಮ್ಮನ್ನು ತಾವು ದೂರಮಾಡಬೇಡಿ. ಯಾವುದೇ ಒಂದು ಸ್ಥಾನಮಾನದಿಂದ ವಂಚಿತರನ್ನಾಗಿ ಮಾಡಬೇಡಿ. ಸಮಾನವಾದ ಅವಕಾಶಗಳು ದೊರೆತಾಗ, ಆ ಸಮಾನವಾದ ಅವಕಾಶವನ್ನು ತಾವು ಕೊಡುವುದಕ್ಕೆ ಮುಂದೆ ಬನ್ನಿ ಎನ್ನುವಂಥ ಬೇಡಿಕೆಯನ್ನು ಇಟ್ಟುಕೊಂಡು, ಇವತ್ತು ಮಹಿಳೆ ನಡೆದುಬಂದ ದಾರಿ ಏನು, ಯಾವ ದಿಕ್ಕಿನಲ್ಲಿ ಮಹಿಳೆ ನಡೆಯುತ್ತಿದ್ದಾಳೆ, ಏನನ್ನು ಬೇಡುತ್ತಿದ್ದಾಳೆ, ಏಕೆ ಅದು ಸಫಲವಾಗುತ್ತಿಲ್ಲ ಎನ್ನುವುದರ ಬಗ್ಗೆ ಒಂದೆರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಿಳೆ ಎಂದರೆ ಮಹಾ ಇಳೆ, ಪುರುಷ ಪ್ರಧಾನವಾದಂಥ ಸಮಾಜದಲ್ಲಿ ತಾವೇ ಕರೆದಂಥ ಈ ಹೆಸರು. ಮಹಾ ಇಳೆ ಎಂದು ಮಹಿಳೆಯನ್ನು ಕರೆದಿರಿ. ಅಂದರೆ ಭೂಮಿಯಷ್ಟು ಸಹನೆ ಉಳ್ಳವಳು. ಪುರುಷರೂ ಕೂಡ ಮಹಿಳೆಯ ರೀತಿಯಲ್ಲಿ ಸಹನೆಯನ್ನು ಪಡೆದುಕೊಳ್ಳಬೇಕಾಗಿದೆ. ಆದರೆ, ಅದು ಆಗುತ್ತಾ ಇಲ್ಲ. ನಮ್ಮನ್ನು ಸ್ತ್ರೀ ಎಂದು ಕರೆದಿರಿ. ಸ್ತ್ರೀ ಎಂದರೆ ಸೂತ್ರಿ, ಮಕ್ಕಳನ್ನು ಹೆರುವವಳು ಕೇವಲ ಮಕ್ಕಳನ್ನು ಹೆರುವವಳು ಎನ್ನುವಂಥ ಅರ್ಥದಿಂದ ಅವಳನ್ನು ಸ್ತ್ರೀ ಎಂದು ಕರೆದಿರಿ. ಮಾನ್ಯ

ಮಂತ್ರಿಗಳು ಹೆಂಗಸು ಎಂದಕೂಡಲೇ, ನೀವು ಹೆಂಗಸು ಎಂದು ಹೇಳಬೇಡಿ ಎಂದಿರಿ. ಆದರೆ, ನೀವು ಸ್ತ್ರೀ ಎಂದರೂ ಅಷ್ಟೆ, ಮಹಿಳೆ ಎಂದರೂ ಅಷ್ಟೆ, ಹೆಂಗಸು ಎಂದರೂ ಅಷ್ಟೆ. ನೀವು ಏನು ಹೇಳಿದರೂ ತಿರುಗಾ ಮುರುಗಾ ಅಲ್ಲೇ ಬಂದು ನಿಲ್ಲುತ್ತದೆ ಮಹಿಳೆಯನ್ನು ನೀವು ಯಾವ ದೃಷ್ಟಿಯಿಂದ ನೋಡುತ್ತೀರೋ, ಅದೇ ದೃಷ್ಟಿಯಿಂದ ಇವತ್ತಿಗೂ ಕೂಡ ಕರೆಯುತ್ತಾ ಇದ್ದೇವೆ. ಆ ಮಹಿಳೆ ಭೂಮಿಯ ಹಾಗೆ ಎಲ್ಲವನ್ನೂ ಸಹಿಸಿಕೊಳ್ಳುವವಳು ಎನ್ನುವಂಥ ಹಿನ್ನೆಲೆಯಂತೂ ಆ ಶಬ್ದಕ್ಕೆ ಇದೆ. ಮೊದಲಿನಿಂದಲೂ ಕೂಡ ನಮ್ಮ ಜಾನಪದರು ಹೇಳಿದ್ದಾರೆ. ಪ್ರಪಂಚವನ್ನು ಪಾದುಕೆ ಮಾಡಿ, ಪಾದಕೆ ಮೆಟ್ಟಿವಳು ದೇವಿ. ಆದಿಶೇಷನ ಡಾಬು ಮಾಡಿ ಸೊಂಟಕೆ ಬಿಗಿದವಳು ಅನ್ನುವಂಥ ಉದಾತ್ತವಾದ ದೃಷ್ಟಿಯಲ್ಲಿ ಹೇಳಿದ್ದಾರೆ. ಈ ಜಗತ್ತನ್ನೇ ಅವಳು ಪಾದುಕೆ ಮಾಡಿ, ಈ ಭೂಮಿಯನ್ನು ಮೆಟ್ಟಿದ್ದಾಳೆ. ಅವಳು ಆದಿಶೇಷನನ್ನೇ ಡಾಬು ಮಾಡಿ ಸೊಂಟಕ್ಕೆ ಬಿಗಿದಿದ್ದಾಳೆ ಅನ್ನುವಂಥ ಮಹತ್ತರವಾದಂಥ ಸ್ಥಾನಮಾನವನ್ನು ಕೊಟ್ಟು ಅವಳನ್ನು ಅಷ್ಟು ದೊಡ್ಡ ಸ್ಥಾನದಲ್ಲಿಟ್ಟು ನೋಡಿದರೂ ಕೂಡ, ಏಕೆ ಮಹಿಳೆ ಇವತ್ತು ಅತ್ಯಂತ ಎರಡನೇ ದರ್ಜೆ ಪ್ರಜೆಯಾಗಿ ಕಾಣಿಸುತ್ತಾಳೆ? ಯಾರಾದರೊಬ್ಬ ಮಹಿಳೆ ಈ ಶಾಸನ ಸಭೆಯಲ್ಲಿ ಅಷ್ಟೇ ಅಲ್ಲ. ಯಾವುದೇ ಒಂದು ಸಭೆಯಲ್ಲಾಗಲೀ ಅಥವಾ ಚುನಾಯಿತಿ ಪ್ರತಿನಿಧಿಗಳು ಯಾರೇ ಆಗಿರಲಿ ಅವಳು ಮಾತನಾಡಿದಾಗ, ಏಕೆ ಅವರನ್ನು ಗೇಲಿಯ ದೃಷ್ಟಿಯಿಂದ ನೋಡುವುದು? ಏಕೆ ಅಣಕ ಮಾಡುತ್ತಾರೆ? ಏಕೆ ಅವಳ ಮಾತನ್ನು ವ್ಯಂಗ್ಯವಾಗಿ ತೆಗೆದುಕೊಳ್ಳುತ್ತಾರೆ? ಏಕೆ ಅವಳನ್ನು ಇಷ್ಟು ಕೆಳದರ್ಜೆಯಲ್ಲಿ ಕಾಣುತ್ತಿದ್ದಾರೆ ಎನ್ನುವುದಕ್ಕೆ ನಾವು ಅರ್ಥವನ್ನು ಹುಡುಕಿಕೊಂಡು ಹೋದಾಗ ಅನ್ನಿಸುತ್ತದೆ ಈ 3-4 ವಿಷಯಗಳಲ್ಲಿ ಮಹಿಳೆಯನ್ನು ಶತಮಾನಗಳಿಂದಲೂ ತುಳಿದಿಟ್ಟಿರುವುದು ನಮಗೆ ಕಂಡುಬರುತ್ತಿದೆ. ಏಕೆಂದರೆ, ಬಾಲವಿವಾಹ ಪದ್ಧತಿ ಹಿಂದೆ ಇತ್ತು. ಬಾಲ್ಯವಿವಾಹ ಮಾಡಿದಾಗ, ಈಗೇನು ಪುರುಷ ಸ್ವಲ್ಪಮಟ್ಟಿಗಾದರೂ ತಿಳಿದುಕೊಂಡು ಬರುತ್ತಾ ಇದ್ದಾನೋ, ಈ ಪ್ರಪಂಚವನ್ನು ಅರ್ಥಮಾಡಿಕೊಳ್ಳುತ್ತಾ ಬರುತ್ತಾ ಇದ್ದಾನೋ ಆ ರೀತಿ ಅರ್ಥ ಮಾಡಿಕೊಳ್ಳಲು ಮಹಿಳೆಗೆ ಸಾಧ್ಯವಾಗಲಿಲ್ಲ. ಏಕೆಂದರೆ, ಅವಳಿಗೆ ಬಾಲ್ಯ ವಿವಾಹ ಮಾಡಿದ ಕೂಡಲೇ, ಪ್ರಾಯಕ್ಕೆ ಬಂದಮೇಲೆ ಮಕ್ಕಳನ್ನು ಹೆರುವಂತಾದ್ದು, ಮನೆಯನ್ನು ನೋಡಿಕೊಳ್ಳುವಂತಾದ್ದು, ಗಂಡನನ್ನು ಜೋಪಾನ ಮಾಡುವಂಥ ಒಂದು ಕಾರ್ಯದಲ್ಲಿ ತೊಡಗಿದಾಗ, ಅವಳಿಗೆ ಏನು ಕಲಿಸಿಕೊಟ್ಟರು ಎಂದರೆ, ನೋಡಮ್ಮ ನೀನು ಇಷ್ಟೇ ಮಾಡಿಕೊಂಡಿರಬೇಕು. ನೀನು ದಾಸಿಯಾಗಿ, ಗೃಹಿಣಿಯಾಗಿ, ದೇವತೆಯಾಗಿ, ತಾಯಿಯಾಗಿ ಇರಬೇಕು. ಈ ರೀತಿಯ ಕಟ್ಟುಕರಾರನ್ನು ಅವಳ ಮೇಲೆ ಹೇರಿದಾಗ, ಅವಳು ಅದಕ್ಕಿಂತಲೂ ಕೂಡ ಹೊರಗಡೆ ಏನನ್ನೂ ಆಲೋಚನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅವಳು ಎಷ್ಟು ಆಲೋಚನೆ ಮಾಡಿದಳು ಎಂದರೆ, ನಾನು ಎಷ್ಟು ಒಡವೆ ಹಾಕಿಕೊಳ್ಳಬಹುದು, ಎಂಥಹ ಸೀರೆ ಉಡಬಹುದು, ನಾನು ಯಾವರೀತಿ ಅಲಂಕರಿಸಿಕೊಂಡು ಈ ಪುರುಷ ಸಮಾಜವನ್ನು ಅಂದರೆ ತನ್ನ ಗಂಡನನ್ನು ಅಥವಾ ಇನ್ನೊಬ್ಬರನ್ನು ಯಾವರೀತಿ ಚೆಂದವಾಗಿ ಕಾಣುವುದಕ್ಕೆ

ಏನೇನು ಮಾಡಬಹುದು ಎಂಬುದರ ಕಡೆ ಹೆಚ್ಚು ಗಮನ ಕೊಟ್ಟಳು. ಇದರಿಂದ, ಆಕೆ ಹೊರ ಜಗತ್ತಿನ ಸಂಪರ್ಕವನ್ನೇ ಕಳೆದುಕೊಂಡಳು. ಅಂದರೆ ಯಾವರೀತಿ ಇಡೀ ಸಮಾಜವನ್ನು ಇವತ್ತು ಪುರುಷ ನೋಡುತ್ತಾನೋ ಅಂತಹ ದೃಷ್ಟಿಯಲ್ಲಿ ಅವಳಿಗೆ ನೋಡಲು ಹೋಗುವುದಕ್ಕೆ ಸಾಧ್ಯವಾಗದೇ ಹೋದದ್ದು ಕೂಡ ಒಂದು ದುರಂತ. ಅದು ಬರು ಬರುತ್ತಾ ಬದಲಾವಣೆಯಾಗುತ್ತಾ ಇದೆ. ಆ ಮಾತು ಬೇರೆ. ಆದರೆ ಪುರಾಣ ಕಾಲದಿಂದಲೂ ನಾವು ನೋಡಿದಾಗ, ಮಹಿಳೆಯ ಸ್ಥಿತಿ ಇವತ್ತಿಗೂ ಹೇಗೆ ಒಂದೇತರಹ ಇದೆ ಎಂಬುದು ಬಹಳ ಸೋಜಿಗದ ವಿಚಾರ. ಗಂಗೆ ಗೌರಿ ವಿಚಾರವನ್ನೆ ತೆಗೆದುಕೊಂಡು ಸ್ವಲ್ಪ ಪುರಾಣದ ಕಡೆ ಗಮನಹರಿಸಿ ನೋಡಿದಾಗ, ಶಿವ ಜಗತ್ತಿಗೇ ದೊಡ್ಡ ದೇವರು. ಅವನು ಇಬ್ಬರು ಹೆಂಡಿರನ್ನು ಮಾಡಿಕೊಂಡ. ಗೌರಿಯ ಹಾಗೆ ಗಂಗೆಯನ್ನು ತಂದ, ಅವಳನ್ನು ಜಟೆಯಲ್ಲಿ ಕೂರಿಸಿಕೊಂಡ. ಇಬ್ಬರಿಗೂ ಜಗಳಹಚ್ಚಿದ ಎಂಬುದನ್ನು ಸಹ ನಾವು ನೋಡುತ್ತೇವೆ. ಮತ್ತೆ ನೀವು ಯಾವ ದೇವರನ್ನೇ ನೋಡಿ. ಹಿಂದೂ ದೇವರುಗಳೇ ಆಗಲೀ ಅಥವಾ ಬೇರೆ ಬೇರೆ ದೇವರುಗಳ ಬಗ್ಗೆ, ಧರ್ಮದ ಬಗ್ಗೆ ನಾನು ಹೇಳುವುದಿಲ್ಲ. ಏಕೆಂದರೆ, ಹಿಂದೂ ಧರ್ಮ ಬಹಳ ಉದಾತ್ತವಾದುದು. ನಾವು ಮನುಷ್ಯನ ಮೇಲೆ ಆರೋಪ ಮಾಡಿಕೊಂಡಿದ್ದೇವೆಯೋ ಅದೆಲ್ಲಾ ನಾವು ಹೇಳಿಕೊಳ್ಳಬಹುದು. ಪ್ರತಿಯೊಂದು ದೇವರೂ ಕೂಡ ಒಬ್ಬ ಹೆಂಡತಿಯ ಮೇಲಿದ್ದುದು ಬಹಳ ಕಡಿಮೆ. ರಾಮನನ್ನು ಬಿಟ್ಟರೆ, ಬೇರೆ ಎಲ್ಲಾ ದೇವರುಗಳಲ್ಲಿ ಒಂದಲ್ಲ ಒಂದು ತೊಂದರೆಯನ್ನು ಕಾಣುತ್ತೇವೆ. ಆದರೆ, ರಾಮನನ್ನು ನಾವು ಹೇಗೆ ಪ್ರೀತಿ ಮಾಡುತ್ತೇವೆಯೋ ಏಕಪತ್ನಿ ವ್ರತಸ್ಥ ಎಂದು ಗೌರವ ಕೊಡುತ್ತೇವೆಯೋ ಹಾಗೆಯೇ ನಾವು ಕೃಷ್ಣನನ್ನೂ ಕೂಡ ಬಹಳ ಭಕ್ತಿ ಗೌರವದಿಂದ ಕಾಣುತ್ತೇವೆ. ಇದು ವಿಚಿತ್ರ ಅಂದರೆ, ಈ ದೇಶದಲ್ಲಿ ಬಹುಮುಖ ಸಂಸ್ಕೃತಿ ಇದೆ. ಬಹುಮುಖಿಯಾದ ಈ ಸಂಸ್ಕೃತಿಯನ್ನು ನಾವು ಎಲ್ಲಾ ರೀತಿಯಲ್ಲಿ ಒಪ್ಪಿಕೊಳ್ಳುತ್ತೇವೆ. ಒಬ್ಬ ಗಂಡನನ್ನು ಮೆಚ್ಚಿದ ಕಾರಣಕ್ಕಾಗಿ ನಾವು ಸೀತೆಯನ್ನು ಹೇಗೆ ಹೊಗುತ್ತೇವೆಯೋ ಹಾಗೆಯೇ 5 ಜನ ಗಂಡಂದಿರನ್ನು ಮಾಡಿಕೊಂಡಂಥ ದ್ರೌಪದಿಯ ಮೇಲೂ ನಮಗೆ ಅಷ್ಟೇ ಅಭಿಮಾನ ಇದೆ. ಅವಳನ್ನೂ ನಾವು ಪತಿವ್ರತೆಯರ ಸಾಲಿಗೇ ಸೇರಿಸುತ್ತೇವೆ. ಅಂದರೆ ಇದರ ಅರ್ಥ, ಈ ಜಗತ್ತಿನಲ್ಲಿ ನಾವು, ಈ ಸಮಾಜದಲ್ಲಿ, ಈ ಸಂಸ್ಕೃತಿಯಲ್ಲಿ ಪ್ರತಿಯೊಂದನ್ನೂ ಕೂಡ ಒಪ್ಪಿಕೊಳ್ಳುತ್ತೇವೆ. ಗೊಲ್ಲರ ಒಬ್ಬ ಹುಡುಗ ಕೃಷ್ಣ. ಆ ಕೃಷ್ಣನನ್ನು ನಾವು ದೇವರು ಮಾಡುತ್ತೇವೆ. ಅವನಲ್ಲಿರುವಂಥ ಉತ್ತಮವಾದಂಥ ರಾಜಕೀಯ ಕಟುತ್ವವನ್ನು ಗುರುತಿಸುತ್ತೇವೆ. ಹೀಗೆಯೇ ಪ್ರತಿಯೊಂದು ವಿಚಾರದಲ್ಲೂ ಕೂಡ ಈ ಸ್ತ್ರೀ, ಪುರುಷರನ್ನು ನಮ್ಮದೇ ಆದ ರೀತಿಯಲ್ಲಿ, ನಮ್ಮ ಸಂಸ್ಕೃತಿಗೆ ಒಗ್ಗಿಸಿಕೊಂಡು ನೋಡುತ್ತಾ ಬಂದಿರುವಂಥ ಚರಿತ್ರೆಯನ್ನು ಇಲ್ಲಿ ಗಮನಿಸಬಹುದು. ರಾಮಾಯಣ ಮತ್ತು ಮಹಾಭಾರತದಂಥ ಪಾತ್ರಗಳಲ್ಲಿಯೂ ಕೂಡ ನಾವು ಕಲಿಯುವುದು ಬಹಳ ಇದೆ. ಹಿಂದೆ ನೋಡಿ ಮುಂದೆ ಹೋಗು ಅನ್ನುವಂಥ ಮಾತನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ದಶರಥ ಒಂದುವೇಳೆ ಮೂರು ಜನ ಪತ್ನಿಯರನ್ನು ಮಾಡಿಕೊಳ್ಳದೇ ಇದ್ದಿದ್ದರೆ, ರಾಮಾಯಣವೂ ನಡೆಯುತ್ತಿರಲಿಲ್ಲವೆಂದೆನಿಸುತ್ತದೆ.

ಒಬ್ಬ ಹೆಂಡತಿ ಇರುವಂಥ ರಾಜನಿಗೆ ಬಹಳ ಕಡಿಮೆ ಕಥೆ ಇರುತ್ತದೆ. ಆದರೆ, ಬಹಳಷ್ಟು ಪತ್ನಿಯರನ್ನು ಹೊಂದಿದಂಥ ರಾಜನಿಗೆ ಬಹಳಷ್ಟು ಕಥೆಗಳಿರುತ್ತವೆ. ಒಬ್ಬ ರಾಜ, ಸತ್ತಾಗ ಏಳುನೂರು ಜನ ಪತ್ನಿಯರು ಸಹಗಮನ ಮಾಡಿದರು ಎನ್ನುವುದನ್ನು ರಜಪೂತ ಮನೆತನದ ಕಥೆಗಳನ್ನು ಓದಿದಾಗ, ಇದನ್ನು ನಾವು ನೋಡುತ್ತೇವೆ. ಅಂದರೆ, ಸಹಗಮನ ಪದ್ಧತಿಯಿಂದ ನಮಗೇನು ಗೊತ್ತಾಗುತ್ತದೆಂದರೆ, ಒಬ್ಬ ಮಹಿಳೆ ಗಂಡ ಸತ್ತಮೇಲೆ ಅವಳಿಗೆ ಈ ಭೂಮಿ ಮೇಲೆ ಏನೂ ಕೆಲಸ ಇಲ್ಲ, ಅವಳಿಂದ ಯಾವರೀತಿಯ ಉಪಯೋಗವೂ ಇಲ್ಲ. ಅವಳೂ ಕೂಡ ಗಂಡನ ಚಿತೆ ಏರಿ ಸಾಯಬೇಕು: ಅನ್ನುವಂಥ ಒಂದು ಮನೋಭಾವ ಇತ್ತಲ್ಲಾ, ಇದು ಏನು ಹೇಳುತ್ತದೆ ಎಂದರೆ ಮಹಿಳೆ ಕೇವಲ ಪುರುಷನಿಗಾಗಿ ಬದುಕಬೇಕು. ಪುರುಷ ಇಲ್ಲದಿದ್ದರೆ, ಅವಳು ಬದುಕಬಾರದು ಅನ್ನುವಂಥ ಪದ್ಧತಿ ಇತ್ತು. ಹಾಗಿದ್ದಾಗ ನಾವು ಈಗ 16-18ನೇ ಶತಮಾನದಿಂದ ಈಚೆಗೆ ಮಹಿಳೆ ಬಗ್ಗೆ ಆಲೋಚನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಇದರಿಂದ, ಹಿಂದೆ ಯಾವ ಯಾವ ಮೌಢ್ಯಗಳು ಹೆಣ್ಣನ್ನು ಮುತ್ತಿಕೊಂಡಿದ್ದವೋ, ಯಾವ ಮೌಢ್ಯದಿಂದ ಅವಳನ್ನು ನೋಡುತ್ತಾ ಇದ್ದೇವೋ ಆ ಎಲ್ಲಾ ಮೌಢ್ಯಗಳು ಇವತ್ತಿಗೂ ಅವಳಲ್ಲಿ ಮನೆ ಮಾಡಿವೆ. ಇದರಿಂದ, ಇವತ್ತಿಗೂ ಮಹಿಳೆ ಬೌದ್ಧಿಕವಾಗಿ ಪ್ರಥಮ ದರ್ಜೆಗೆ ಏರುವುದಕ್ಕೆ ತೊಂದರೆಯಾಗುತ್ತಿದೆ. ಇದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ನಾನು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ವರದಕ್ಷಿಣೆ ಪದ್ಧತಿಯಿಂದ ಕೊಲೆಯಾಗುತ್ತವೆ, ಅವಳ ಸರವನ್ನು ಕಿತ್ತುಕೊಳ್ಳುತ್ತಾರೆ, ಅವಳ ಒಡವೆಯಿಂದ ಅವಳನ್ನು ಸಾಯಿಸುತ್ತಾರೆ. ಇಂತಹ ಎಲ್ಲಾ ಹೇಳಿಕೆಗಳ ಹಿಂದೆ ಏನಿದೆ ಎಂದರೆ, ಮಹಿಳೆಯನ್ನು ನಾವು ಮನುಷ್ಯಳಾಗಿ ಕಾಣುತ್ತಾ ಇಲ್ಲ. ವರದಕ್ಷಿಣೆ ತೆಗೆದುಕೊಳ್ಳುವುದು ಎಂದರೆ ಏನು? ನಿಮಗೆ ಹೆಣ್ಣನ್ನು ಕೊಡುತ್ತೇನೆ, ಮತ್ತೆ ಇಷ್ಟು ಹಣವನ್ನೂ ಕೊಡುತ್ತೇನೆ. ನೀನು ಅವಳನ್ನು ಸರಿಯಾಗಿ ನೋಡಿಕೋ ಅನ್ನುವಂಥ ಒಂದು ಕಾಲ ಇತ್ತು. ಅದು ತೆರ ಕೊಡುವಂಥ ಪದ್ಧತಿ. ಆ ಗಂಡಿಗೆ ಇಷ್ಟು ಹಣವನ್ನು ಕೊಡುತ್ತೇನೆ, ನೀನು ಅವಳನ್ನು ಬಹಳ ಚೆನ್ನಾಗಿ ಕಾಪಾಡಿಕೊಳ್ಳಬೇಕು. ಇಷ್ಟು ಹಣವನ್ನು ನಿನಗೆ ವರದಕ್ಷಿಣೆ ರೂಪದಲ್ಲಿ ಕೊಡುತ್ತೇನೆಂದು ಹೆಣ್ಣಿನ ತಂದೆ ಕೊಟ್ಟಾಗ, ಅವನು ಅವಳನ್ನು ಯಾವ ದೃಷ್ಟಿಯಿಂದ ನೋಡುತ್ತಾನೆ? ವರದಕ್ಷಿಣೆ ಪಡೆಯುವಂತಾದ್ದೇ ಒಂದು ಪಂಜರದ ಗಿಳಿ ರೂಪದಲ್ಲಿ, ಅಂದರೆ ಒಂದು ಗಿಳಿಯನ್ನು ಸಾಕಿದಹಾಗೆ ನಿಮ್ಮ ಮಗಳನ್ನು ನಾನು ಸಾಕುತ್ತೇನೆ, ನೀನು ಇಷ್ಟು ಹಣವನ್ನು ಕೊಟ್ಟುಬಿಡು ಎಂದು ಅವನು ಹೇಳಿದಹಾಗೆ ಅರ್ಥವಾಗುತ್ತದೆ. ಅಲ್ಲಿಗೂ ಕೂಡ ಅವಳು ಮನುಷ್ಯಳಾಗಲಿಲ್ಲ. ಒಂದು ಗಿಳಿಯೇ ಆದಳು. ಆದರೆ, ತೆರ ಕೊಡುವ ಪದ್ಧತಿಯಿಂದ, ಒಂದು ಹಸುವನ್ನು ಅಥವಾ ಕರುವನ್ನು ಕೊಟ್ಟಾಗ, ಇಷ್ಟು ದುಡ್ಡು ಕೊಟ್ಟುಬಿಡು, ಇದನ್ನು ನಿನಗೆ ಕೊಟ್ಟುಬಿಡುತ್ತೇನೆ. ಎಂದೇನು ಹೇಳುತ್ತೇವೆ, ಆ ರೀತಿಯಲ್ಲಿ ಒಂದು ಹೆಣ್ಣನ್ನು ಕೊಡುತ್ತೇವೆ. ನಮ್ಮ ಟ್ರೈಬಲ್ ಜನಾಂಗದಲ್ಲಿ, ಬುಡಕಟ್ಟು ಜನಾಂಗದಲ್ಲಿ ಮಹಿಳೆಯರಿಗೆ ವರದಕ್ಷಿಣೆ ಕೊಡುವುದಿಲ್ಲ. ಅಪ್ಪ ಅಮ್ಮನಿಗೆ ಗಂಡನ ಕಡೆಯವರು ಕನ್ಯಾತೆರವನ್ನು ಕೊಡುತ್ತಾರೆ. ಈ ಕನ್ಯಾತೆರವನ್ನು ಏಕೆ ಕೊಡುತ್ತಾರೆಂದರೆ, ಇನ್ನುಮೇಲೆ ಅವಳು ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯಬೇಕು, ನಮ್ಮ ಕಡೆ ಒಂದು

ಆಳು ಬರುತ್ತಾ ಇದೆ ಎಂದು ಹೇಳುತ್ತಾರೆ. ಅವಳು ಸಿಕ್ಕಾಪಟ್ಟೆ ದುಡಿಯಬೇಕು. ಅವಳು ಮನುಷ್ಯರ ತರಹ ಅಲ್ಲ. ಒಟ್ಟು ಪ್ರಾಣಿ ತರಹ ಇಲ್ಲಿ ದುಡಿಯಬೇಕು. ಆದ್ದರಿಂದ, ಇಷ್ಟು ಹಣವನ್ನು ನಿನಗೆ ಕೊಡುತ್ತಾ ಇದ್ದೇನೆ, ನೀನು ತೆಗೆದುಕೊಂಡು ಹೋಗಿ ನಿನ್ನ ಮಗಳನ್ನು ಕೊಟ್ಟುಬಿಡು ಎಂದು ಹೇಳುತ್ತಾರೆ. ಇದಕ್ಕೆ ಕನ್ಯಾದಾನ ಎಂದು ಹೇಳುತ್ತಾರೆ ಒಬ್ಬ ಬ್ರಾಹ್ಮಣನಿಗೆ 500 ಜನ ಮಹಿಳೆಯರನ್ನು ದಾನ ಮಾಡಿದಂಥ ಪ್ರಸಂಗಗಳನ್ನು ಪುರಾಣದಲ್ಲಿ ನೋಡುತ್ತೇವೆ. ಅಂದರೆ, ಅವನು ಬೇರೆಯವರಿಗೆ ಬೇಕಾದಹಾಗೆ ಮಾರಾಟ ಮಾಡುತ್ತಿದ್ದ. ಡಾ: ಅನುಪಮಾ ನಿರಂಜನಾ ಅವರ ಒಂದು ಕಾದಂಬರಿಯಲ್ಲಿ, ಮಾಧವಿ ಎಂಬ ಕಾದಂಬರಿಯಲ್ಲಿ ಈ ಮಾತು ಬರುತ್ತದೆ. ಋಷಿಮುನಿಗಳೂ ಕೂಡ ದನಕರುಗಳನ್ನು ಮತ್ತು ಮಹಿಳೆಯರನ್ನು ದಾನವಾಗಿ ಪಡೆಯುತ್ತಿದ್ದರು ಮತ್ತು ಅವರು ತಮಗೆ ಬೇಕಾದವರಿಗೆ ಹೇಗೆ ವಿಲೇವಾರಿ ಮಾಡುತ್ತಿದ್ದರು ಎನ್ನುವುದನ್ನು ನೋಡಿದಾಗ, ಒಂದು ಹಸುವಿಗೆ ಹಗ್ಗ ಹಾಕಿ, ಹೇಗೆ ಎಳೆದುಕೊಂಡು ಹೋಗುತ್ತೇವೆಯೋ ಅದೇ ರೀತಿಯಲ್ಲಿ ಮಹಿಳೆಯೂ ಕೂಡ ಹಿಂದೆ, ಹಿಂದೆ ಬರಬೇಕು. ನಿನ್ನನ್ನು ಇಂತಹವರಿಗೆ ದಾನ ಮಾಡಿದ್ದೇನೆ, ನೀನು ಹೋಗು ಎಂದರೆ ಹೋಗುವಂತಾದ್ದು..

12.20 ಪಿ.ಎಂ.

ಇಂಥವರಿಗೆ ದಾನ ಮಾಡಿದ್ದೇವೆ ನೀನು ಹೋಗು ಎಂದು ಹೆಣ್ಣಿಗೆ ಹೇಳಿದರೆ ಹೋಗಬೇಕಾಗಿತ್ತು ಇಂಥ ಸಂಸ್ಕೃತಿಯಲ್ಲಿ ಬೆಳೆದಂಥ ಮಹಿಳೆಗೆ ಎಷ್ಟೆಲ್ಲಾ ಶೋಷಣೆಗೆ ಒಳಗಾದವಳು ಎಂಬ ಬಗ್ಗೆ ಕಲ್ಪನೆ ಸಹ ಬರಲು ಸಾಧ್ಯವಾಗುವುದಿಲ್ಲ. ಏಕೆ ಈ ಪದ್ಧತಿ ಇವತ್ತಿನವರೆಗೆ ಸುಧಾರಣೆಯಾಗುತ್ತಿಲ್ಲವೆಂದರೆ ಹೆಣ್ಣು ತನ್ನನ್ನು ತಾನೇ ಇನ್ನೂ ಅರ್ಥ ಮಾಡಿಕೊಂಡಿಲ್ಲ. ಪುರುಷ ಅರ್ಥ ಮಾಡಿಕೊಳ್ಳುವುದು ಬೇರೆ ವಿಚಾರ. ಆದರೆ ಹೆಣ್ಣು ತನ್ನನ್ನು ತಾನೇ ಇನ್ನೂ ಅರ್ಥಮಾಡಿಕೊಂಡಿಲ್ಲ. ಮಹಿಳೆಯ ಸಮಸ್ಯೆಗಳು ಏನು ಎಂದು ಮಹಿಳೆಗೇ ಗೊತ್ತಿಲ್ಲ. ಯಾವತ್ತು ಮಹಿಳೆ ಸ್ತ್ರೀವಾದಿನೆಲೆಯಿಂದ ಇದರ ಬಗ್ಗೆ ವಿಚಾರ ಮಾಡುತ್ತಾಳೋ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಇದರಲ್ಲಿ ತೊಂದರೆಯೇನಿದೆ, ಪುರುಷರ ಜೊತೆ ಹೊಂದಾಣಿಕೆಯಿಂದ ಬಾಳ್ವೆ ಮಾಡುತ್ತಿರುವುದರಲ್ಲಿ ಏನು ಶೋಷಣೆ ನನಗೆ ಆಗುತ್ತಿದೆ, ನನ್ನಿಂದ ಇನ್ನೊಬ್ಬರಿಗೆ ಏನು ಶೋಷಣೆಯಾಗುತ್ತಿದೆ, ಎನ್ನುವ ಬಗ್ಗೆ ಅರ್ಥ ಮಾಡಿಕೊಂಡಿದ್ದೇ ಆದರೆ ಅವತ್ತಿಗೆ ಇದರಲ್ಲಿ ಸುಧಾರಣೆಯಾಗಬಹುದು. ಇಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಅದೇನೆಂದರೆ, ಹುಚ್ಚನಂಥ ಗಂಡ, ಹುಲಿಯಂಥ ಮೆದುನ, ದತ್ತುರವ ನನ್ನ ನಗೆಹಣ್ಣೆ, ದತ್ತುರವ ನನ್ನ ನಗೆಹಣ್ಣೆ ಕೈಯಾಗ ಹ್ಯಾಂಗೆ ಈಜಿ ಬರಲಿ ಹಡೆದವ್ವ ಎಂದು ಒಬ್ಬ ಹೆಣ್ಣು ಮಗಳು ಕೇಳುತ್ತಾಳೆ. ಇಲ್ಲಿ ಹುಚ್ಚನಂಥ ಗಂಡ, ಹುಲಿಯಂಥ ಮೈದುನ ಎಂದು ಹೇಳುವುದರ ಜೊತೆಗೆ ನಗೆಹಣ್ಣೆ ಎಂದೂ ಸಹ ಹೇಳುತ್ತಾಳೆ, ಇಲ್ಲಿ ನಗೆಹಣ್ಣೆ ಎಂದರೆ ಓರಗಿತ್ತಿ. ಆ ನಗೆಹಣ್ಣೆಯನ್ನು ದತ್ತೂರ ಗಿಡಕ್ಕೆ ಹೋಲಿಸುತ್ತಾಳೆ. ದತ್ತೂರ ಗಿಡ ವಿಷ ಅಂಥ ಗಿಡಕ್ಕೆ ಓರಗಿತ್ತಿಯನ್ನು ಹೋಲಿಸುತ್ತಾಳೆ.

ಅಂಥ ವಿಷವನ್ನು ಹೊಂದಿರುವ ಓರಗಿತ್ತಿ ಇರುವಾಗ ನಾನು ಹೇಗೆ ಸಂಸಾರವನ್ನು ಈಜಿ ಬರಲಿ ಎಂದು ಆ ಹೆಣ್ಣು ಕೇಳುತ್ತಾಳೆ. ಇಲ್ಲಿ ಕೇವಲ ಪುರುಷರು ಮಾತ್ರವಲ್ಲ, ಕುಟುಂಬದ ಮಹಿಳೆಯೂ ಸೇರಿ ಆ ಹೆಣ್ಣುಮಗಳಿಗೆ ಶೋಷಣೆ ಮಾಡುತ್ತಿದ್ದಾರೆ, ಕುಟುಂಬದ ಎಲ್ಲರಿಂದಲೂ ಶೋಷಣೆಯಾಗುತ್ತಿದೆ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಬಹಳ ಜನ ಸದಸ್ಯರು ಸೊಸೆಯನ್ನು ಅತ್ತೆಯೇ ಸುಡುತ್ತಾಳೆ ಎಂದು ಹೇಳಿದರು. ಇಲ್ಲಿ ಅತ್ತೆಯನ್ನು ಏಕೆ ಆ ಮಟ್ಟದಲ್ಲಿ ನೋಡುತ್ತೀರಾ? ಅವಳೂ ಸಹ ಒಬ್ಬ ಮನುಷ್ಯಳು. ಮನುಷ್ಯನಲ್ಲಿರುವ ಎಲ್ಲಾ ದೌರ್ಭಲ್ಯಗಳೂ ಸಹ ಅವಳಲ್ಲಿವೆ. ತಾವು ಹೆಣ್ಣು ಮತ್ತು ಗಂಡಿನ ಮಧ್ಯೆ ಒಂದು ಗೆರೆ ಎಳೆದು ಅವಳಿಗೆ ಇಷ್ಟು ಇವನಿಗೆ ಇಷ್ಟು ಎಂದು ವಿಂಗಡಣೆ ಮಾಡುವುದು ಸರಿಯಲ್ಲ. ಕುಟುಂಬದಲ್ಲಿ ಗಂಡು ಹೆಣ್ಣು ಸಮನಾಗಿ ಹೆಜ್ಜೆಯನ್ನಿಡುವಾಗ, ಬರತಕ್ಕ ಕಷ್ಟ ಸುಖಗಳನ್ನು ನೋವು ನಲಿವುಗಳನ್ನು ಸಮನಾಗಿ ನಿವಾರಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ನೀವು ಕೆಲಸ ಮಾಡಬೇಕು. ಒಬ್ಬ ಗಂಡನಿಗೆ ಹೆಂಡತಿ ಸತ್ತರೆ ಅವನು ಸಣ್ಣ ವಯಸ್ಸಿನವನಾಗಿದ್ದರೆ ಮೂರು ತಿಂಗಳಿನಲ್ಲಿ ಮತ್ತೆ ಮದುವೆ ಮಾಡಿಬಿಡುತ್ತಾರೆ. ಆದರೆ ಸಣ್ಣ ವಯಸ್ಸಿನ ಹೆಣ್ಣು ಮಗಳು ವಿಧವೆಯಾದರೆ ತಲೆಬೋಳಿಸುವಂಥ ಪದ್ದತಿ ಸಹ ಇದೆ. ಆದರೆ ಬುಡಕಟ್ಟು ಜನಾಂಗದವರಲ್ಲಿ ಆ ಪದ್ಧತಿ ಇಲ್ಲ. ಪುರುಷ ಪ್ರಧಾನ ಹೇಗೆ ಎಂಬ ಬಗ್ಗೆ ನಮ್ಮ ಲಂಬಾಣಿ ಜನಾಂಗದಲ್ಲಿ ಒಂದು ಹಾಡು ಇದೆ ಅಕ್ಕಾ ಪಾರಿವಾಳಕ್ಕಾಗಿ ಈ ರಸ್ತೆಯನ್ನು ಬಿಟ್ಟು ಆಚೆ ಹೋಗು, ಅಂದರೆ, ನಮ್ಮ ಅಪ್ಪ ಬಂದರೆ ನಿನ್ನನ್ನು ಹಿಡಿದು ಬಿಡುತ್ತಾನೆ, ನಿನ್ನನ್ನು ಸಾರಾಯಿಯ ನೆಂಜಿಕೆ ಮಾಡಿಕೊಂಡು ಬಿಡುತ್ತಾನೆ, ಹಾಗೆಯೇ ಆ ಹೆಣ್ಣುಮಗಳು ಅಕ್ಕ ಪಾರಿವಾಳಕ್ಕಾಗಿ ನೀನು ದೂರ ಹೋಗಕ್ಕ ನಮ್ಮ ಮಾವ ಬರ್ತಾನೆ, ನಮ್ಮ ಚಿಕ್ಕಪ್ಪ ಬರುತ್ತಾನೆ, ದೊಡ್ಡಪ್ಪ ಬರುತ್ತಾನೆ ಅವನು ನಿಮ್ಮನ್ನು ತಿಂದು ಬಿಡುತ್ತಾನೆ ಎಂಬ ಮಾತನ್ನು ಅವಳು ಹೇಳಿದಾಗ ಇಲ್ಲಿ ಎಲ್ಲೂ ತಾಯಿ, ದೊಡ್ಡಮ್ಮ, ಚಿಕ್ಕಮ್ಮ, ಅತ್ತೆ ಈ ರೀತಿ ಬರುತ್ತಾಳೆ ಎಂದು ಹೇಳುವುದಿಲ್ಲ. ಇದರಿಂದ ಸ್ತ್ರೀಯರಿಗಿಂತ ಪುರುಷರು ಒಂದು ಕಾಲದಲ್ಲಿ ಮಹಿಳೆಯನ್ನು ಹೆಚ್ಚು ಶೋಷಣೆಗೆ ಗುರಿಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಅದು ಇವತ್ತಿಗೂ ಇದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಅಂದರೆ ಪುರುಷರು ಮಾತ್ರ ಹೆಣ್ಣಿನ ಶೋಷಣೆ ಮಾಡುತ್ತಿದ್ದಾರೆ. ಬೇರೆ ಮಹಿಳೆಯರು ದೇವತೆಯರು ಎಂಬುದು ಸರಿಯಲ್ಲ. ನಾವೇನೂ ದೇವತೆಯರಲ್ಲ. ದೇವ, ದೇವತೆಯರನ್ನು ಮಾಡಿಕೊಂಡಿರುವವರು ನಾವು. ಯಾರೂ ಸಹ ದೇವ, ಯಾವಳೂ ಸಹ ದೇವತೆಯಲ್ಲ. ದೇವರ ಬಗ್ಗೆ ನಾವು ಬೇಕಾದಷ್ಟು ಕತೆಗಳನ್ನು ಬರೆದು ಬಹಳ ರಂಜಿತವಾಗಿ ಮಾಡಿದ್ದೇವೆ. ದುರ್ಬಲ ವರ್ಗದ ಜನಕ್ಕೆ ಈಶ್ವರನನ್ನು ಹೇಗೆ ಹೋಲಿಸಿದ್ದಾರೆಂದರೆ, ಈಶ್ವರನ ಮನೆಯ ಬಚ್ಚಲಿಗೆ ಬಾಗಿಲೇ ಇರಲಿಲ್ಲ, ಈಶ್ವರನ ಹೆಂಡತಿ ಬಹಳ ಕಷ್ಟ ಪಟ್ಟು ಸ್ನಾನ ಮಾಡುತ್ತಿರುತ್ತಾಳೆ, ಅವಳ ಮೈಮೇಲೆ ಗಣೇಶನನ್ನು ಮಾಡುವಷ್ಟು ಕೊಳೆ ಇರುತ್ತದೆ ಎಂಬುದಾಗೆಲ್ಲಾ ನಾವು ಓದುತ್ತೇವೆ. ಜನಸಾಮಾನ್ಯರ ಪದ್ದತಿಯನ್ನೇ ದೇವರ ಮೇಲೆ ಈ ರೀತಿ ಹೇಳಿರುವುದರಿಂದ, ಇಂಥವರೇ ಕೆಟ್ಟವರು, ಇಂಥವರೇ ಒಳ್ಳೆಯವರು

ಎಂದು ಹೇಳಲು ಸಾಧ್ಯವಾಗುವುದಿಲ್ಲ. ಬಹಳಷ್ಟು ಜನ ಪುರುಷರು ಋಷಿ ಮುನಿಗಳಾಗಿಹೋದರು. ಆದೇ ರೀತಿ ಮಹಿಳೆಯರೂ ಸಹ ಭಕ್ತಿ ಪಂಥಕ್ಕೆ ಸೇರಿದ್ದರು. ಮನುಷ್ಯರ ಸಂಗವೇ ಬೇಡವೆಂದು ಮಹಿಳೆಯರಿಗೆ ಅನ್ನಿಸಿ ಆ ರೀತಿ ಭಕ್ತಿ ಪಂಥಕ್ಕೆ ಸೇರಿದರು. ಆದಕ್ಕಾಗಿಯೇ ಅಕ್ಕಮಹಾದೇವಿಯವರು ಈ ಕೆಡುವ ಸುಡುವ ಗಂಡನ ನಾ ಒಲ್ಲೆ ಎಂದು ಹೇಳಿದ್ದು. ಏಕೆಂದರೆ ಮನುಷ್ಯನಲ್ಲಿ ಅಷ್ಟೊಂದು ಕೌರ್ಯ ನೀಚತನವನ್ನು ಕಂಡಾಗ ಭಕ್ತ ಮೀರ, ಸಂತಸಕ್ಕೂಬಾಯಿ, ಜನಬಾಯಿ ಇವರೆಲ್ಲರೂ ಪಾಂಡುರಂಗನ, ಕೃಷ್ಣನ ಭಕ್ತರಾದರು. ಅಕ್ಕಮಹಾದೇವಿಯವರು ಶಿವನ ಭಕ್ತೆಯಾದರು. ಇವರೆಲ್ಲಾ ಏಕೆ ಈ ಮನುಷ್ಯ ಕುಲವನ್ನು ಬಿಟ್ಟು ಎಲ್ಲೋ ಕಾಣದ ದೇವರನ್ನು ಹುಡುಕಿಕೊಂಡು ಹೋದರೆಂದರೆ ಇವರಿಗೆ ಮನುಷ್ಯರಲ್ಲಿರುವ ಕ್ರೌರ್ಯವನ್ನು ಸಹಿಸಲು ಆಗಲಿಲ್ಲ. ಈಗಲೂ ಒಬ್ಬ ಹೆಣ್ಣು ಮಗಳನ್ನು ವಯಸ್ಸಾದ ಗಂಡಿಗೆ ಮದುವೆ ಮಾಡಿಕೊಡುತ್ತಾರೆ. ಅಂಥ ಸಂದರ್ಭದಲ್ಲಿ ಅವರು ಏನು ಮಾಡುತ್ತಾರೆ?

ಮುಪ್ಪಿನ ಮುದುಕಗೆ ಕೊಟ್ಟರೆ ತಾಯಿತಂದೆ
ಮುಟ್ಟಬೇಡಜ್ಜ ಮುದಿಯಜ್ಜ,
ಮುಟ್ಟಬೇಡಜ್ಜ ಮುದಿಯಜ್ಜ,
ನಾ ನಿನಗೆ ಚೊಚ್ಚಲ ಮಗಳಾಗಿರುತ್ತೀನಿ

ಎನ್ನುವಂಥ ಬಿಂಕವನ್ನು ತೋರಿಸುತ್ತಾಳೆ ಅವಳು. ಬೇಡಪ್ಪ ನಿನಗೆ ಮಗಳಾಗಿ ಇರುತ್ತೇನೆ. ನೀನು ನನ್ನನ್ನು ಮದುವೆಯಾಗಬೇಡ ಎಂದು ಕೇಳಿಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ವರದಕ್ಷಿಣೆಯಿಂದ ಇರಬಹುದು, ಬಡತನದಿಂದ ಇರಬಹುದು, ದಾರಿದ್ರ್ಯ ಇರಬಹುದು ಈ ಎಲ್ಲಾ ಕಾರಣಕ್ಕಾಗಿ ತಮ್ಮ ಪ್ರಾಯದ ಮಕ್ಕಳನ್ನು ಮುದುಕರಿಗೆ ಕೊಡುವಂಥ ಸಂದರ್ಭಗಳು ಸಹ ಇರುತ್ತವೆ. ಆದರೂ ಜಾನಪದದಲ್ಲಿ ಹೆಣ್ಣನ್ನು ಎಷ್ಟು ಚೆನ್ನಾಗಿ ಚಿತ್ರಣ ಮಾಡಿದ್ದಾರೆ. ಗಂಡನ್ನು ಹೇಗೆ ಕಂಡಿದ್ದಾರೆ ಎಂಬುದನ್ನೆಲ್ಲಾ ನೋಡಿದಾಗ ಈ ಸಮಾಜ ಇಷ್ಟೊಂದು ಕೆಟ್ಟಿರಲ್ಲಿ ಎಂಬುದು ತಿಳಿಯುತ್ತದೆ. ಸ್ವಲ್ಪ ಮಟ್ಟಿಗೆ ಕೆಟ್ಟಿದ್ದಿರಬಹುದು, ಈಗಲೂ ಕೆಟ್ಟಿದೆಯೆಂದು ನಾನು ಹೇಳುವುದಿಲ್ಲ, ಆದರೆ ಯಾವಾಗಲೂ ನೀಚ ಜನರು ಇದ್ದೇ ಇರುತ್ತಾರೆ ಮತ್ತು ಒಳ್ಳೆ ಜನರೂ ಇದ್ದೇ ಇರುತ್ತಾರೆ. ಜಾನಪದದಲ್ಲಿ ಗಂಡು ಮಗುವಿನ ಬಗ್ಗೆ ಏನು ಹೇಳುತ್ತಾರೆಂದರೆ

ಎಲ್ಲಾರೂ ಇರಲವ್ವ ಹುಲ್ಲಾಗಿ
ಬೆಳೆಯಾಲಿನಲ್ಲಿ ಬಡ್ಡಾಗಿ ಚಿಗಿಯಾಲೆನಲ್ಲಿ
ಬಡ್ಡಾಗಿ ಚಿಗಿಯಾಲೆ ಕಂದಯ್ಯ
ದೇವಂತನಾಗಿ ಬೆಳೆಯಾಲೆ ಹಾಗೆಯೇ
ಹೆಣ್ಣು ಮಗುವಿಗೆ ಹೇಗೆ ಹೇಳುತ್ತಾಳೆಂದರೆ

ಒಂದಣ್ಣ ಇದ್ದರೆ ಮಂಡಿಯಾಗಿದ್ದಾಳ
ಬಂಧುವನ ಬೆಲ್ಲ ಹೊರಿಸಾಳ
ಬಂಧುವನ ಬೆಲ್ಲ ಹೊರಿಸಾಳ ನನ ಮಗಳು
ಹಡದಮ್ಮನಗಿಂತ ಅತಿ ತರುಣ.

ಅಂದರೆ ನನ್ನ ಮಗಳೂ ಸಹ ನನಗೆ ಬಹಳ ಉಪಕಾರಿಯಾಗಿದ್ದಾಳೆ. ಅವಳುವ ನನಗೆ ಬೇಕು ಎನ್ನುವಂಥದನ್ನು ತಾಯಿ ಗಂಡು ಹೆಣ್ಣಿನ ನಡುವೆ ಒಳ್ಳೆಯ ಭಾವನೆಯನ್ನು ತೋರಿಸಿರುವುದನ್ನು ಜಾನಪದದಲ್ಲಿ ನೋಡುತ್ತೇವೆ. ಇವೆಲ್ಲವನ್ನೂ ನೋಡಿದಾಗ ಪ್ರಾಚೀನ ಕಾಲದಿಂದಲೂ ಹೆಣ್ಣು ಗಂಡು ಸಮಾನವಾಗಿಯೇ ಇದ್ದರೂ ಬರುತ್ತಾ ಬರುತ್ತಾ ಪುರುಷರ ಪ್ರಾಬಲ್ಯ ಜಾಸ್ತಿಯಾಯಿತು, ಆಗ ಆಳುವವನು ಏಳು ಜನರನ್ನು ಬೇಕಾದರೂ ಮದುವೆ ಮಾಡಿಕೊಳ್ಳಬಹುದು ಎಂಬ ಪದ್ಧತಿ ಬಂತು, ಇದರಿಂದಾಗಿ ಮಹಿಳೆಯರ ಬಾಳು ಏನು ಬೇಕಾದರೂ ಸಹಿಸಿಕೊಳ್ಳಬಹುದು ಎಂಬ ಮಟ್ಟಕ್ಕೆ ಬಂತು. ಇದಕ್ಕೆ ವೈಜ್ಞಾನಿಕ ಕಾರಣವನ್ನು ಚಂದ್ರಶೇಖರ್ ಎಂಬ ಪ್ರಾಚಾರ್ಯರು ನನಗೆ ಹೇಳಿದರು. ಅದು ನಿಜವಾಗಿಯೂ ಬಹಳ ಸತ್ಯವೆಂದು ಕಾಣಿಸುತ್ತದೆ. ನೀವು ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಸಾವಿರ ಮಾತುಗಳನ್ನಾಡಿ ಆದರೆ ಒಂದು ಮಾತ್ರ ನಿಜ, ಅದೇನೆಂದರೆ, ಮಹಿಳೆ ಹೆಣ್ಣು, ಅವಳು ಮಕ್ಕಳನ್ನು ಹೆರುತ್ತಾಳೆ, ಅವಳಿಗೆ ಪುರುಷನ ನೆರವು ಬೇಕು. ಅದೇ ರೀತಿ ಗಂಡಸು ಎಲ್ಲಿ ಬೇಕಾದರೂ ಹೋಗಬಹುದು, ಆದರೆ ಮಹಿಳೆ ಏನಾದರೂ ಮಾಡಿ ಪುರುಷನನ್ನು ಕಟ್ಟಿಹಾಕಿಕೊಳ್ಳಬೇಕು, ತನ್ನ ಗಂಡನನ್ನಾಗಿ ಉಳಿಸಿಕೊಳ್ಳಬೇಕು, ಅವನು ಬೇಕಾದರೆ ಓಡಿ ಹೋಗುತ್ತಾನೆ, ಆದರೆ ತನ್ನನ್ನು ಮನೆ, ಮಕ್ಕಳನ್ನು ನೋಡಿಕೊಳ್ಳಲು ಒಬ್ಬರ ಆಸರೆ ಬೇಕು ಎಂದು ಆ ಹೆಣ್ಣು ಬೇಕಾದರೆ ಇಬ್ಬರನ್ನು ಮದುವೆ ಮಾಡಿಕೋ ನಾನು ಏನು ಮಾತನಾಡುವುದಿಲ್ಲ ಆದರೆ ನನ್ನನ್ನು ಮಾತ್ರ ಬಿಡಬೇಡ ಎಂಬ ದಿನತೆಯನ್ನು ತೋರಿಸಿದಳು. ಏಕೆಂದರೆ ಅವಳು ಆರ್ಥಿಕವಾಗಿ ಬಹಳ ದುರ್ಬಲಳು, ಅವಳ ಕೆಲಸ ಮನೆಯ ಕೆಲಸ, ಬೇರೆ ಕೆಲಸವನ್ನು ಮಾಡಲು ಅವಳಿಗೆ ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲಿ ಹೆಣ್ಣು ಪ್ರತಿಯೊಂದು ಸಂದರ್ಭದಲ್ಲೂ ಪುರುಷನಿಗೆ ಸಹಿಲತೆಯನ್ನು ಕೊಟ್ಟುಕೊಂಡು ಬಂದಳು. ಮೂರು ಜನ ಹೆಣ್ಣುಮಕ್ಕಳನ್ನು ಮದುವೆಯಾಗಿ ನಾಲ್ಕನೆಯವಳನ್ನೂ ಸಹ ಪುರುಷ ಮದುವೆಯಾಗುತ್ತಿದ್ದ. ಇದರ ಬಗ್ಗೆ ನಾನು ಎಂ.ಎಲ್.ಸಿ. ಯಾಗಿದ್ದಾಗ ಹೇಳಿದ್ದೆ, ಅದರ ಬಗ್ಗೆ ಬಹಳಷ್ಟು ಪತ್ರಿಕೆಯವರು ನನ್ನನ್ನು ವ್ಯಂಗ್ಯವಾಗಿಯೋ, ಒಳ್ಳೆಯದ್ದಾಗಿಯೋ ಬರೆಯುತ್ತಿರುತ್ತಾರೆ. ನಾನು ಏನು ಹೇಳಿದ್ದೆ ಎಂದರೆ, ಅವನು ನಾಲ್ಕನೆಯವಳನ್ನು ಮದುವೆಯಾದಾಗಲೂ ಅವನಿಗೆ ಮದುವೆಯಾಗಿದೆಯೆಂದು ಹೇಳಿರಲಿಲ್ಲ. ಆ ಹೆಣ್ಣು ಕೊನೆಗೆ ನನ್ನ ಹತ್ತಿರ ಬಂದು ಹೇಳಿದಳು. ಆ ವ್ಯಕ್ತಿ ಮೂರು ಜನರನ್ನು ಮದುವೆಯಾಗಿದ್ದರೂ ಸಹ ನಾಲ್ಕನೇ ಮದುವೆಯಾಗುತ್ತಿದ್ದ ಹೆಣ್ಣಿಗೆ ಇದು ಗೊತ್ತಿಲ್ಲ. ಮದುವೆಯಾಗಿಬಿಡುತ್ತಾಳೆ. ನಾನು ಈಗಾಗಲೇ ಮೂರು ಮದುವೆಯಾಗಿದ್ದೇನೆ, ನಿನ್ನನ್ನೂ ಸಹ ಮದುವೆಯಾಗಿಬಿಟ್ಟಿದ್ದೇನೆ, ಬೇಕಾದರೆ ಇರು, ಸಾಕಾದರೆ ಹೋಗು ಎಂದು

ಅವನು ಹೇಳುತ್ತಾನೆಂದು ಇಟ್ಟುಕೊಳ್ಳಿ, ಆಗ ಈ ಸಮಾಜದಲ್ಲಿ ಆ ಹೆಣ್ಣಿಗೆ ಮತ್ತೆ ಮಾನ, ಮರ್ಯಾದೆ ಇರುವುದಿಲ್ಲ. ಆದ್ದರಿಂದ ಅನಿವಾರ್ಯವಾಗಿ ಅವನ ಜೊತೆ ಇರಬೇಕಾಗುತ್ತದೆ. ಉದ್ಯೋಗಸ್ತ ಮಹಿಳೆಯರು ವಿವಾಹ ವಿಚ್ಛೇದನವನ್ನು ಪಡೆದು ಹೋಗುತ್ತಾರೆಂದು ನಾವು ಈಗ ಹೇಳುತ್ತೇವೆ. ಆದರೆ ಅದು ಸಹ ಅಷ್ಟೊಂದು ಸುಲಭವಲ್ಲ. ವಿವಾಹ ವಿಚ್ಛೇದನ ಪಡೆದು ಬೇರೆ ಹೋದ ಮಹಿಳೆಯನ್ನು ಬೇರೆಯವರು ಬಿಡುವುದಿಲ್ಲ. ನೂರಾರು ಚುಚ್ಚು ಮಾತುಗಳನ್ನು ಹೇಳುತ್ತಾರೆ. ಅವಳು ಮಾನಸಿಕವಾಗಿ ದಿನೇ ದಿನೇ ಕುಗ್ಗುತ್ತಾಳೆ. ಹಿಂದೆ ಗಂಡ ಸತ್ತ ಕೂಡಲೇ ಹೆಣ್ಣನ್ನು ಚಿತೆಗೆ ಇಟ್ಟು ಹೇಗೆ ಸುಡುತ್ತಿದ್ದರೋ ಅದಕ್ಕಿಂತ ಭೀಕರವಾಗಿ ಅವಳನ್ನು ನಾನಾ ರೀತಿಯ ಮಾತುಗಳಿಂದ ಇಂದು ಕೊಲ್ಲುತ್ತಾರೆ. ಹಿಂದೆ ಒಂದೇ ಸಲ ಸತ್ತು ಹೋಗುತ್ತಿದ್ದಳು, ಅದರ ಬದಲಾಗಿ ಇಂದು ದಿನೇ ಸಾಯುತ್ತಾ ಹೋಗುತ್ತಾಳೆ. ಹೀಗೆ ದಿನೇ ದಿನೇ ಸಾಯಿಸುವಂಥ ಕ್ರೌರ್ಯ ಇಂದಿಗೂ ಇದೆ. 12ನೇ ಶತಮಾನದಲ್ಲಿ ಬಸವಣ್ಣನವರ ಕಾಲದಿಂದ ಮಹಿಳೆಯರ ಬಗ್ಗೆ ಆಲೋಚನೆ ಮಾಡಿಕೊಂಡು ಬಂದರು, ದೇವದಾಸಿಯರಿಗೆ ಸ್ಥಾನಮಾನ ಕೊಟ್ಟರು, ಕೆಳವರ್ಗದ ಮಹಿಳೆಯರಿಗೂ ಸಹ ಬಸವಣ್ಣನವರು ತಮ್ಮ ಮಹಾಮನೆಯಲ್ಲಿ ಅವಕಾಶ ಮಾಡಿಕೊಟ್ಟರು. ತಮ್ಮ ಬದುಕನ್ನು ವಚನದ ರೂಪದಲ್ಲಿ ಹೇಳಿದರು. ಇವೆಲ್ಲವನ್ನೂ ಹೇಳಿದರೂ ಸಹ ಅನಂತರದ ದಿವಸಗಳಲ್ಲಿ ಮತ್ತೆ ಮತ್ತೆ ಯಥಾಪ್ರಕಾರವಾಯಿತು, ಯಾರೂ ಸಹ ಅದನ್ನು ಮುಂದುವರೆಸಲಿಲ್ಲ, ಯಾರು ಬಸವಣ್ಣನ ಜನರೆಂದರೋ ಅವರೇ ಬಸವಣ್ಣನವರನ್ನು, ಅವರ ತತ್ವವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಸ್ತ್ರೀ ಪುರುಷರೆಲ್ಲರೂ ಕೂಡ ನಾವೆಲ್ಲರೂ ಸಮಾನರು, ಒಂದೇ, ಎಂಬ ತತ್ವದ ಮೇಲೆ ಚೆನ್ನಾಗಿ ಇರಬಹುದಾಗಿತ್ತು. ಆದರೆ ಹಾಗೆ ಆಗಲಿಲ್ಲ. ಹೀಗೆಲ್ಲಾ ಇರುವಾಗ ನಮ್ಮಲ್ಲಿ ಸುಮಾರು 35 ಸಾವಿರ ಚಿಲ್ಲರೆ ಪ್ರತಿನಿಧಿಗಳು ನಮ್ಮಲ್ಲಿ ಬಂದಿದ್ದಾರೆ. ಮಹಿಳೆಯರ ಕುರಿತು ಬಹಳ ಒಳ್ಳೆಯ ಮತ್ತು ಮೆಚ್ಚುಕೊಳ್ಳುವಂತಹ ಕೆಲಸವನ್ನು ನಮ್ಮ ಸರ್ಕಾರಗಳು ಮಾಡುತ್ತಿವೆ ಎಂದು ಹೇಳಬಯಸುತ್ತೇನೆ. ಯಾವ ಯಾವ ಮಹಿಳೆ ಇವೊತ್ತು ರಾಜಕೀಯಕ್ಕೆ ಅಥವಾ ಮಹತ್ವಪೂರಿತವಾದ ಕೆಲಸಗಳನ್ನು ಮಾಡುತ್ತಾಳೋ ಅಂತಹವಳು ಒಂದು ರೀತಿಯಿಂದ ಪತಿಯಿಂದ ವಿಚ್ಛೇದಿತಳಾಗಿರುತ್ತಾಳೆ ಅಥವಾ ಪತಿಯನ್ನು ಕಳೆದುಕೊಂಡವಳಾಗಿರುತ್ತಾಳೆ; ಅಥವಾ ಮದುವೆಯಾಗದೇ ಇರುವವಳಾಗಿರುತ್ತಾಳೆ. ಆಶ್ಚರ್ಯಕರ ಉದಾಹರಣೆಗಳನ್ನು ನಾವು ನೋಡಬಹುದು. ಕಿತ್ತೂರು ರಾಣಿ ಚೆನ್ನಮ್ಮ ಮಲ್ಲಸಜ್ಜನ ರಾಜನು ಸತ್ತ ಮೇಲೆ ರಾಣಿಯಾದಳು. ಹೀಗೆ ಅನಿವಾರ್ಯವಾಗಿ ಮಹಿಳೆಯರಿಗೆ ಸ್ಥಾನವನ್ನು ಕೊಡುತ್ತಾರೆ. ಚಾಮುಂಡೇಶ್ವರಿಯ ಕತೆಯನ್ನು ನೋಡಿ. ಯಾರಿಂದಲೂ ಮಹಿಷಾಸುರನನ್ನು ಹೊಡೆಯಲು ಆಗಲಿಲ್ಲ. ನನ್ನದೊಂದು ಬಾಣ ತೆಗೆದುಕೋ ನನ್ನದೊಂದು ಬಿಲ್ಲು ತೆಗೆದುಕೋ ಎಂದು ಹೇಳಿ ಎಲ್ಲರೂ ಧೈರ್ಯ, ಉತ್ಸಾಹವನ್ನು ತುಂಬಿ ಅವಳನ್ನು ಕಳುಹಿಸುತ್ತಾರೆ. ಅಂದರೆ ಅವಳಾಗಿಯೇ ಯುದ್ಧ ಮಾಡಲು ಬರಲಿಲ್ಲ, ಧೈರ್ಯತುಂಬಿ ಇವರು ಕಳುಹಿಸಿದ್ದಾರೆ. ಹಾಗೆಯೇ ಝಾನ್ಸಿ ಲಕ್ಷ್ಮಿಬಾಯಿ ಕೂಡ ತನ್ನ ಪತಿ ಸ್ವರ್ಗಸ್ಥನಾದ ಮೇಲೆ ಅಧಿಕಾರವನ್ನು

ಮಾಡುತ್ತಾಳೆ. ಇಂದಿರಾ ಗಾಂಧಿಯವರು ಕೂಡ ಹಾಗೆಯೇ ರಾಜಕೀಯದಲ್ಲಿ ಬೆಳಗಿದರು. ಇನ್ನೂ ಬೇರೆ ಬೇರೆ ದೇಶದಲ್ಲಿನ ರಾಣಿಯರ ಬಗ್ಗೆ ನೋಡಿದಾಗ, ಅವರುಗಳ ಕತೆಯನ್ನು ಗಮನಿಸಿದಾಗ, ರಾಜರು ಇದ್ದಾಗ ಆಳ್ವಿಕೆ ನಡೆಸಿದ್ದು ಬಹಳ ಕಡಿಮೆ ಇದೆ. ಇದಕ್ಕೆ ಕಾರಣ ಏನು? ಪುರುಷ ಪ್ರಧಾನ ಸಮಾಜದಲ್ಲಿ ನಾನು ಇಲ್ಲೇ ಇರುತ್ತೇನೆ, ನೀನು ಅಲ್ಲೇ ಇರು ಎಂದು ಹೇಳಿದ ಕಾರಣ; ಪುರುಷ ಪೌರುಷದ ಕಾರಣದಿಂದ ಹಾಗೆ ಆಗಿದೆ. ಅದು ಈಗ ಸ್ವಲ್ಪ ಮಟ್ಟಿಗಾದರೂ ಬದಲಾವಣೆಯಾಗಬೇಕಾಗಿದೆ. ಪರವಾಗಿಲ್ಲ, ನಿನ್ನಲ್ಲಿ ಯೋಗ್ಯತೆ ಇದ್ದರೆ ಮುಂದೆ ಹೋಗು, ಎಂದು ಹೇಳಿದರೂ ಸಾಕು. ಇಷ್ಟನ್ನೇ ನಾವು ಹೇಳುತ್ತಾ ಇರುವುದು. ಆದುದರಿಂದ ಇವೊತ್ತು ಮೀಸಲಾತಿಯ ರೂಪದಲ್ಲಿ ಪಂಚಾಯತ್‌ಗಳಲ್ಲಿ ಅವಕಾಶ ಸಿಕ್ಕಿದೆ ಎಂಬುದು ಸಂತೋಷದ ವಿಚಾರವಾಗಿದೆ. ಆದರೆ ಆ ಮೀಸಲಾತಿಯ ಸ್ಥಿತಿಗತಿಗಳು ಏನಾಗಿವೆ? ಗಂಡ ಎನ್ನುವ ಮನುಷ್ಯ, ಅತ್ತೆ, ನಾದಿನಿ, ಹೀಗೆ ಯಾರಾದರೂ ಒಬ್ಬರು ಬಂದು ಅಧ್ಯಕ್ಷಸ್ಥಾನದಲ್ಲಿ ಕುಳಿತಿರುವ ಮಹಿಳೆಯ ಮಗುವನ್ನು ತಂದು ಬಿಡುತ್ತಾರೆ. ಆ ಮಗು ಅಳುತ್ತಿರುವುದು, ಸಿಂಬಳ ಸುರಿಸಿಕೊಂಡು ಒದ್ದಾಡುವುದು ಮುಂತಾದುವನ್ನು ನೋಡುವಲ್ಲಿ, ಸಂತೈಸುವಲ್ಲಿ ಆಕೆಗೆ ಮನಸ್ಸು ಸೆಳೆಯುತ್ತದೆಯೇ ಹೊರತು ತಾನು ಕುಳಿತಿರುವ ಸ್ಥಾನಮಾನದ ಕಡೆಗೆ ಅಷ್ಟು ಪರಿಜ್ಞಾನ, ಪ್ರಜ್ಞೆ ಇರುವುದಿಲ್ಲ. ಮಗು ಬಿಟ್ಟವರು ತಮಾಷೆ ನೋಡುತ್ತಿರುತ್ತಾರೆ. ಆ ಮಹಿಳೆಯ ಸ್ಥಿತಿಯನ್ನು ನೀವೇ ಯೋಚಿಸಿ. ಅದೇ ತನ್ನ ಗಂಡ ಏನಾದರೂ ಅಂಥ ಸ್ಥಾನವನ್ನು ಗಳಿಸಿಕೊಂಡು ಅಧ್ಯಕ್ಷಸ್ಥಾನದಲ್ಲಿ ಕುಳಿತರೆ ಆತನಿಗೆ ಯಾವುದೇ ತೊಂದರೆಯಾಗಬಾರದು ಎಂದು ಹೆಂಡತಿಯಾದವಳು ಪರಿಶ್ರಮಿಸುತ್ತಾಳೆ. ಆತನು ಮುಂದೆ ಬರಬೇಕು, ಆತನು ಮಾಡುತ್ತಿರುವ ಕೆಲಸದಲ್ಲಿ ಯಶಸ್ವಿಯಾಗಬೇಕು, ಕೀರ್ತಿಗಳಿಸಬೇಕು, ಎಂದು ಸಂಪೂರ್ಣ ಸಹಕಾರವನ್ನು ಹೆಂಡತಿ ಕೊಡುತ್ತಿರುತ್ತಾಳೆ. ಇಲ್ಲಿ ಹೆಣ್ಣಿಗಿರುವ ಮನೋಭಾವನೆಯು ಬೇರೆಯವರಿಗೆ ಇರುವುದಿಲ್ಲ. ಆದ್ದರಿಂದ ಮಾನಸಿಕ ಸಿದ್ಧತೆಯಿಂದ ತಾವೇನು ಮೀಸಲಾತಿಯನ್ನು ಕೊಡುತ್ತಾ ಇದ್ದೀರಿ, ಆಗ ಮಹಿಳೆಯು ಸಂತೋಷ ಪಡುವುದಿಲ್ಲ, ಅವಳು ದುಃಖ ಮತ್ತು ಅಸಮಾನತೆಯನ್ನು ಪಡುತ್ತಿರುತ್ತಾಳೆ ಅಪಮಾನವನ್ನು ಪಡುತ್ತಿರುತ್ತಾಳೆ. ತಮ್ಮಂಥ ಅಧಿಕಾರಿಗಳು ಬಾಯಿ ಬಿಟ್ಟು ಹೇಳುವುದಿಲ್ಲ. ಆದರೆ ಒಳಗೊಳಗೆ ಅಯ್ಯೋ ಪೆದ್ದೇ? ಏನು ಮಾತನಾಡುತ್ತಿದ್ದೀಯ, ಅಡು.... ಎಂಬ ರೀತಿಯಲ್ಲಿ ತಾತ್ಸಾರಪೂರ್ವಕವಾಗಿ ವರ್ತಿಸುತ್ತಾರೆ. ಇದು ಅವರುಗಳು ಕಣ್ಣಿನ ಮತ್ತು ಮುಖಭಾವನೆಗಳ ಮೂಲಕ ಅರ್ಥಮಾಡಿಕೊಳ್ಳಬಹುದು. ಅಂಥ ಸಂದರ್ಭಗಳಲ್ಲಿ ಮಹಿಳೆಯಾದವಳು ಕುಗ್ಗಿ ಹೋಗುತ್ತಾಳೆ. ಇನ್ನು ನಾನು ಇಲ್ಲಿಗೆ ಬಾರದೇ ಇರುವುದೇ ಒಳಿತು ಎಂಬ ಮಾನಸಿಕ ವೇದನೆಗೆ ಒಳಗಾಗುತ್ತಾಳೆ. ಇದರಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾವಂತೆಯರು, ಮೇಲ್ವರ್ಗದ ಜಾತಿಯ ಮಹಿಳೆಯರು ಪರವಾಗಿಲ್ಲ. ಅವರಲ್ಲಿ ಧೈರ್ಯ ತುಂಬಿರುತ್ತದೆ, ಪರಿಜ್ಞಾನಗಳ ಬಲ ಅವರಿಗಿರುತ್ತದೆ, ದಬಾಯಿಸಿ ಹೇಳುವಂಥ ಒಂದು ಚಾತುರ್ಯವೂ ಅವರಿಗಿರುತ್ತದೆ. ಅವರು ಪತ್ರಿಕೆಗಳ ಮೂಲಕ, ದೂರದರ್ಶನ, ರೇಡಿಯೋ ಮತ್ತು ಸಮಾಜದ ಆಗುಹೋಗುಗಳ ಬಗ್ಗೆ ಅರ್ಥ

ಮಾಡಿಕೊಂಡಿರುತ್ತಾರೆ, ತಿಳಿದುಕೊಂಡಿರುತ್ತಾರೆ. ಅಂಥವರು ಮಾತ್ರ ಧೈರ್ಯ-ಸ್ಥೈರ್ಯಗಳಿಂದ ಕೀಳರಿಮೆಗೆ ಒಳಗಾಗದೇ ತಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ಮಾಡಿ ಮುಂದೇ ಬರುತ್ತಾರೆ. ಬಾಕಿ ಉಳಿದವರು ಭಾಷೆ, ಜಾತಿ, ಧೈರ್ಯಸ್ಥೈರ್ಯಗಳ ಅಂಗವಿಕಲತೆಯಿಂದ ಬಳಲುತ್ತಾರೆ ಎನ್ನಬಹುದು. ಅಥವಾ ಸಾಮಾಜಿಕ ಅಂಗವಿಕಲತೆ ಇರಬಹುದು. ಒಟ್ಟಿನಲ್ಲಿ ಇಂಥ ಅನೇಕ ನ್ಯೂನ್ಯತೆಗಳ ನಡುವೆ ಹೆಣ್ಣು ಕುಗ್ಗಿಸಿ ಕುಗ್ಗಿಸಿ ಕುಬ್ಜಳಾಗುತ್ತಿದ್ದಾಳೆ. ಈ ಒಂದು ಹೆಣ್ಣಿನ ಪರಿಸ್ಥಿತಿಯನ್ನು ಪುರುಷ ಸಮಾಜವು ತಪ್ಪಿಸಬೇಕಾಗಿದೆ. ಮಹಿಳೆಯರಿಗು ಪೂರ್ಣಪ್ರಮಾಣದಲ್ಲಿ ಪುಸ್ತಕಗಳನ್ನು ಓದುವಂಥ ವ್ಯವಸ್ಥೆಯು ಇಲ್ಲ. ಅವರು ನಮಗೆ ಮೀಸಲಾತಿಯನ್ನು ಕೊಡಿ ಎಂದು ಕೇಳುತ್ತಿರುತ್ತಾರೆ. ಅಂದರೆ ತಮಗೆ ಏನು ಬೇಕೆಂಬುದು ಇನ್ನೂ ನಮ್ಮ ಮಹಿಳೆಯರಿಗೆ ಸರಿಯಾಗಿ ಗೊತ್ತಿಲ್ಲ. ಇದು ಪುರುಷರಿಗೆ ಗೊತ್ತಿದ್ದರೂ ಕೂಡ ಹೇಳುವುದೇ ಇಲ್ಲ. ಮಹಿಳೆಯರು ಯಾವಾಗಲಾದರೂ ಕಲಿಯಲಿ, ಅದು ಇನ್ನೊಂದು ಶತಮಾನದ ಅವಧಿಯನ್ನು ಬೇಕಾದರೂ ತೆಗೆದುಕೊಳ್ಳಲಿ ಎಂಬ ಮನೋಭಾವನೆಯು ಅವರಲ್ಲಿರುತ್ತದೆ. ಇದು ಪುರುಷ ಪ್ರಧಾನ ಸಮಾಜದ ವೈಖರಿ ಎಂದು ಹೇಳಬಹುದೇ? ಒಡವೆ, ವಸ್ತ್ರ ಮೋಹವನ್ನು ಬಿಟ್ಟು, ಜ್ಞಾನಾರ್ಜನೆಯನ್ನು ಪಡೆದುಕೊಳ್ಳು, ಲೈಬ್ರರಿಗಳಿಗೆ ಹೋಗಿ ಒಳ್ಳೆಯ ಪುಸ್ತಕಗಳನ್ನು ಓದು, ನೀನು ಶಕ್ತಳಾಗು, ಮನುಷ್ಯಳಾಗು ಎನ್ನುವಂಥ ವಿಚಾರವನ್ನು ಯಾರೂ ಹೇಳುವುದಿಲ್ಲ, ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ ಯಾರೂ ಹೇಳುತ್ತಾ ಇಲ್ಲ. ವಿದ್ಯಾಭ್ಯಾಸದ ಮೂಲಕ ಪುಸ್ತಕಗಳಲ್ಲಿ ಅಲ್ಪಸ್ವಲ್ಪ ಹೇಳಿದರೂ ಅದು ದೊಡ್ಡ ಪ್ರಮಾಣದಲ್ಲಿ ಬದಲಾವಣೆಯಾಗಿಲ್ಲ. ನಮ್ಮ ಒಂದೇ ಒಂದು ಕೂಗು ಅಂದರೆ, ನಮಗೆ ಮೀಸಲಾತಿಯನ್ನು ಕೊಡಿ; ಯಾವುದಕ್ಕಾಗಿ ನಮಗೆ ಮೀಸಲಾತಿ? ಆ ಮೀಸಲಾತಿ ಇಂದಾದರೂ ನಾವು ಒಳ್ಳೆಯ ರೀತಿಯಲ್ಲಿ ರಾಜ್ಯ ಮಾಡುತ್ತಿದ್ದೇವೆಯೇ ಎಂದು ನೋಡಿದರೆ ಅದು ಕೂಡ ಸಮಾಧಾನಕರವಾಗಿಲ್ಲ. ಈ ವಿಷಯವನ್ನು ನಾವು ಇವೊತ್ತು ಆಲೋಚನೆ ಮಾಡಬೇಕಾಗಿದೆ. ಒಬ್ಬ ಗೃಹಿಣಿ, ಒಬ್ಬ ಗೃಹಸ್ಥ ಕೆಟ್ಟರೆ ಒಂದು ಮನೆ ಹಾಳಾಗುತ್ತದೆ. ಒಬ್ಬ ಶಾಸಕನು ಕೆಟ್ಟರೆ ಒಂದು ಕ್ಷೇತ್ರ ಹಾಳಾಗುತ್ತದೆ. ಒಬ್ಬ ಮಂತ್ರಿ ಕೆಟ್ಟರೆ ಒಂದು ರಾಜ್ಯವು ಹಾಳಾಗುತ್ತದೆ. ಹಾಗೆಯೇ ಮೇಲ್ಮಟ್ಟಕ್ಕೆ ಹೋಗುತ್ತಾ ಹೋಗುತ್ತಾ ದೇಶವೇ ಹಾಳಾಗಿ ಹೋಗುತ್ತದೆ. ಇಂಥ ವಿಚಾರಗಳ ಬಗ್ಗೆ ಒಂದು ಸೂಕ್ತ ಮತ್ತು ಶಿಸ್ತ ಮಾಸ್ಟರ್ ಪ್ಲಾನನ್ನು ಹಾಕಿಕೊಳ್ಳಬೇಕು, ಆ ದಿಕ್ಕಿನಲ್ಲಿ ಪೂರಕವಾದ ಯೋಜನೆಗಳನ್ನು ಹಾಕಿಕೊಳ್ಳಬೇಕು. ನಿನ್ನೆಯ ದಿನ ಮಾನ್ಯ ಪುಟ್ಟಣ್ಣಯ್ಯನವರು ಒಂದು ವಿಚಾರವನ್ನು ಹೇಳಿದರು. ರಾಜ್ಯದಲ್ಲಿ ಹೊಸದಾಗಿ ಜಿಲ್ಲೆ, ತಾಲ್ಲೂಕು, ಪಂಚಾಯತಿಗಳನ್ನು ಮಾಡಿದಾಗ ಏನಾಗುತ್ತದೆ ಎಂಬುದನ್ನು ಹೇಳಿದ್ದಾರೆ. ಅವುಗಳಿಗೆ ಯಾವ ಮತ್ತು ಎಷ್ಟು ಆದಾಯ ಇದೆ? ನೀವು ಹಣ ಕೊಡುವುದರ ಮೂಲಕ ಅವುಗಳ ಏಳಿಗೆಯ ಲಕ್ಷ್ಯಗಳೇನು? ಅದರಿಂದ ಎಷ್ಟು ಪ್ರಯೋಜನವಾಗುತ್ತಿದೆ? ಇಂಥ ಯಾವುದೇ ಒಂದು ಸಂಸ್ಥೆಯು ಆಗುಹೋಗುಗಳೇನು? ಅದರ ಆದಾಯಗಳೇನು? ನಾವು ಕೊಡುತ್ತಿರುವ ಹಣದ ಪ್ರಮಾಣ ಎಷ್ಟು? ಆ ಸಂಸ್ಥೆಗಳಿಗೆ ತಗಲುವ ಖರ್ಚುವೆಚ್ಚಗಳೆಷ್ಟು ಎಂಬಿತ್ಯಾದಿ ಅಗತ್ಯ ವಿಚಾರಗಳನ್ನು

ಪರಿಗಣನೆಗೆ ತೆಗೆದುಕೊಳ್ಳದೇ ಕಣ್ಣುಮುಚ್ಚಿಕೊಂಡು ಹುಟ್ಟುಹಾಕಿದರೆ ಏನಾಗುತ್ತದೆ ಎಂಬ ಮಾತುಗಳನ್ನು ಅವರು ಹೇಳಿದ್ದಾರೆ. ಹಾಗೆಯೇ ಮಹಿಳೆಯರಿಗೆ ಕೂಡ ಅವರ ಬಗ್ಗೆ ಯಾವುದೋ ಒಂದು ಕಾನೂನನ್ನು ತಂದು ಮಹಿಳೆಯರೇ ಈಗ ನಾವು ನಿಮಗೆ ಸಮಾಧಾನ ಪಡಿಸುವ ಕಾನೂನು ತಂದಿದ್ದೇವೆ, ನಮಗೆ ಜೈಕಾರ ಹಾಕಿ ಎಂದು ಪುರುಷಪ್ರಧಾನ ಸಮಾಜವು ಹೇಳುವುದು ಬೇಡ. ನೈತಿಕವಾಗಿ ನಾವು ಮಹಿಳೆಯರು ಮುಂದೆ ಬರಲು ಏನು ಮಾಡಬೇಕು? ಮಹಿಳೆಯರು ಈ ಸಮಾಜದಲ್ಲಿ ಸಮಾನವಾಗಿ ಬಾಳಲು ಏನೇನು ಕೆಲಸಕಾರ್ಯಗಳನ್ನು ನಾವು ಮಾಡಬೇಕು, ಯಾವ ಸೌಲಭ್ಯಗಳು ಬೇಕು, ಯಾವರೀತಿಯ ಶಿಕ್ಷಣವು ಅವಳಿಗೆ ಬೇಕು, ಎಂಬ ವಿಚಾರದ ಕುರಿತು ನಾವೆಲ್ಲರೂ ಕೂಡ ಆಲೋಚನೆ ಮಾಡಬೇಕಾಗಿದೆ. ಹೀಗೆ ಯೋಚನೆ ಮಾಡುವಾಗ ವರದಕ್ಷಿಣೆ, ಅತ್ಯಾಚಾರ, ಅನಾಚಾರ ಇವೆಲ್ಲವೂ ಹೇಳಹೆಸರಿಲ್ಲದೆ ತನ್ನಿಂದ ತಾನೇ ನಾಶವಾಗುತ್ತವೆ, ಅದನ್ನು ಯಾರೂ ಕತ್ತು ಹಿಡಿದು ನೂಕಲು ಆಗುವುದಿಲ್ಲ. ಒಂದು ಕಡೆ ಮಾನ್ಯ ಗೃಹಸಚಿವರೂ ಕೂಡ ಉಪಸ್ಥಿತರಿದ್ದ ಸಂದರ್ಭದಲ್ಲಿನ ಒಂದು ವಿಚಾರವನ್ನು ಹೇಳುತ್ತೇನೆ. ಒಬ್ಬ ಗೃಹಿಣಿ ತನ್ನ ಮಗಳ ಗಂಡ, ತನ್ನ ಪತ್ನಿಯನ್ನು ಇಟ್ಟುಕೊಳ್ಳಲು ಇಷ್ಟಪಡದೇ, ತನ್ನ ಪ್ರೇಯಸಿಯನ್ನು ಇಟ್ಟುಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾನೆ. ಇಂಥ ವಿಚಾರಗಳಿಗೆ ನೀವು ಏನು ಮದ್ದು ಕೊಡುತ್ತೀರಿ? ಇಲ್ಲಿ ಅವನ ಮನಸ್ಸು ನೋಡಿ ಹೇಗಿದೆ? ಅವನು ಪ್ರೇಯಸಿಯನ್ನು ಮೆಚ್ಚಿಕೊಂಡಿದ್ದಾನೆ. ಏನು ಮಾಡುತ್ತೀರಿ? ಇಲ್ಲಿ ಹೆಂಡತಿಯಾದವಳಿಗೆ ಏನು ಮಾಡಬೇಕೆಂಬುದನ್ನು ನೋಡಬೇಕು. ನನ್ನ ಹತ್ತಿರ ಕೂಡ ಪ್ರೇಮಿಗಳಿಬ್ಬರು ಬಂದರು. ನಾವು ಪರಸ್ಪರರು ಒಂದಾಗಿರುತ್ತೇವೆ, ಬಿಡಲಿಲ್ಲ ಅಂದರೆ ಸತ್ತೇ ಹೋಗುತ್ತೇವೆ ಹೊರತು ಬೇರೆಯಾಗುವುದಿಲ್ಲ ಎಂದು ಹೇಳುತ್ತಿದ್ದರು. ಅವರಿಗೆ ಏನು ಮಾಡುತ್ತೀರಿ? ಇವೆಲ್ಲವನ್ನೂ ನೋಡಿದಾಗ ಕೆಲವು ವಿಚಾರಗಳು ಮನಸ್ಸಿನ ಮೇಲೆ ನಿರ್ಧಾರವಾಗುತ್ತವೆ ಎಂದು ನೋಡಬಹುದು. ಅವುಗಳನ್ನು ಯಾವ ಕಾನೂನುಗಳೂ ಮುಟ್ಟಲು ಆಗುವುದಿಲ್ಲ. ಹೀಗೆ ಕಾನೂನಿನ ಚೌಕಟ್ಟಿನ ಹೊರಗಿರುವಂಥ ವಿಷಯಗಳನ್ನು ಮನುಷ್ಯತ್ವದ ಮೂಲಕವೇ ಕಂಡುಹಿಡಿಯಬೇಕಾಗಿದೆ. ಮನುಷ್ಯತ್ವದ ಮೂಲಕವೇ ಅದನ್ನು ಕಂಡುಕೊಂಡು ಏನಾದರೊಂದು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಇನ್ನೊಂದು ಮಾತು ಪುರಾಣಗಳ ಗಾದೆಯಲ್ಲಿ ಬರುತ್ತದೆ ಅದನ್ನು ತಾವುಗಳೂ ಕೂಡ ಒಪ್ಪುತ್ತೀರಿ. ತಾವುಗಳು ತುಂಬಾ ಚಿಂತನಶೀಲರು ಮತ್ತು ವಿಚಾರವಾದಿಗಳು ಆಗಿದ್ದೀರಿ. ಆದ್ದರಿಂದ ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "ಸ್ತ್ರೀ ಒಂದು ವಸ್ತು, ಪದಾರ್ಥ"-ಎಂದು ಶಾಸ್ತ್ರದಲ್ಲಿ ಹೇಳುತ್ತದೆ. "ಅವಳು ಚಂಚಲೆ, ಖಡ್ಗದಂತೆ ಹರಿತವಾದವಳು, ಬಿರುಗಾಳಿಯಂತೆ ಅಸ್ಥಿರಳು"-ಎಂದು ರಾಮಾಯಣ ಹೇಳುತ್ತದೆ. "ಸ್ತ್ರೀ ಎಲ್ಲಾ ಕೆಡುಕಿನ ಮೂಲ. ಸ್ತ್ರೀಯರು ತತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು"-ಎಂದು ಮಹಾಭಾರತವು ಹೇಳುತ್ತದೆ. ಧಾರ್ಮಿಕ ನಿಯಮಗಳನ್ನು ಪಾಲಿಸುವುದು ಅವಳಿಗೆ ಹೆಚ್ಚಿನ ತತ್ವ ಎಂದು ಯೂರೋಪಿನ ಒಬ್ಬ

ಧರ್ಮಬೋಧಕ ಹೇಳುತ್ತಾನೆ. "ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ, ಅಜ್ಞಾನವೂ ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುತ್ತದೆ"-ಎಂದು ಚೀನೀ ಗಾದೆ ಮಾತು ಹೇಳುತ್ತದೆ. ಇಂಥ ಮಾತುಗಳನ್ನು ಕೇಳಿದ ನಾವು ಎಲ್ಲಿ ಹೋಗಿ ತಲೆಯನ್ನು ಚಚ್ಚಿಕೊಳ್ಳಬೇಕು ಎಂದು ಮಾನ್ಯ ಅಧ್ಯಕ್ಷರೇ ಹೇಳಬೇಕು. ಅಂದರೆ ಎಷ್ಟೆಷ್ಟು ಅಜ್ಞಾನಿಯಾಗಿರುತ್ತಾಳೋ ಅಷ್ಟು ಸುಂದರಳಾಗಿರುತ್ತಾಳೆ ಎಂದು ಶತಮಾನಗಳಿಂದ ಈ ಜನರು ಹೇಳಿಕೊಂಡು ಬಂದಿದ್ದಾರೆ. ಇವೊತ್ತು ಜ್ಞಾನಿಯಾಗಿರಬೇಕು, ನಾಗರತ್ನಮ್ಮನವರ ತರಹ ಸ್ಪೀಕರ್ ಸ್ಥಾನದಲ್ಲಿ ಹೋಗಿ ಕುಳಿತು ಕಾರ್ಯನಿರ್ವಹಿಸಬೇಕು ಎಂದು ಮಹಿಳೆಗೆ ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಎಲ್ಲೋ ಒಬ್ಬರು ಇಂದಿರಾಗಾಂಧಿ, ಒಬ್ಬರು ನಾಗರತ್ನಮ್ಮ ಎಲ್ಲೋ ಒಬ್ಬ ಪ್ರಧಾನಿಯಾಗಿದ್ದರೆ ಅಲ್ಲಿಯೂ ಕೂಡ ಬಹಳ ಬುದ್ಧಿವಂತಿಕೆಯಿಂದ ಇವರು ಮಾಡಿಲ್ಲ ಎಂದು ಹೇಳಬೇಕಾಗುತ್ತದೆ. ಆದರೆ ಅವರು ತಮ್ಮ ಕೃತ್ವತ್ವಶಕ್ತಿಯಿಂದಾಗಿ ಬಹಳ ಮೇಲ್ಮಟ್ಟದಲ್ಲಿದ್ದರು. ಅವರಿಗೆ ಪುರುಷರ ಸಮಾನವಾಗಿ ವಿದ್ಯೆಬುದ್ಧಿಗಳು ಸಿಕ್ಕಿದವು. ಹಾಗಾಗಿ ಅವರುಗಳು ಬಹಳ ಚೆನ್ನಾಗಿ ಆಡಳಿತವನ್ನು ರಾಜಕೀಯವನ್ನು ಮಾಡಲು ಸಾಧ್ಯವಾಯಿತು. ಹಿಂದೆ ಹೆಣ್ಣುಮಕ್ಕಳಿಗೆ, ರಾಜವಂಶಜರಲ್ಲಿ ಕತ್ತಿವರಸೆಗಳನ್ನು ಕಲಿಸಿಕೊಡುತ್ತಾ ಇದ್ದರಂತೆ. ಇಂಥ ಶಿಕ್ಷಣ ಪದ್ಧತಿಯು ಅವರುಗಳನ್ನು ಮುಂದೆ ರಾಣಿಯರಾಗಿ ಮಾಡಲು ಸಾಧ್ಯವಾಯಿತು. ಇವೊತ್ತು ನಾವು ಪುರುಷ ರಾಜಕಾರಣಿಗಳಂತೆ ಇರಲು ಸೂಕ್ತ ಶಿಕ್ಷಣವನ್ನು ನಮಗೆ ನೀಡಿಲ್ಲ. ಅದನ್ನು ವಿಚಾರ ಮಾಡಬೇಕಾಗಿದೆ. ಆದ್ದರಿಂದ ಎಲ್ಲಾ ಹಳೆಯ ಗಾದೆಗಳೇನಿದ್ದಾವೆ, ಹಳೆಯ ಪುಸ್ತಕಗಳೇನಿದ್ದಾವೆ, ಅವುಗಳೆಲ್ಲವೂ ಸತ್ಯ ವಿಚಾರಗಳೇ ಎಂಬುದಾಗಿ ಅವುಗಳನ್ನು ಒಪ್ಪಿಕೊಳ್ಳಲೇಬೇಕೆಂಬ ಮಟ್ಟಕ್ಕೆ ನಾವು ಬರುತ್ತಾ ಇದ್ದೇವೆ. ನಾವು ಎಷ್ಟೇ ಒಪ್ಪಿಕೊಂಡರೂ ಕೂಡ ಕೀಳು ಭಾವನೆಗಳನ್ನು ಹೊಡೆದಟ್ಟುವುದಕ್ಕೆ ಪುರುಷರಿಂದ ಅದು ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ಮಹಿಳೆಯರಿಗೆ ನಾನು ಹೇಳುವಂಥಾದ್ದು ಇಷ್ಟೇನೇ ರಾಜಕೀಯದಲ್ಲಿ ಎಲ್ಲಾ ಹೆಣ್ಣುಮಕ್ಕಳಿಗೆ ಟಿಕೆಟ್ ಕೊಡಿ ಎಂದು ಕೇಳುವುದಿಲ್ಲ. ಎಲ್ಲಾ ಹೆಂಗಸರಿಗೂ ನೌಕರಿ ಕೊಟ್ಟು ಅಡಿಗೆಮನೆಯಿಂದ ಹೊರಗಿಟ್ಟುಬಿಡಿ ಎಂದು ಹೇಳುವುದಿಲ್ಲ. ಹೆಣ್ಣುಮಕ್ಕಳು ಹೆರುವುದು ಬೇಡ, ಅವಳು ಸೀರೆ ಉಡುವುದು ಬೇಡ ಅವಳು ಮಹಿಳೇನೇ ಅಲ್ಲ ಅನ್ನುವ ರೀತಿ ಇರಲಿ ಎಂದು ನಾವು ಖಂಡಿತವಾಗಿ ಹೇಳುವುದಿಲ್ಲ. ಹೆಣ್ಣುತನವನ್ನು ನಾವು ಬಹಳ ಒಪ್ಪಿಕೊಂಡಿದ್ದೇವೆ, ಅಧ್ಯಕ್ಷರೇ, ಹೆಣ್ಣಿಗೆ ತನ್ನ ಹೆಣ್ಣುತನದ ಬಗ್ಗೆ ಹೆಮ್ಮೆ ಗೌರವ ಇದೆ. ಪುರುಷನಿಗೆ ತನ್ನ ಪೌರುಷದ ಬಗ್ಗೆ ಹೇಗೆ ಗೌರವ ಹೆಮ್ಮೆ ಇದೆಯೋ ಅದೇ ರೀತಿ ಹೆಣ್ಣಿಗೆ ನೀನು ಗಂಡು ಎಂದರೆ ಬಹಳ ಬೇಜಾರಾಗುತ್ತದೆ. ಹೆಣ್ಣು ಹೆಣ್ಣಾಗಿಯೇ ಇರಬೇಕು. ಆದರೆ ಹೆಣ್ಣಿಗೂ ಅವಳು ಮನುಷ್ಯಳೆಂದು ಗೌರವಿಸುವ ಪದ್ಧತಿ ಬೆಳೆಯಬೇಕು. ರಾತ್ರಿಹೊತ್ತಿನಲ್ಲೂ ಹೆಣ್ಣು ಒಬ್ಬಳೇ ತಿರುಗಾಡಿ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳುವ ಸಮಾಜ ಬರಬೇಕಾದರೆ ಅಲ್ಲಿ ಪುರುಷನ ಸಹಕಾರ ಬೇಕು. ನಮ್ಮಲ್ಲಿ ಕೆಲವರು ಕರಾಟೆ ಕಲಿತಿದ್ದೇನೆ ಎಂದು ಒಬ್ಬೊಬ್ಬರೇ ಹೋಗುತ್ತಾರೆ. ಆದರೆ ಐದಾರು ಗೂಂಡಾಗಳು ಬಂದರೆ ಕರಾಟೆ ಕಲಿತರೂ ಉಪಯೋಗವಾಗುವುದಿಲ್ಲ. ಆದ್ದರಿಂದ ಹೆಣ್ಣಿಗೆ

ರಕ್ಷಣೆ ಕೊಡುವುದು ಹೆಣ್ಣಿನದಷ್ಟೇ ಕರ್ತವ್ಯವಲ್ಲ. ಹೆಣ್ಣು ಮಾನಸಿಕವಾಗಿ ತನ್ನನ್ನು ತಾನೇ ರಕ್ಷಣೆ ಮಾಡಿಕೊಳ್ಳಬಹುದು, ಆದರೆ ಗಂಡು ಎನಿಸಿಕೊಳ್ಳುವವನಲ್ಲಿ ಸ್ವಲ್ಪಮಟ್ಟಿನ ಹೆಣ್ಣಿನಶೀಲ ಇರಬೇಕು. ಅದಕ್ಕೇನೇ ಗಂಡು ಹೆಣ್ಣುಗಳು ಸೇರಿದ ರೀತಿ ಅರ್ಧನಾರೀಶ್ವರ ಕಲ್ಪನೆ ಹಿಂದೂಗಳಲ್ಲೇನಿದೆ ಆ ಕಲ್ಪನೆಯನ್ನು ನಾವೆಲ್ಲರೂ ಗೌರವಿಸಬೇಕು. ಅರ್ಧನಾರೀಶ್ವರ ಅಂದರೆ ನಾವ್ಯಾರೂ ನಗುವುದಿಲ್ಲ. ಅಂದರೆ ಗಂಡಿನಲ್ಲಿ ಹೆಣ್ಣಿನ ಗುಣ, ಹೆಣ್ಣಿನಲ್ಲಿ ಗಂಡಿನ ಗುಣ ಇದ್ದು ಪರಸ್ಪರ ಸಮಾನತೆ ಸಾರುವಂತಹ ಕಲ್ಪನೆ ಏನಿದೆ ಆ ಪರಂಪರೆಯನ್ನು ಮುಂದೆ ನಾವು ಉಳಿಸಿಕೊಂಡು ಹೋಗಬೇಕಾಗಿದೆ. ದೇಶದಲ್ಲೂ ಅರ್ಧ ಗಂಡು ಅರ್ಧ ಹೆಣ್ಣು ಇರುವುದರಿಂದ ಅದನ್ನೂ ಅರ್ಧನಾರೀಶ್ವರ ಪದ್ಧತಿಗೆ ಹೋಲಿಸಿ ಎಲ್ಲಾ ಸೌಲಭ್ಯಗಳು ಪುರುಷರಿಗೆ ಸಿಗುವ ರೀತಿ, ಅಂದರೆ ಕೆಲವು ವಿಷಯದಲ್ಲಿ ಮಹಿಳೆ ತಾನೇ ಬೇಡ ಅನ್ನುತ್ತಾಳೆ ಆದರೆ ಯಾವುದೋ ಟಿಕೆಟ್ ಕೊಡುವ ಸಂದರ್ಭದಲ್ಲಿ ತಾವೇನು ಮಾಡುತ್ತೀರಿ ಅವಳು ಕೇವಲ ಹೆಣ್ಣು ಎನ್ನುವ ಕಾರಣಕ್ಕಾಗಿ ಅವಳನ್ನು ದೂರ ಇಡುವುದು ಬೇಡ. ಅವಳಿಗೆ ಅರ್ಹತೆ ಇದ್ದರೆ ಕೊಡಿ. ಅಲ್ಲದಿದ್ದರೆ ಹೆಣ್ಣಾಗಿ ಹೇಗೆ ಭೂಮಿ ಮೇಲೆ ಬದುಕಬೇಕೋ ಹಾಗೆ ಬದುಕುತ್ತಿರುತ್ತಾಳೆ. ಅವಳು ಯಾವತ್ತಿಗೂ ದ್ರೋಹ ಬಗೆಯಲು ಹೋಗುವುದಿಲ್ಲ. ಗಂಡು ವಂಚನೆಯಂಥ ಕೆಲವು ವಿಷಯವನ್ನು ಕಲಿಯುತ್ತಾನೆ ಆದರೆ ಹೆಣ್ಣು ಅಷ್ಟು ವಂಚಕಿಯಲ್ಲ. ಹೆಣ್ಣೇ ಕೆಟ್ಟವಳು ಎಂದು ನೀವೇನು ಹೇಳುತ್ತೀರಿ ಅದನ್ನು ನಾನು ಖಂಡಿಸುತ್ತೇನೆ. ಗಂಡಿನಲ್ಲಿರುವ ನೀಚಗುಣಗಳು ಅವಳಲ್ಲೂ ಇವೆ. ಒಳ್ಳೆಯ ಗುಣಗಳೂ ಅವಳಲ್ಲಿವೆ ಎಂದು ನಾವು ಒಪ್ಪಿಕೊಳ್ಳುವ ಮೂಲಕ ಸಮಾನತೆಗೆ ಪ್ರೋತ್ಸಾಹ ಕೊಡಬೇಕು. ಈ ಸಮಾನತೆ ಬಂದ ಮೇಲೆ ಇರುವ ಅನಿಷ್ಟಗಳು ದೂರವಾಗುತ್ತವೆ. ನನಗೆ ಅವಕಾಶಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀಮತಿ ಎನ್. ಜ್ಯೋತಿರೆಡ್ಡಿ (ಗೌರಿಬಿದನೂರು) :— ಅಧ್ಯಕ್ಷರೇ, ಸ್ವಾತಂತ್ರ್ಯದ 50 ವರ್ಷದ ನಂತರ ಮೊಟ್ಟಮೊದಲ ಬಾರಿಗೆ ವಿಧಾನಸಭೆಯಲ್ಲಿ ವರದಕ್ಷಿಣೆ ಪೀಡಿತ ಮಹಿಳೆಯರ ನೋವು ಹೇಳಲು ಅವಕಾಶ ಮಾಡಿಕೊಟ್ಟ ತಮಗೂ, ನಮ್ಮ ಸರ್ಕಾರಕ್ಕೂ, ಗೃಹಸಚಿವ ಶ್ರೀ ಸಿಂಧ್ಯಾ ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ಶೇಕಡ 49 ರಷ್ಟಿರುವ ಹೆಣ್ಣು ಕುಲ ಬರುತ್ತಾ ಬರುತ್ತಾ ಎಕ್ಸ್‌ಟಿಂಕ್ಸ್ ಆಗುತ್ತದೆ ಎಂದು ಹೇಳುವುದರಲ್ಲಿ ತಪ್ಪಿಲ್ಲ ಎಂದು ಹೇಳುತ್ತಿದ್ದೇನೆ. ಕಾರಣ ಇಷ್ಟೇ ಅಂಕಿಅಂಶಗಳ ಪ್ರಕಾರ.

ಅಧ್ಯಕ್ಷರು :— ಎಕ್ಸ್‌ಟಿಂಕ್ಟ್ ಆಗುವುದಿಲ್ಲ, ಹಾಗಾದರೆ ಅದು ಜೀವನದ ಅಂತಿಮ. ಎಕ್ಸ್‌ಟಿಂಕ್ಸ್ ಆಗಬಾರದು. ಅಮೀಬಾದಿಂದ ಇವತ್ತಿನ ಮಾನವ ವಿಕಾಸವಾಗುವುದಕ್ಕೆ 60 ಲಕ್ಷ ವರ್ಷ ಹಿಡಿದಿದೆ. ಹೆಣ್ಣು ಎಕ್ಸ್‌ಟಿಂಕ್ಟ್ ಆದರೆ ಪ್ರಪಂಚ ಅಲ್ಲಿಗೇ ಕ್ಲೋಸ್ ಆಗುತ್ತದೆ. ಆಟ್‌ಲೀಸ್ಟ್ ಸಾವಿರುವವರೆಗಾದರೂ ಆಗುವುದು ಬೇಡ.

ಶ್ರೀಮತಿ ಎಸ್. ಜ್ಯೋತಿರೆಡ್ಡಿ :— ಆಗಬಹುದು ಎಂದು ಹೇಳುತ್ತಿರುವುದು. ಕಾರಣ, ಸುಮಾರು ವರದಕ್ಷಿಣೆ ಮತ್ತು ಲೈಂಗಿಕ ಕಿರುಕುಳದಿಂದ 1200 ಸಾವು ಆಗುತ್ತಿವೆ

ವರ್ಷಕ್ಕೆ. ಎರಡನೆಯದು ಪ್ರಮೀಳಾ ಹೇಳಿದರು, ಭ್ರೂಣಹತ್ಯೆ, ಹೊಟ್ಟೆಯಲ್ಲಿರುವ ಹೆಣ್ಣುಮಗುವನ್ನು ತೆಗೆಯುವ ವ್ಯವಸ್ಥೆ ನಾವು ನೋಡುತ್ತಿದ್ದೇವೆ. ಹೆಣ್ಣುಮಗು ಹುಟ್ಟಿದ ಮೇಲೆ ಕೇರಳ ತಮಿಳುನಾಡಿನಲ್ಲಿ ವಿಷ ಕುಡಿಸಿ ಸಾಯಿಸುವ ವರದಿಗಳನ್ನೂ ನೋಡುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ಎಕ್ಸ್‌ಟಿಂಕ್ಟ್ ಆದರೂ ಆಶ್ಚರ್ಯಪಡಬೇಕಾದ ವಿಷಯವಲ್ಲ. ವರದಕ್ಷಿಣೆ ಸಾವಿಗೆ ಕಾರಣಗಳೇನೇ ಇರಬಹುದು, ಹಿಂದೆ ಮಾತೃಪ್ರಧಾನ ಸಮಾಜವಿದ್ದಾಗ ತನ್ನದೇ ಆದ ಗುಂಪು ಬೆಳೆಸಲು ಹೆಣ್ಣು ಉಪಕಾರ ಮಾಡುತ್ತಿದ್ದಳು. ಆದರೆ ಪಿತೃಪ್ರಧಾನ ವ್ಯವಸ್ಥೆ ಬಂದಾಗ ಗಂಡು ಸ್ವಾರ್ಥದಿಂದ ಹಣ ಕೊಟ್ಟು ಜೀತದಾಳಾಗಿ ಹೆಣ್ಣನ್ನು ತೆಗೆದುಕೊಳ್ಳುವ ಪದ್ಧತಿ ಬಂತು. ಕನ್ಯಾಶುಲ್ಕ ಪದ್ಧತಿ ಬರುವ ಸಂದರ್ಭದಲ್ಲಿ ಅತ್ತೆಮನೆಯವರು ಜೀತದಾಳಾಗೇ ಆ ಹೆಣ್ಣನ್ನು ಕರೆತರುತ್ತಿದ್ದರು. ಮೊಟ್ಟಮೊದಲಿಗೆ ಹೆಣ್ಣಿಗೆ ಸ್ತ್ರೀಧನ ಎಂದು ಕೊಟ್ಟು ಹೆಣ್ಣಿಗೆ ಮದುವೆಮಾಡುವ ಪದ್ಧತಿ ಬಂದಾಗ ಆ ಪರಿಸ್ಥಿತಿಯಲ್ಲೂ ಆ ಹೆಣ್ಣಿಗೆ ಆ ಸ್ತ್ರೀಧನವೂ ಕೊಳ್ಳುವಂತಹ ಹಿನ್ನೆಲೆಯಲ್ಲಿ ವರದಕ್ಷಿಣೆ ಪದ್ಧತಿ ಬಂತು. ಇದಕ್ಕೆ ಬಲಿಯಾಗುತ್ತಿರುವ ಹೆಣ್ಣಿನ ಉದ್ಧಾರ ಮಾಡಬೇಕು ಎಂದು ಯೋಚನೆ ಮಾಡಿದಾಗ ಸಮಾಜದಲ್ಲೇ ಒಂದು ಬದಲಾವಣೆ ತರಬೇಕಾಗಿದೆ ಎಂದು ವಿಚಾರ ಮಾಡಬೇಕಾದ ಹಂತದಲ್ಲಿ ನಾವಿದ್ದೇವೆ. 1997ರಲ್ಲಿ 217 ಕೇಸಸ್ ವರದಿಯಾದರೂ 176 ಕೇಸಸ್‌ನಲ್ಲಿ ಚಾರ್ಜ್‌ಶೀಟಾಗಿ ಕನ್‌ವಿಕ್ಷನ್ ಆದದ್ದು ಕೇವಲ 4ಕ್ಕೆ ಮಾತ್ರ. ಇದರಿಂದ ಏನು ಗೊತ್ತಾಗುತ್ತದೆ ಅಂದರೆ ಪ್ರಕರಣ ದಾಖಲಿಸುವುದರಲ್ಲೇ ವಿಳಂಬ ಅಥವಾ ಅನ್ಯಾಯವಾಗುತ್ತಿದೆ ಅಥವಾ ತನಿಖೆ ಹಂತದಲ್ಲಿ ದೋಷ ಕಂಡುಬಂದು ವಜಾ ಮಾಡುತ್ತಿದ್ದಾರಾ ಅಥವಾ ನ್ಯಾಯಾಂಗದಲ್ಲಿ ತುಂಬಾ ವಿಳಂಬವಾಗುತ್ತಿದೆಯೇ ಎಂದು ವಿಚಾರ ಮಾಡಿದಾಗ ಕೋರ್ಟಿನಲ್ಲಿ ವಿಚಾರಣೆಗೆ ತೆಗೆದುಕೊಳ್ಳಲು 4-5-6ವರ್ಷ ಹಿಡಿಯುತ್ತಿರುವುದರಿಂದ ಸಾಕ್ಷಿಗಳು ಎಂದು ಏನು ಪ್ರೊಡ್ಯೂಸ್ ಮಾಡಿರುತ್ತೇವೆ ಅವರು ಹಣಕ್ಕೆ ಅಥವಾ ಒತ್ತಡಕ್ಕೆ ಮಣಿದು ಸಾಕ್ಷಿ ಕೊಡದಿರುವುದನ್ನು ತುಂಬಾ ಕೇಸುಗಳಲ್ಲಿ ಅಕ್ವಿಟ್ ಆಗುವುದನ್ನು ನೋಡುತ್ತಿದ್ದೇನೆ. ಇದಕ್ಕೆ ಕಾರಣ ಏನೇ ಆದರೂ ಇಂತಹ ಪ್ರಕರಣಗಳನ್ನು ಕೋರ್ಟಿನಲ್ಲಿ ವಿಚಾರಣೆ ಮಾಡಲಿಕ್ಕೆ ಇಲ್ಲ ಪೋಲಿಸ್ ಹಂತದಲ್ಲಿ ಚಾರ್ಜ್‌ಶೀಟ್ ಮಾಡಲಿಕ್ಕೆ ಆದಷ್ಟು ಕಡಿಮೆ ಅವಧಿ ತೆಗೆದುಕೊಂಡಾಗ ಅದರಿಂದ ನಮಗೆ ಸ್ವಲ್ಪಮಟ್ಟಿನ ನ್ಯಾಯ ಸಿಕ್ಕಬಹುದು. ಎರಡನೆಯದು ವರದಕ್ಷಿಣೆ ಪ್ರಕರಣಗಳು ಅಂಕಿಅಂಶಗಳ ಪ್ರಕಾರ ನಗರಗಳಲ್ಲಿ ಜಾಸ್ತಿ ಆಗುತ್ತಿವೆ. 1977 ರಲ್ಲಿ ಬೆಂಗಳೂರು ಸುತ್ತಮುತ್ತಲಲ್ಲಿ 714 ಇದ್ದರೆ ಇಡೀ ಕರ್ನಾಟಕದಲ್ಲಿ 217 ಆಗಿವೆ. ಇದಕ್ಕೆ ಕಾರಣವೇನೆಂದು ನಾವು ವಿಚಾರಿಸಿದಾಗ ಗ್ರಾಮೀಣ ಪ್ರದೇಶಗಳಲ್ಲಿ ಆಡಂಬರ ಜೀವನಕ್ಕೆ ಬಯಸುವ ಯುವಕರು ಕಡಿಮೆ ಇದ್ದಾರೆಂದು ಗೊತ್ತಾಗುತ್ತದೆ.

12.50 ಪಿ.ಎಂ.

ಚೇರ್ಮನ್ (ಡಾ: ಎಂ.ಪಿ. ಕರ್ಕಿ) ರವರು ಅಧಿಕಾರ ಪೀಠವನ್ನಲಂಕರಿಸಿದರು.

ಈ ವರದಕ್ಷಿಣೆ ಫ್ರೀಯಾಗಿ ಬರುವ ಹಣ ಕಷ್ಟಪಟ್ಟು ಸಂಪಾದನೆ ಮಾಡಿದ ಹಣವಲ್ಲ. ಆ ಹಣದಿಂದ ಆಡಂಬರ ಜೀವನವನ್ನು ನಡೆಸಬೇಕು ಎನ್ನುವ ಒಂದು ಆಸೆ ಆಕಾಂಕ್ಷೆ ಯುವಕ ಸಮಾಜ ಹಳ್ಳಿಗಾಡಿನಲ್ಲಿದೆ. ಎರಡನೆಯದು ಯಾವುದೇ ಹಳ್ಳಿಯಲ್ಲಿ ವರದಕ್ಷಿಣೆಗಾಗಿ ಒಬ್ಬ ಹೆಣ್ಣುಮಗಳಿಗೆ ಕಿರುಕುಳವನ್ನು ಕೊಡುತ್ತಿರುವಾಗ ಆ ಹಳ್ಳಿಯ ದೊಡ್ಡವರು ಎಂದು ಏನು ಹೇಳುತ್ತಾರೆ, ದೊಡ್ಡ ಮನೆತನದವರೇ ಆಗಿರಲಿ, ಎಲ್ಲಾ ಪಕ್ಷಗಳ ನಾಯಕರೇ ಆಗಿರಲಿ ಅವರು ಮಧ್ಯಂತರ ಪ್ರವೇಶ ಮಾಡಿ ಅದನ್ನು ತಡೆಗಟ್ಟುವ ವ್ಯವಸ್ಥೆಯನ್ನೂ ಸಹಾ ಮಾಡುತ್ತಿರುವುದರಿಂದ ಈ ಹಳ್ಳಿಗಾಡಿನಲ್ಲಿ ಇಂಥವುಗಳು ಸ್ವಲ್ಪ ಕಡಿಮೆಯಾಗುತ್ತಿರುವ ವಿಷಯವನ್ನೂ ಸಹ ನಾವು ಯೋಚನೆ ಮಾಡಬೇಕಾಗಿದೆ. ಇದಕ್ಕೆ ನಾವು ತೆಗೆದುಕೊಳ್ಳಬೇಕಾಗಿರುವ ಕ್ರಮಗಳೇನು ಎಂದು ಹೇಳಿದಾಗ ಜಾಯಿಂಟ್ ಹೌಸ್ ಕಮಿಟಿ ಎಂದು ಮಾಡಿ ಅದರ ಮುಖಾಂತರ ಏನು ಈಗ ಪ್ರಕರಣಗಳಿವೆ, ಅದನ್ನು ಆದಷ್ಟು ಬೇಗ ಇತ್ಯರ್ಥ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಎರಡನೆಯದು ಒಂದು ಅಡ್ವೈಸರಿ ಬೋರ್ಡ್ ಎಂದು ಮಾಡಿ ಕೆಲವು ಮುಖಂಡರುಗಳನ್ನು ಆ ಪ್ರಾಂತ್ಯದ ಸೋಷಿಯಲ್ ವರ್ಕರ್ಸ್‌ನ್ನು, ಎನ್.ಜಿ.ಓ.ಗಳನ್ನು, ಯಾರ್ಯಾರು ಒಳ್ಳೆಯ ಅಧಿಕಾರಿಗಳು ಎಂದು ಇದ್ದಾರೆ, ಅಧಿಕಾರಿಗಳಲ್ಲೂ ಕೆಲವರು ಮೊನ್ನೆ ನಾವು ಕೇಳಿದಾಗ ತುಂಬಾ ಜನರು ಕೆಲವು ಆಫೀಸರ್‌ಗಳು ಅನ್ಯಾಯ ಮಾಡಿದ್ದಾರೆ. ಕೆಲವರು ನ್ಯಾಯ ಮಾಡಿಕೊಟ್ಟರು ಎಂದು ಹೇಳುವ ಅಧಿಕಾರಿಗಳು ಇದ್ದಾರೆ ಎನ್ನುವ ಭಾವನೆಯನ್ನೂ ಸಹಾ ಅವರು ವ್ಯಕ್ತಪಡಿಸಿದ್ದಾರೆ. ಆದರಿಂದ ಯಾರು ಒಳ್ಳೆಯ ಚರಿತ್ರೆಯನ್ನು ಹೊಂದಿರುವ ಆಫೀಸರುಗಳನ್ನು ಎಲ್ಲರನ್ನೂ ಸೇರಿಸಿ ಒಂದು ಕಮಿಟಿ ಎಂದು ಮಾಡಿ ಆ ಕಮಿಟಿ ಮುಖಾಂತರ ಇಂಥ ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಎರಡನೆಯದು ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲೂ ಮಹಿಳಾ ಪೋಲೀಸ್ ಠಾಣೆಗಳನ್ನು ಓಪನ್ ಮಾಡಿದರೆ ಮಹಿಳೆ ತನಗಾದಂಥ ಅನ್ಯಾಯವನ್ನು ನೇರವಾಗಿ ಆ ಮಹಿಳಾ ಅಧಿಕಾರಿಗಳಿಗೆ ಹೇಳಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದನ್ನು ತಾವು ಮಾಡಬೇಕಾಗುತ್ತದೆ. ಎರಡನೆಯದು ಈ ತಹಶೀಲ್ದಾರ್‌ರವರು ಬಂದು ಪಂಚನಾಮೆ ಮಾಡುವುದಕ್ಕೆ ಹೆಣ್ಣುಮಗಳು ಸತ್ತುಹೋದಾಗ ಬರುತ್ತಾರೆ, ಆ ತಹಶೀಲ್ದಾರ್ ತನ್ನ ದಿನನಿತ್ಯದ ಕೆಲಸಕಾರ್ಯಗಳಲ್ಲ ಆದಷ್ಟು ಬೇಗ ಅಲ್ಲಿಗೆ ಹೋಗಲಿಕ್ಕೆ ಅವಕಾಶ ಸಿಗುತ್ತಿಲ್ಲ. ಅದರಿಂದಾಗಿ ಇದಕ್ಕೆ ಒಬ್ಬ ತಹಶೀಲ್ದಾರ್‌ರವರನ್ನು ಅಟ್‌ಲೀಸ್ಟ್ ಒಂದು ಸಬ್ ಡಿವಿಜನ್ ಗಾದರೂ ಒಬ್ಬೊಬ್ಬ ತಹಶೀಲ್ದಾರ್‌ರವರನ್ನು ನೇಮಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳುತ್ತಾ ಟೋಟಲ್ ಆಗಿ ವಿಮೆನ್ ಮೆಂಟಾಲಿಟಿ ಏನಿದೆ, ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್‌ನಲ್ಲಿ ಹುಟ್ಟಿ ಬೆಳೆದಿರುವ ಕಾಂಪ್ಲೆಕ್ಸ್ ಮಹಿಳೆಗೆ ಏನು ಇದೆ, ಅದನ್ನು ಹೋಗಲಾಡಿಸಲಿಕ್ಕೆ ಮಹಿಳೆಗೆ ಅವೇರ್‌ನೆಸ್ ಕ್ಯಾಂಪ್‌ನ್ನು ಮಾಡಬೇಕಾಗುತ್ತದೆ. ಮಹಿಳೆಗೆ ತನ್ನದೇ ಆದ ನ್ಯಾಯವನ್ನು ಕೇಳಲಿಕ್ಕೆ ಅಧಿಕಾರದ ಹಕ್ಕು ಇದೆ ಎನ್ನುವ ಒಂದು ಮನವರಿಕೆ ಮಾಡುವ ವ್ಯವಸ್ಥೆಯನ್ನು ಮಾಡಿ ಆ ಮಹಿಳೆಯಲ್ಲಿ ಆತ್ಮವಿಶ್ವಾಸವನ್ನು ಮತ್ತೆ ಆತ್ಮಗೌರವವನ್ನು

ಬೆಳೆಸುವ ವ್ಯವಸ್ಥೆಯನ್ನು ಸರ್ಕಾರ ಪಾಂಪ್ಲೆಟ್ಸ್‌ನಿಂದಾಗಲಿ ಇಲ್ಲ ಟಿವಿ ಮುಖಾಂತರವಾಗಲಿ, ಮಾಧ್ಯಮಗಳ ಮುಖಾಂತರವಾಗಲಿ ಪ್ರಚಾರ ಆಂದೋಲನ ಮಾಡಿ ಆ ಮಹಿಳೆಗೆ ತನ್ನದೇ ಆದ ಒಂದು ಶಕ್ತಿಯನ್ನು ನಿರೂಪಣೆ ಮಾಡಿಕೊಳ್ಳುವುದಕ್ಕೆ ಸರ್ಕಾರದ ವತಿಯಿಂದಾಗಲಿ, ಇಲ್ಲ ಕಾನೂನು ರೀತಿಯಾಗಿ ಆಗಲಿ ತನಗೆ ಸಿಗಬೇಕಾದ ಅಂಶಗಳನ್ನು ತಾನಾಗಿತಾನು ಸ್ವಶಕ್ತಿಯಿಂದ ಪಡೆಯಲಿಕ್ಕೆ ಅವಕಾಶ ಇದೆ ಎನ್ನುವ ಒಂದು ವಿಷಯವನ್ನು ಮಹಿಳೆಯರಿಗೆ ತಿಳಿಸುವ ಒಂದು ಕಾರ್ಯಕ್ರಮವನ್ನೂ ಸಹ ನಾವು ಸರ್ಕಾರ ಮಾಡಿಕೊಂಡಾಗ ಸ್ವಲ್ಪವಾದರೂ ಈ ಶೋಷಣೆ ಏನು ಇದೆ, ಇದು ಕಡಿಮೆಯಾಗುತ್ತದೆ ಎನ್ನುವ ವಿಷಯವನ್ನು ತಮ್ಮ ಮುಂದಿಡುತ್ತಾ ಅನಾದಿಕಾಲದಿಂದಲೂ ಈ ಮಹಿಳೆಯ ಶೋಷಣೆಯ ಬಗ್ಗೆ ಶ್ರೀಮತಿ ಲಲಿತಾನಾಯಕ್‌ರವರು ತುಂಬಾ ಚೆನ್ನಾಗಿ ಮಾತನಾಡಿದರು. ಆದರೆ ಅವತ್ತಿನಿಂದ ಇವತ್ತಿನವರೆಗೂ ಸಹನೆ ಎಂದರೆ ಏನು ಎಂದು ಮಹಿಳೆಯರಿಗೆ ಒಂದು ಪಟ್ಟವನ್ನು ಕೊಟ್ಟಿದ್ದೇವೆ, ಆದರಿಂದಾಗಿ ನಾವೆಲ್ಲಾ ಗೆಲ್ಲುತ್ತಾ ಇದ್ದೇವೆ ಎನ್ನುವ ಒಂದು ಭಾವನೆಯನ್ನೂ ಸಹಾ ಇವತ್ತು ನಾವು ಯೋಚನೆ ಮಾಡಬೇಕಾಗುತ್ತದೆ. ಕಾರಣ ಅವತ್ತು 14 ವರ್ಷಗಳ ವನವಾಸದ ನಂತರ ಸೀತೆಯನ್ನು ಶೀಲ ಪರೀಕ್ಷೆಗೆ ಒಳಪಡಿಸಿದಾಗ ಸೀತೆಯೂ ಸಹಾ ನಿನ್ನ ಶೀಲವನ್ನೂ ಸಹಾ ನಾನು ಪರೀಕ್ಷಿಸಬೇಕು ಎನ್ನುವ ಒಂದು ಮಾತನ್ನು ಆಡಿದ್ದರೆ ಇವತ್ತು ಈ ಹಿಂಸೆ ಹೆಣ್ಣುಮಕ್ಕಳಿಗೆ ಬರುತ್ತಿರಲಿಲ್ಲವೋ ಏನೋ ಎನ್ನುವ ಭಾವನೆ ಸಹಾ ನಮ್ಮಲ್ಲಿ ಬರುತ್ತಿದೆ. ಇದು ಸಾಕಾಗಲಿಲ್ಲ ಎಂದು ಹೆಂಡತಿಯನ್ನು ಮಾರಾಟಕ್ಕೆ ಇಟ್ಟಾಗ ನಿನ್ನನ್ನು ನೀನು ಮಾರಿಕೊಂಡು ಆ ಹಣವನ್ನು ತೆಗೆದುಕೋ ಎನ್ನುವ ಮಾತನ್ನು ಅವತ್ತು ಚಂದ್ರಮತಿ ಹೇಳಿದ್ದಿದ್ದರೆ ಇವತ್ತು ಹೆಣ್ಣುಮಕ್ಕಳನ್ನು ರೆಡ್ ಲೈಟ್ ಏರಿಯಾದಲ್ಲಿ ದೂರುವ ಒಂದು ವ್ಯವಸ್ಥೆ ಇರುತ್ತಿರಲಿಲ್ಲವೋ ಏನೋ ಎನ್ನುವ ಒಂದು ಯೋಚನೆ ಸಹ ಬರುತ್ತಿರುವುದರಿಂದ ಸಹನೆ ಆದಕ್ಕೊಂದು ಇತಿಮಿತಿ ಇರುತ್ತದೆ ಎನ್ನುವುದನ್ನು ಮನಗಂಡು ಆದಕ್ಕೆ ತಕ್ಕಂತೆ ಶಾಸನಗಳನ್ನು ಏನು ಮಾಡಬೇಕೆಂದು ಸರ್ಕಾರಕ್ಕೆ ಈಗ ನಾನು ಹೇಳಿದ್ದೇನೆ, ಆದನ್ನು ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡುತ್ತೀರಿ ಎನ್ನುವ ಒಂದು ವಿಷಯವನ್ನು ಹೇಳುತ್ತಾ ಇಷ್ಟೆಲ್ಲಾ ಮಾಡಿದಮೇಲೆ ಏನು ಕಷ್ಟಪಟ್ಟು ಒಂದು ಮಹಿಳಾ ವಿಮೋಚನೆ ಎಂದು ತುಂಬಾ ಕಷ್ಟಪಟ್ಟು ಅಂಕಿಅಂಶಗಳನ್ನು ಕಲೆಕ್ಟ್ ಮಾಡಿದ್ದಾರೆ. ಅವರಾಗಿಯೇ ಅವರು ಹೋಗಿ ನೊಂದ ಮಹಿಳೆಯರನ್ನು ಭೇಟಿ ಮಾಡಿ ಅವರಿಂದಲೂ ಸಹಾ ಮಾಹಿತಿಯನ್ನು ಪಡೆದಿದ್ದಾರೆ. ಆ ರೀತಿ ಆಗಿರುವ ಕೇಸ್‌ಗಳನ್ನು ಆದಷ್ಟು ಬೇಗ ಇತ್ಯರ್ಥ ಮಾಡಲಿಕ್ಕೆ ಸರ್ಕಾರ ಮುಂದೆ ಬರಬೇಕು ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಛೇರ್ಮನ್ :— ಮಾನ್ಯ ಲೀಲಾದೇವಿ ಆರ್. ಪ್ರಸಾದ್‌ರವರು ಮಾತನಾಡುತ್ತಾರೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಅಧ್ಯಕ್ಷರೇ, Iam on a point of Order. ಮಂತ್ರಿಗಳು ಭಾಗವಹಿಸಬಹುದಾ ಎಂಬುದು ಒಂದು

ಇತ್ಯರ್ಥವಾಗಬೇಕು. ಸೀಟನ್ನು ಬಿಟ್ಟು ಹೋಗಿದ್ದಾರೆ, ಅವರು ಅಲ್ಲಿಂದ ಮಾತನಾಡಬಹುದಾ ಎಂದು ಎರಡು ಇತ್ಯರ್ಥವಾಗಬೇಕು. ನಾನು ಅವರು ಮಾತನಾಡುವುದಕ್ಕೆ ವಿರೋಧವಾಗಿಲ್ಲ. ಈ ಸದನದಲ್ಲಿ ಸಂಪ್ರದಾಯಗಳನ್ನು ಹೊಸಹೊಸದಾಗಿ ಮಾಡುವುದಕ್ಕೆ ಮೊದಲೇ ತೀರ್ಮಾನವಾಗಿ, ಆಗಬೇಕು. ಅವರವರು ಸೀಟು ಬಿಟ್ಟು ಅಲ್ಲಿಗೆ ಹೋಗಿ ಮಾತನಾಡಬಹುದಾ? ಮಂತ್ರಿಗಳು ಈಗ ಮಾತನಾಡುವ ಮಾತಿಗೂ ಇನ್ನೊಬ್ಬರು ಮಂತ್ರಿಗಳು ಕೊಡುವ ಉತ್ತರಕ್ಕೂ ವ್ಯತ್ಯಾಸವಾದರೆ ಲೀಲಾದೇವಿ ಅವರ ನಿಲುವು ಏನಾಗುತ್ತದೆ ಎನ್ನುವುದಕ್ಕೆ ಅವರು ಮೊದಲೇ ಸ್ಪಷ್ಟೀಕರಣ ಕೊಡಬೇಕು. ಆಮೇಲೆ ಅವರು ಸ್ಥಾನಕ್ಕೆ ಬಂದು ಮಾತನಾಡದೆ ಹೋದರೆ ಇಂಥದ್ದೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆಯೇ ಎಂದು ಹೇಳಬೇಕು. ಎಲ್ಲಾ ಮಂತ್ರಿಗಳು ನಾಳೆ ಈ ಸಭೆಯಲ್ಲಿ ಒಂದೊಂದು ವಿಷಯದ ಬಗ್ಗೆ ನನ್ನದು ವೈಯಕ್ತಿಕ ಎಂದು ಶುರುಮಾಡಿದರೆ ಹೇಗೆ?

SRI PRAMILA NESARGI :— I am on a point of Order. ಅಧ್ಯಕ್ಷರು ಈಗಾಗಲೇ ತೀರ್ಪು ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರು ಲೀಲಾದೇವಿ ಪ್ರಸಾದ್‌ರವರನ್ನು ಮಂತ್ರಿಯಾಗಿ ಅಲ್ಲ, ನೀವು ಮಹಿಳೆಯಾಗಿ ಇಲ್ಲಿ ಮಾತನಾಡತಕ್ಕದ್ದು ಎಂದು ಆದೇಶ ಕೊಟ್ಟು ಆರ್ಡರ್ ಆಗಿದೆ. ಆದಾದನಂತರ ಇವರ ಪಾಯಿಂಟ್ ಆಫ್ ಬರುವುದಿಲ್ಲ, ಏನೂ ಇಲ್ಲ ಆದ್ದರಿಂದ ಇವರು ಮಾತನಾಡುವುದಕ್ಕೆ ಅರ್ಥವಿಲ್ಲ ಎಂದು ಹೇಳುತ್ತೇನೆ.

ಛೇರ್ಮನ್ :— ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿಮಗೆ ಅವಕಾಶ ಕೊಡುತ್ತೇನೆ. ಈಗ ಮಾಧುಸ್ವಾಮಿರವರು ಮಾತನಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅಧ್ಯಕ್ಷರೇ, I want a ruling from the Chair. ಇದು ಪ್ರಿಸಿಡೆಂಟ್ ಆಗುತ್ತದೆ. ನಾಳೆ ಬೇರೆ ಮಂತ್ರಿಗಳು ಯಾವುದಾದರೂ ವಿಷಯಗಳು ಬಂದಾಗ ಸರ್ಕಾರದ ತೀರ್ಮಾನಕ್ಕೆ ಅಥವಾ ನಿಲುವಿಗೆ ಬದಲಾಗಿ ಮಾತನಾಡುವುದಕ್ಕೆ ಇಲ್ಲಿ ಎದ್ದು ನಿಂತುಕೊಂಡರೆ ಈ ಸಭೆಯ ಘನತೆ ಏನು? ಅದು ಟ್ರೆಜರಿ ಬೆಂಚ್ ವ್ಯೂ ಆಗುತ್ತಾ, ಸರ್ಕಾರದ ವ್ಯೂ ಆಗುತ್ತಾ? Can a Minister who has many opportunities to express the views, ಕ್ಯಾಬಿನೆಟ್‌ನಲ್ಲಿ ಮಾಡಬಹುದು. ಹೊರಗಡೆ ಮಾಡಬಹುದು, ಮತ್ತೊಂದು ಕಡೆ ಮಾಡಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರು ಆಗಲೇ ಆದೇಶ ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾನು ಪಾಯಿಂಟ್ ಆಫ್ ಆರ್ಡರ್ ಹೇಳಿದಾಗ ತಾವು ಎದ್ದು ಏಳಬಾರದು ಎನ್ನುವ ಸೌಜನ್ಯವನ್ನು ಕಲಿತುಕೊಳ್ಳಿ. Let me complete my submission. ನಾನು ನಿಮ್ಮಷ್ಟೇ ಈ ಸಭೆಯಲ್ಲಿ ಕೆಲಸ ಮಾಡಿದ್ದೇನೆ. ಈ ರೀತಿ ನಿಯಮಗಳನ್ನು ಗಾಳಿಗೆ ತೂರುವುದಕ್ಕೆ ಬಿಡುವುದಕ್ಕಾಗುವುದಿಲ್ಲ ಈ ಸಭೆಯನ್ನು.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೇ, ನಾನು ಮಾಧುಸ್ವಾಮಿರವರ ಕ್ರಿಯಾಲೋಪಕ್ಕೆ ನನ್ನ ಧ್ವನಿಗೂಡಿಸಿ ಬೆಂಬಲ ಕೊಟ್ಟು ಈಗ ಮಾನ್ಯ ಪ್ರಮೀಳಾರವರು ಹೇಳಿದರು. ಅವರು ಮಂತ್ರಿಯಾಗಿ ಮಾಡುವುದಿಲ್ಲ. ಅವರು ವೈಯಕ್ತಿಕವಾಗಿ ಮಾಡುತ್ತಾರೆ ಎಂದರು. ಇಲ್ಲಿ ಎರಡು ಪಾತ್ರ ಮಾಡುವುದಕ್ಕಾಗುವುದಿಲ್ಲ. ಇಲ್ಲಿರುವುದು ಒಂದೇ ಪಾತ್ರ. ನಾನು ಆಗ ಗಮನಿಸಲಿಲ್ಲ. ದಯವಿಟ್ಟು ಕ್ಷಮಿಸಬೇಕು. ಇಲ್ಲಿ ಮಂತ್ರಿಯಾಗಿ ಮಾಡಬೇಕು. ಆದ್ದರಿಂದ ಇಲ್ಲಿ ಮಂತ್ರಿಯಾಗಿ ಮಾಡುವುದು ಒಂದುಪಾತ್ರ. ಇಲ್ಲಿ ಅವರು ಮಂತ್ರಿಯಾಗಿಲ್ಲ, ಅವರು ಶಾಸಕರಾಗಿ ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಮಹಿಳೆಯರ ಪರವಾಗಿ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಒಂದು ಅವರು ಮಂತ್ರಿಯಾಗಿ ಇಲ್ಲಿ ಮಾತನಾಡತಕ್ಕಂಥದ್ದೇ ಅವರು ಶಾಸಕರಾಗಿ ಮಾತನಾಡುವುದಕ್ಕಾಗುವುದಿಲ್ಲ. ಅವರು ಮಂತ್ರಿಯಾಗಿದ್ದಾರೆ. ಮಂತ್ರಿಯಾಗಿ ಒಂದು ಪಾತ್ರ, ಶಾಸಕರಾಗಿ ಇನ್ನೊಂದು ಪಾತ್ರ, ಈ ರೀತಿ ಎರಡು ಪಾತ್ರವನ್ನು ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎರಡನೆಯದು ಈ ಸಭೆಯ ನಡವಳಿಕೆ ಪ್ರಕಾರ ಮಂತ್ರಿಯಾಗಿ ಎಲ್ಲಿ ಕುಳಿತುಕೊಳ್ಳುತ್ತಾರೋ ಅಲ್ಲಿ ಮಾತನಾಡುವುದು ಅದು ಎರಡನೆಯದು. ಆದ್ದರಿಂದ ತಾವು ಅದನ್ನು ದಯವಿಟ್ಟು ತಿಳಿದುಕೊಳ್ಳಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :— ನಾನು ಮಂತ್ರಿಯಾಗೇ ಮಾತನಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅಧ್ಯಕ್ಷರೇ, I am on a point of Order.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :— ನಾನು ಮಂತ್ರಿಯಾಗೇ ಉತ್ತರ ಕೊಡುತ್ತೇನೆ ಮಾತನಾಡಿದವರೆಲ್ಲರಿಗೂ.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾನು ಮಾನ್ಯ ಸಿಂಧ್ಯಾರವರಲ್ಲಿ ಕೇಳುತ್ತೇನೆ, ಇದು ಅವರ ಉತ್ತರ ಎಂದು ನಾವು ಟ್ರೀಟ್ ಮಾಡಬಹುದಾ?

ಶ್ರೀ ವಾಟಾಳ್ ನಾಗರಾಜ್ :— ಈಗ ಅವರು ಉತ್ತರ ಕೊಡುವ ಪ್ರಶ್ನೆ ಇಲ್ಲವೇ ಇಲ್ಲ. ಇನ್ನು ಚರ್ಚೆ ಮುಗಿದಿಲ್ಲ. ಇನ್ನು ಚರ್ಚೆಯನ್ನು ಬಹಳ ಜನರು ಮಾಡಬೇಕಾಗಿದೆ. ಮತ್ತೆ ಉತ್ತರ ಕೊಡುವವರು ತಾವೋ, ಮುಖ್ಯಮಂತ್ರಿಗಳೋ ಎಂದುತೀರ್ಮಾನವಾಗಿಲ್ಲ. ಆದ್ದರಿಂದ ಚರ್ಚೆ ಮುಗಿದಮೇಲೆ ಉತ್ತರ ಕೊಡತಕ್ಕಂಥದ್ದು. ಚರ್ಚೆ ಮುಗಿಯಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅವರು ಮಧ್ಯೆ ಇಂಟರ್‌ವೆನ್ಷನ್ ಆಗುವುದಕ್ಕೆ ಪ್ರಶ್ನೆಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :— ಇದೊಂದು ವಿಶೇಷ ಸಂದರ್ಭ ಎಂದು ಹೇಳಿ ಮಹಿಳೆಯರ ಸಮಸ್ಯೆಗಳನ್ನು ಚರ್ಚೆ ಮಾಡಬೇಕು ಎಂದು ಹೇಳಿ

ನಿಯಮ 69ರ ಅಡಿಯಲ್ಲಿ ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಕಾಲದ ಸಮಯದ ವೇಳೆಯನ್ನು ಅವರೇ ನಿಗದಿ ಮಾಡಿದ್ದಾರೆ. ಇದಕ್ಕೆ ಸರ್ಕಾರದಿಂದ ಉತ್ತರದ ರೂಪದಲ್ಲಿ ಕೆಲವು ಸ್ಪಷ್ಟಣೆಗಳನ್ನು, ವಿವರಣೆಗಳನ್ನು ಕೊಡಬೇಕಾಗುತ್ತದೆ. ನನ್ನ ಒಂದು ಅಭಿಪ್ರಾಯದಲ್ಲಿ ತಾವೆಲ್ಲಾ ಸದಸ್ಯರುಗಳು ಮಾತನಾಡಿ. ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ನಮ್ಮೆಲ್ಲರ ಪರವಾಗಿ ಶ್ರೀಮತಿ ಲೀಲಾದೇವಿ ಅವರು ಮಾತನಾಡುತ್ತಾರೆ. ಆದಾದ ನಂತರ ಏನಾದರೂ ಅವರು ಹೇಳಿರತಕ್ಕ ಅಂಶಗಳಿಗೆ ಮತ್ತೇನಾದರೂ ನಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ ಜೋಡಿಸಬೇಕು ಎಂದಿದ್ದರೆ ನಾನೂ ಹೇಳುತ್ತೇನೆ.

ಶ್ರೀ ಕೆ.ಸಿ. ಮಾಧುಸ್ವಾಮಿ :— ಸರ್ಕಾರದ ಪರವಾಗಿ ಮಾತನಾಡುವುದು ಇದ್ದರೆ ನಮ್ಮದು ಯಾರದ್ದೂ ವಿರೋಧ ಇಲ್ಲ. ಉತ್ತರ ಕೊಡುವ ಕಾಲಕ್ಕೆ ಮಾತನಾಡಿ. ತಾವು ಚರ್ಚೆಯಲ್ಲಿ ಭಾಗವಹಿಸುವ ಹಕ್ಕು ಇಲ್ಲ. because you are part of Government.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ವಿಷಯಗಳು ಇಲ್ಲಿ ಪ್ರಸ್ತಾಪ ಆಗುತ್ತಿದೆ. ಇವತ್ತಿನ ಚರ್ಚೆ ಇತಿಹಾಸದ ಕಾಲಗರ್ಭಕ್ಕೆ ಕೈಹಾಕಿರುವಂತಹ ವಿಚಾರ. ಕಾಲಗರ್ಭಕ್ಕೆ ಕೈಹಾಕಿದ್ದೀರಿ. ಯಾವ್ಯಾವ ದಿಕ್ಕಿಗೆ ಹೋಗುತ್ತದೆ ಎಂದು ಇದನ್ನು ನಿರೀಕ್ಷೆ ಮಾಡಲಿಕ್ಕೆ ಸಾಧ್ಯ ಇಲ್ಲದೇ ಇರತಕ್ಕಂಥ ಒಂದು ವಿಷಯ. ಬಹುಶಃ ಮಹಿಳೆಯರ ಸಮಸ್ಯೆ ಎಂದರೆ ಕಾನೂನಿನಲ್ಲಿ ಪರಿಹಾರ ಮಾಡಬಹುದು. ಕೆಲವು ಸಲಹೆಗಳನ್ನು ಕೊಟ್ಟರೆ, ಆ ಸಲಹೆಗಳನ್ನು ಸ್ವೀಕಾರ ಮಾಡಿ, ಅದರಿಂದ ಮಹಿಳೆಯರ ಸಮಸ್ಯೆ ಪರಿಹಾರ ಆಗುತ್ತದೆ ಅಥವಾ ಯಾವುದಾದರೂ ಕೆಲವು ಕಮೀಷನ್ ಆಫ್ ಎನ್‌ಕ್ವೈರೀಸ್ ಮಾಡಿದರೆ ಆ ಮಹಿಳೆಯರ ಸಮಸ್ಯೆ ಪರಿಹಾರ ಆಗುತ್ತದೆ. ಅವರನ್ನು ಸಮಾನತೆಯಿಂದ ನೋಡಲಿಕ್ಕೆ ಆಗುತ್ತದೆ- ಎನ್ನತಕ್ಕ ಅಭಿಪ್ರಾಯಗಳು ಏನು ಇದೆ. ಅವೆಲ್ಲವೂ ಸಂಪೂರ್ಣ ಬೂಟಾಟಿಕೆ. ಯಾವುದೇ ಕಾನೂನಿನಿಂದ ಮಹಿಳೆಗೆ ಸಮಾನತೆಯನ್ನು ಕೊಡುವುದಕ್ಕೆ ಸಾಧ್ಯ ಇಲ್ಲ. ಅಥವಾ ಯಾವುದೇ ಕಮೀಷನ್ ಆಫ್ ಎನ್‌ಕ್ವೈರೀಸ್ ಮಾಡುವುದರ ಮುಖಾಂತರವಾಗಿ ಮಹಿಳೆಯರಿಗೆ ಇರತಕ್ಕ ನಿಜವಾದ, ಮೂಲಭೂತ ಸಮಸ್ಯೆ ಪರಿಹಾರ ಮಾಡಿ ಮಹಿಳೆಯರನ್ನು ಒಂದು ವ್ಯಕ್ತಿಯಾಗಿ, ಪರಿಪೂರ್ಣ ವ್ಯಕ್ತಿಯಾಗಿ ಇಡೀ ಸಮಾಜದಲ್ಲಿ ಪ್ರತಿ ಒಬ್ಬರೂ ಸಮಾನರಾಗಿ ಬದುಕತಕ್ಕಂಥ ವ್ಯವಸ್ಥೆ ಬರುತ್ತದೆಂದು ಯಾರಾದರೂ ನಿರೀಕ್ಷೆ ಮಾಡಿದರೆ ಅವರು ಯಾವುದೋ ಭ್ರಮಾಲೋಕದಲ್ಲಿ ತೇಲಾಡುತ್ತಿದ್ದಾರೆ ಎನ್ನತಕ್ಕದ್ದು ನನ್ನ ಸ್ಪಷ್ಟ ಅಭಿಪ್ರಾಯ. ಇಲ್ಲಿ ಎರಡು ವಿಷಯಗಳು ಇವೆ. ಮಹಿಳೆಯರನ್ನು ಇತಿಹಾಸ ಪೂರ್ವದ ಕಾಲಘಟ್ಟಕ್ಕೆ ಅಳೆಯಬೇಕಾಗುತ್ತದೆ. ಇತಿಹಾಸದಲ್ಲಿ ನಂಬಿಕೆ ಇಲ್ಲದೇ ಇರತಕ್ಕ ವೇದ ಪೂರ್ವ ಭಾಗದ ಘಟನೆಯನ್ನು ಆಲೋಚನೆ ಮಾಡಬೇಕಾಗುತ್ತದೆ. ಸಮಾಜದಲ್ಲಿ ಎರಡು ಘಟ್ಟಗಳು ಇವೆ. ಒಂದು ಇತಿಹಾಸ ಪೂರ್ವದ ಸಮಾಜ ಅಥವಾ ವೇದ ಪೂರ್ವ ಸಮಾಜ ಅಂದರೆ pre

historic age, prevedic age, ಎಂದು ಹೇಳತಕ್ಕ ಎರಡು ಘಟ್ಟಗಳು ಇದೆ. ಆ ಪ್ರೀ ಹಿಸ್ಟಾರಿಕ್ ಏಜ್ ಎಂದು ಹೇಳಿ ಇತಿಹಾಸ ಪ್ರಾರಂಭ ಆಗುವುದಕ್ಕಿಂತ ಮೊದಲೇ ಏನು ಸಮಾಜ ಇತ್ತು ಆ ಸಮಾಜದಲ್ಲಿ ಮಹಿಳೆಗೆ ಇದ್ದಂತಹ ಸಮಸ್ಯೆ ಏನು? ಪರಿಸ್ಥಿತಿ ಏನು. ಇತಿಹಾಸ ಪ್ರಾರಂಭ ಆದ ಮೇಲೆ ಮಹಿಳೆ ಸಮಸ್ಯೆ ಏನು ಎನ್ನತಕ್ಕದ್ದು ಒಂದು ಪ್ರಶ್ನೆ. ಎರಡನೆಯ ಪ್ರಶ್ನೆ. ವೇದ ಪೂರ್ವ ಸಮಾಜ. ಇತಿಹಾಸದಲ್ಲಿ ನಂಬಿಕೆ ಇಲ್ಲದೇ ಇರತಕ್ಕ ಜನಕ್ಕೆ ವೇದ, ಪುರಾಣಗಳ ಮೇಲೆ ನಂಬಿಕೆ ಇರತಕ್ಕ ಜನಕ್ಕೆ ಅವರು ನಂಬಿಕೊಂಡಿರತಕ್ಕದ್ದು ವೇದ ಪೂರ್ವ ಸಮಾಜ ಎಂದು ಹೇಳುತ್ತೇವೆ. ಅಂದರೆ ಪ್ರೀ ವೇದಿಕ ಏಜ್ ಎಂದು ಹೇಳುತ್ತೇವೆ, ಎರಡರಲ್ಲೂ ನಾವು ನೋಡತಕ್ಕ ಸಂದರ್ಭದಲ್ಲಿ ಪ್ರೀ ಹಿಸ್ಟಾರಿಕ್ ಏಜ್ ಏನು ಇದೆ, ಇತಿಹಾಸ ಪೂರ್ವ ಸಮಾಜದಲ್ಲಿ ಮಹಿಳೆ ಎಂದೂ ಬಾಲಿಶಳಾಗಿ ಇರಲಿಲ್ಲ ಅಥವಾ ಮಹಿಳೆಯನ್ನು ಪುರುಷನ ಅರ್ಧಾಂಗಿ ಎಂದು ಹೇಳಿ ಎಂದೂ ಕರೆಯಲಿಲ್ಲ ಅಥವಾ ಆ ಸಮಾಜದಲ್ಲಿ ಮಹಿಳೆ ಪರಾವಲಂಬಿ ಆಗಿರಲಿಲ್ಲ. ಮಹಿಳೆ ಎನ್ನತಕ್ಕಂಥ ಸ್ವತಂತ್ರವಾದ ಅಸ್ತಿತ್ವ ಮಾನವ ಇತಿಹಾಸದಲ್ಲಿ ಎಂದಾದರೂ ಇದ್ದಿದ್ದರೆ ಅದು ಪ್ರೀ ಹಿಸ್ಟಾರಿಕ್ ಏಜ್‌ನಲ್ಲಿ. That is only in pre historic age not after the history. ಇಂತಹ ಒಂದು ಹಿನ್ನೆಲೆಯನ್ನು ನಾವು ನೋಡಬೇಕಾದ ಸಂದರ್ಭದಲ್ಲಿ ನಮ್ಮ ಮಾನವ ಇತಿಹಾಸ ಇವತ್ತು ಯಾವ ರೀತಿಯಲ್ಲಿ ಬೆಳೆಯುತ್ತಾ ಬಂದಿದೆ ಎಂದು ಹೇಳಿದರೆ ಆ ಇತಿಹಾಸದಲ್ಲಿ ಸ್ತ್ರೀ ಮತ್ತು ಪುರುಷ ಎಂದು ಹೇಳಿ ವಿಭಾಗ ಮಾಡುವುದು. ಇಲ್ಲಿಂದ it is only after the commencement of history. What is that history? History of private property. ಆಸ್ತಿಯ ಹಕ್ಕು ಈ ಸಮಾಜದಲ್ಲಿ ಎಂದು ಉಗಮ ಆಗುವುದಕ್ಕೆ ಪ್ರಾರಂಭ ಆಯಿತೋ ಆ ದಿವಸ ಸ್ತ್ರೀಗೆ ಇದ್ದಂತಹ ಸಂಪೂರ್ಣ ಸ್ವಾತಂತ್ರ್ಯ, ಪರಿಪೂರ್ಣ ಸ್ವಾತಂತ್ರ್ಯ, ಸ್ವತಂತ್ರವಾದ ಅಸ್ತಿತ್ವ ಎಲ್ಲವೂ ನಾಶ ಆಗಿದ್ದು. ಒಂದೇ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಈಶ್ವರನಿಗೆ ಅರ್ಧ ನಾರೀಶ್ವರ ಎಂದು ಹೇಳುತ್ತಾರೆ. ಅರ್ಧನಾರೀಶ್ವರ ಎಂದು ಹೆಸರು ಏಕೆ ಬಂತು? ಅರ್ಧ ನಾರೀಶ್ವರ ಎಂದು ಹೆಸರು ಬರುವುದಕ್ಕೆ ವಿಶೇಷವಾದ ಕಾರಣ ಏನು ಎಂದರೆ ಅಲ್ಲಿಂದ ಇಲ್ಲಿಯವರೆಗೆ ಇತಿಹಾಸ ಪ್ರಾರಂಭ ಆಗಿರಲಿಲ್ಲ. ನಾನು ಪುರಾಣದ ದೃಷ್ಟಿಯಿಂದ ಹೇಳತಕ್ಕದ್ದು. ಇತಿಹಾಸದ ದೃಷ್ಟಿಯಿಂದ ಅಲ್ಲ. ಪುರಾಣ ಇತಿಹಾಸ ಮಾಡತಕ್ಕದ್ದು, ಪುರಾಣವನ್ನು ಇತಿಹಾಸ ಮಾಡತಕ್ಕ ಒಂದು ಕೆಟ್ಟ ಸಂಪ್ರದಾಯ ನಮ್ಮ ದೇಶದಲ್ಲಿ ಪ್ರಾರಂಭ ಆಗಿದೆ. ಹಾಗಾಗಿ ನಾವು ಪುರಾಣ ಎಂದು ಹೇಳತಕ್ಕ ದೃಷ್ಟಿಯಲ್ಲಿ ಹೇಳುವುದಾದರೆ ಅರ್ಧ ನಾರೀಶ್ವರ ಎಂದು ಶಿವನಿಗೆ ಹೆಸರು ಬರುವುದಕ್ಕೆ ಕಾರಣ ಏನು ಅಂದರೆ ಆ ಸಮಾಜದ ಕಾಲ ಘಟ್ಟ ಏನು ಇತ್ತು, ಅದು ಅಲ್ಲಿಂದ ಪುರುಷ ಮತ್ತು ಸ್ತ್ರೀ ಇಬ್ಬರೂ ಸಮಾನರಲ್ಲ ಎಂದು ಹೇಳಲಿಕ್ಕೆ ತೀರ್ಮಾನ ಆದಂತಹ ಒಂದು ಸಮಾಜದ ಕಾಲ ಕೂಡ.

ಛೇರ್ಮನ್ :— ಒಂದು ನಿಮಿಷ, ನೋಟೀಸ್ ಓದಿ ಬಿಡುತ್ತೇನೆ. ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಲ್ಲೆಗಳು ಅತ್ಯಧಿಕವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನಗೆ ಗೊತ್ತಿದೆ. ಈ ವಿಷಯವನ್ನು ಎಲ್ಲರೂ ಮಾತನಾಡಿದ್ದು.

ಛೇರ್ಮನ್ :— ಇವರುಗಳ ಮೇಲೆ ಹಲ್ಲೆ ನಡೆಯದೇ ಇರುವ ದಿನಗಳೇ ಇಲ್ಲ. ಪ್ರತಿನಿತ್ಯ ಸುದ್ದಿ ಪತ್ರಿಕೆಯಲ್ಲಿ ಈ ಸಂಬಂಧ ವಿಷಯಗಳು ಇದ್ದೇ ಇರುತ್ತವೆ. ರಾಜ್ಯದಲ್ಲಿ ಒಂದು ಮಾಹಿತಿ ಪ್ರಕಾರ 700 ಜನ ಮಹಿಳೆಯರು, ಅತ್ಯಾಚಾರ, ಸ್ಟೌವ್ ಸಿಡಿತ, ವರದಕ್ಷಿಣೆ ಸರಾಪಹರಣಕ್ಕೆ ಬಲಿ ಆಗುತ್ತಿದ್ದಾರೆ ಎಂದು ಹೇಳಿ ಈ ಬಗ್ಗೆ ಸ್ಪೆಸಿಫಿಕ್ ಆಗಿ ಈ ಸದನದಲ್ಲಿ ಚರ್ಚೆ ಆಗಬೇಕಾಗಿದೆ. ಆದಕ್ಕಾಗಿ ತಾವು ಪೀಠಿಕೆಯನ್ನು ಸ್ವಲ್ಪ ಏನಾದರೂ ಹೇಳಿದರೆ ಅಡ್ಡಿ ಇಲ್ಲ. ಅದನ್ನು ಬಹಳ ಉದ್ದ ಹೇಳಿಕೊಂಡು ಹೋದರೆ ಸದನದ ಮುಂದಿನ ಕಾರ್ಯಕಲಾಪಗಳಿಗೆ ತೊಂದರೆ ಆಗುತ್ತದೆ. ಇದಕ್ಕಾಗಿ ಸಮಯ ನಿಗದಿ ಆಗಿರತಕ್ಕದ್ದು ಒಂದು ಗಂಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಎಷ್ಟು ಸಮಯ ಕೊಡುತ್ತೀರಿ, ಅಷ್ಟು ಸಮಯ ನಿಗದಿ ಮಾಡಿ. ನಿಗದಿ ಮಾಡಿದ ಸಮಯದಲ್ಲಿ ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ.

ಛೇರ್ಮನ್ :— ತಾವೇ ನಿಗದಿ ಮಾಡಿಕೊಳ್ಳಿ. ನಾನು ಇರತಕ್ಕ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ಪ್ರಸ್ತಾಪ ಮಾಡುತ್ತಾ ಇರತಕ್ಕದ್ದು ಯಾರದೋ ತುಟಿಗೆ ಬೆಣ್ಣೆ ಸವರತಕ್ಕ ಪ್ರಶ್ನೆ ಅಲ್ಲ ಅದು. ನೀವೇನು ಸಮಯ ನಿಗದಿ ಪಡಿಸಿದ್ದೀರೋ ಅದನ್ನು ಹೇಳಿ, ಅದರಂತೆ ಮಾಡೋಣ.

ಶ್ರೀ ಬಿ.ಎನ್. ಬಚ್ಚೇಗೌಡ :— ಹಾಸ್ಯವಾಗಿ ಕಾಮ್ ಆಗಿ ತೆಗೆದುಕೊಳ್ಳಿ. ಮಹಿಳೆಯರ ವಿಚಾರ ಮಾತನಾಡುವಾಗ ಬಹಳ ಕೋಪವಾಗಿ, ಸಿಟ್ಟಿಗೆ ಏಳಬಾರದು, ರಿವೆಂಜ್ ತೆಗೆದುಕೊಳ್ಳಬಾರದು.

ಛೇರ್ಮನ್ :— ಇನ್ನೂ ಕೆಲವರು ಮಾತನಾಡಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನೀವು ಎಷ್ಟು ಸಮಯ ಕೊಡುತ್ತೇನೆಂದು ಹೇಳಿ ಬಿಡಿ, ಅಷ್ಟರಲ್ಲೇ ನಾನು ಮಾತನಾಡುತ್ತೇನೆ. ಅಷ್ಟಾದರೂ ಆಗಬೇಕಲ್ಲಾ ನಾನು ಏನು ಮಾತನಾಡಬೇಕು ಎಂಬುದು ನನಗೆ ಬಿಟ್ಟಿದ್ದು. ನೀವು ಸಮಯ ನಿಗದಿ ಮಾಡಿ, ನೀವು ಕೊಟ್ಟ ನಿಗದಿತ ಸಮಯದಲ್ಲಿ ನಾನು ಹೇಳುತ್ತೇನೆ.

ಛೇರ್ಮನ್ :— ಹತ್ತು ನಿಮಿಷ ಮಾತನಾಡಿ. ಈಗ 2-3 ಜನ ಮಾತನಾಡಿದ್ದಾರೆ. ನಾನು ಅಲ್ಲಿಂದಲೂ ಕುಳಿತುಕೊಂಡು ಕೇಳಿದ್ದೇನೆ. ಇಲ್ಲೂ ಕುಳಿತು ಕೇಳಿದ್ದೇನೆ. ಇದು ವಿಶೇಷವಾಗಿ ಸ್ತ್ರೀಯರ ಮೇಲೆ ಹಲ್ಲೆ ನಡೆಯುತ್ತಿರುವ ವಿಚಾರ ಆಗಿರುವುದರಿಂದ ಅವರು ಸ್ವಲ್ಪ ಹೆಚ್ಚಿನ ಸಮಯ ತೆಗೆದುಕೊಂಡಿರಲಿಕ್ಕೆ ಸಾಕು. ತಾವು ಕೂಡ ಅದಕ್ಕೆ ಹೊರತು ಎಂದು ನಾನು ಹೇಳುವುದಿಲ್ಲ. ಆದರೆ ಇದಕ್ಕೆ ಈ ಸೆಕ್ಷನ್ ಅಡಿಯಲ್ಲಿ ಇರತಕ್ಕ ಸಮಯ ಒಂದು ತಾಸು. ವಿಶೇಷವಾದ ಚರ್ಚೆ ಆಗಿರುವುದರಿಂದ, ವಿಶೇಷವಾಗಿ ಸಾಮಾಜಿಕವಾದ ಚರ್ಚೆ ಆಗಿರುವುರಿಂದ, ಸ್ವಲ್ಪ ಸಮಯದ ಅವಕಾಶವನ್ನು ಮಾಡಿಕೊಂಡು ಆ ಸಮಯಕ್ಕೆ ಅಂಟಿಕೊಂಡರೆ ಅನುಕೂಲ. ತಾವು ಮಾತನಾಡಬೇಡಿ ಎಂದು ನಾನು ಹೇಳಲಿಲ್ಲ. ಪ್ರತಿ ಒಬ್ಬರೂ ಮಾತನಾಡಬೇಕು. ವಿತ್ತೀಯ ಕಾರ್ಯಕಲಾಪಗಳು ಆಗಬೇಕಾಗಿದೆ. ಹಾಗೆಯೇ ಬೇರೆ ಬೇರೆ ಕಾರ್ಯಕ್ರಮಗಳೂ ಇದೆ.

ಶ್ರೀಮತಿ ಬಿ.ಟಿ ಲಲಿತಾ ನಾಯಕ್ :— ಇದು ಸೂಕ್ಷ್ಮ ವಿಚಾರ ಆಗಿರುವುದರಿಂದ ಏಕಾಏಕಿ ಪೀಠಿಕೆ ಇಲ್ಲದೇ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಮಾನ್ಯ ಸದಸ್ಯರಣೆಯಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ತಾವು ಏನು ಹೇಳಿದರು ಅದಕ್ಕೆ ಸರಿಯಾದ ಕಾರಣ ಹೇಳಿದ್ದಾರೆ. ಕಾನೂನಿನ ಬಗ್ಗೆ ಮಹಿಳೆಗೆ ಏನೇನು ಬೇಕು. ಸಮಕಾಲೀನ ಮಹಿಳೆ ಎದುರಿಸುತ್ತಿರುವ ಸಮಸ್ಯೆ ಮತ್ತು ಅವಳ ಮೇಲೆ ಆಗಿರತಕ್ಕ ತೊಂದರೆಗಳು, ಅನ್ಯಾಯ, ಅತ್ಯಾಚಾರಗಳು, ಪರಿಹಾರಗಳು ಅವುಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಹೇಳಿ ಬಿಟ್ಟಿದ್ದಾರೆ. ಆದರೆ, ನಾವುಗಳೆಲ್ಲರೂ ಮತ್ತೆ ಅದನ್ನೇ ಚರ್ವಿತ ಚರ್ವಣ ಮಾಡುವುದಕ್ಕಾಗುವುದಿಲ್ಲ-ವೆನ್ನುವುದಕ್ಕೆ ಬೇರೆ ಬೇರೆ ದಿಕ್ಕುಗಳಲ್ಲಿ ಹೇಳುತ್ತಿದ್ದೇವಷ್ಟೆ. ಮಹಿಳೆಯರಿಗೆ ಅನ್ಯಾಯ-ವಾಗಿರುವುದರಿಂದ ಅವರಿಗೆ ನ್ಯಾಯ ಸಿಗುವ ದಿಸೆಯಲ್ಲಿ ಮಹಿಳಾ ಕಮೀಷನ್ ಆಗಬೇಕೆಂದು ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಬಹುದು. ಈಗಾಗಲೇ ಪೊಲೀಸ್ ಇಲಾಖೆ ಹೆಣ್ಣುಮಕ್ಕಳ ರಕ್ಷಣೆಗೋಸ್ಕರ ಏನೇನು ಮಾಡಬಹುದೋ ಅದೆಲ್ಲವನ್ನೂ ಮಾಡಿದೆ, ಅದೇ ರೀತಿ ಸರ್ಕಾರಗಳೂ ಸಹ ಕ್ರಮ ಕೈಗೊಂಡಿವೆ. ಆದರೂ ಹೀಗಾಗುತ್ತಿದೆಯೆಲ್ಲಾ, ಏಕೆ? ಎಂಬುದಕ್ಕೆ ನಾವು ಕಾರಣ ಹುಡುಕಬೇಕಾದರೆ ಮತ್ತೆ ಹಿಂದಕ್ಕೆ ಹೋಗಬೇಕಾಗುತ್ತದೆ.

ಛೇರ್ಮನ್ :— ನಾನು ತಮ್ಮ ಭಾಷಣವನ್ನು ನನ್ನ ಜಾಗದಲ್ಲಿ ಹಾಗೂ ಈ ಅಧ್ಯಕ್ಷಪೀಠದಲ್ಲಿ ಕುಳಿತುಕೊಂಡು ಶಾಂತ ರೀತಿಯಿಂದ ಕೇಳಿದ್ದೇನೆ. ತಮ್ಮ ಮಾತುಗಳನ್ನು ಆಲಿಸಿದ ನಂತರ ತಾವು ಸಾಮಾಜಿಕ ರೀತಿಯಲ್ಲಿ ಮಾತನಾಡಿದ್ದೀರಿ. ಈಗ ತಮಗೆ ನಾನು ಹೇಳುತ್ತಿರುವುದೇನೆಂದರೆ, ಪೀಠಿಕೆ ದೊಡ್ಡದಾಗುವುದು ಬೇಡ, ಪ್ರಕೃತವಾಗಿರತಕ್ಕಂಥ ವಿಷಯವೇನಿದೆ, ಅದರ ಮೇಲೆ ಹೆಚ್ಚಿನ ಬೆಳಕು ಚೆಲ್ಲುವಂತಾದ್ದು ಏನಾದರೂ ಇದ್ದು ಹೇಳಿದರೆ ಅನುಕೂಲವಾಗುತ್ತದೆಂಬ ಮಾತನ್ನು ಹೇಳುತ್ತಿದ್ದೇನೆ. ನಾನು ತಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿಲ್ಲ, ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಛೇರ್ಮನ್‌ರವರೆ, ಅಧ್ಯಕ್ಷ ಪೀಠದಲ್ಲಿ ಕುಳಿತಿರುವ ತಾವು ಒಬ್ಬ ಡಾಕ್ಟರ್ ಆಗಿದ್ದೀರಿ. ಡಾಕ್ಟರ್ ಹತ್ತಿರ ರೋಗಿ ಬಂದರೆ first duty of the doctor is to diagnise the disease and then only he can give treatment. ಟ್ರೀಟ್‌ಮೆಂಟ್ ಮಾಡುವಲ್ಲಿ ವೈದ್ಯರ ಟ್ರಯಲ್ ಅಂಡ್ ಎರರ್ ಮೆಥಡ್ ಒಂದಿದೆ, ಯಾವುದೇ ಒಂದು ಸಮಸ್ಯೆಯನ್ನು ನಾವು ತಿಳಿದುಕೊಳ್ಳಬೇಕಾದರೆ ಕನಿಷ್ಠ ಅದರ ಸ್ವರೂಪವನ್ನಾದರೂ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈಗ ವರದಕ್ಷಿಣೆ ಪದ್ಧತಿ ಬಗ್ಗೆ ಉಂಟಾಗುವ ದೌರ್ಜನ್ಯ ಮುಂತಾದ ಸಮಸ್ಯೆಗಳಿಗೆ ಮೂಲ ಕಾರಣವೇನು? ಡೌರಿ ಆಕ್ಟ್‌ನ ಸೆಕ್ಷನ್‌ಗೆ ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿ ಎಷ್ಟು ವರ್ಷವಾಯಿತು, ಆದರೂ ಯಾವುದೇ ಅಮೆಂಡ್‌ಮೆಂಟ್ ಆಗಲಿಲ್ಲ.

ಛೇರ್ಮನ್ :— ತಾವು ತಮ್ಮ ಮಾತನ್ನು ಎಲ್ಲಿಗೆ ನಿಲ್ಲಿಸಿದ್ದಿರೋ ಅಲ್ಲಿಂದ ಮುಂದುವರೆಸಿ.

ಶ್ರೀ ಜಿವಿ. ಶ್ರೀರಾಮರೆಡ್ಡಿ :— ಇತಿಹಾಸಪೂರ್ವ ಸಮಾಜದಲ್ಲಿ ಮನುಷ್ಯನ ಖಾಸಗಿ ಆಸ್ತಿ ಎನ್ನುವ ಪ್ರಶ್ನೆ ಎಲ್ಲಿಂದ ಪ್ರಾರಂಭವಾಯಿತೋ ಅವೊತ್ತಿನಿಂದಲೇ ಮಹಿಳೆಗಿದ್ದಂಥ ಸಂಪೂರ್ಣ ಸಮಾನತೆ ಹೋಯಿತು. ಅದಕ್ಕೆ ಇತಿಹಾಸವೇ ದಾಖಲೆಯಾಗಿದೆ.

Socio-cultural structure of all well religious institutions, rituals that develop the consensus with the private property over a period have played a key role in ensuring further ground on social alienation of woman that begun with origin of private properties and the constituition while on the one hand these structures work as effective powers of roots in inequality.

ಇದು ಮೂಲಭೂತವಾಗಿರುವ ಸಮಸ್ಯೆ. ಅದು ಆಗಿದ್ದು ಏಕೆ? ಮನುಷ್ಯನ ಇತಿಹಾಸಪೂರ್ವ ಸಮಾಜದಲ್ಲಿ ವ್ಯವಸಾಯ ಎನ್ನುವುದು ಪ್ರಾರಂಭವಾಗದೇ ಇದ್ದಂಥ ಒಂದು ಸಾಮಾಜಿಕ ಕಾಲಘಟ್ಟದಲ್ಲಿ, ಪಕ್ಷಿಯಂತೆ ಮಾನವ ಸ್ವೇಚ್ಛೆಯಾಗಿದ್ದ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವವಾಗಿರಲಿಲ್ಲ. ಯಾವೊತ್ತಿನಿಂದ ನಾಗರಿಕತೆ ಬೆಳೆದು ಮನುಷ್ಯ ಪ್ರಕೃತಿಯನ್ನವಲಂಬಿಸದೆ ಪ್ರಕೃತಿಯೇತರ ರೀತಿಯಲ್ಲಿ ಅಂದರೆ ವ್ಯವಸಾಯ ಮಾಡಿಕೊಂಡು ಜೀವನ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾದ ಸಂದರ್ಭದಲ್ಲಿ ಸಮಸ್ಯೆ ಪ್ರಾರಂಭವಾಯಿತು. ಪ್ರೈವೇಟ್ ಪ್ರಾಪರ್ಟಿ ಕಾನ್‌ಸೆಪ್ಟ್ ಡೆವಲಪ್ ಆದಾಗ ಕೃಷಿ ಪ್ರಧಾನ ಸಮಾಜದಲ್ಲಿ ಪುರುಷ ಪ್ರಧಾನವೆನ್ನುವ ಅಂಶವೂ ಬಂದಿತ್ತು. ಕೃಷಿ ಪ್ರಧಾನ ಸಮಾಜವೆಂದು ಇವೊತ್ತು ನಾವೆಲ್ಲರೂ ಮಾತನಾಡುತ್ತೇವೆ. ಹೀಗೆ ಇದರ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಇಡೀ ಮಹಿಳಾ ಸಮಾಜವನ್ನು ಆ ಒಂದು ಸಾಮಾಜಿಕ ವ್ಯವಸ್ಥೆ ಖಾಸಗಿ ಆಸ್ತಿಯ ರೀತಿಯಲ್ಲಿ ತನ್ನ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಮಾಜಿಕ ಸಮ್ಮತಿ ಅಂದರೆ ಸೋಷಿಯಲ್ ಅಕ್ಸೆಪ್ಟೆನ್ಸ್

ಬೇಕಾಗಿತ್ತು. ಸಾಮಾಜಿಕ ಸಮ್ಮತಿಯನ್ನು ಪಡೆಯತಕ್ಕಂಥ ವ್ಯವಸ್ಥೆಯಲ್ಲಿ ಶಾಸ್ತ್ರ ಪುರಾಣಗಳೆಲ್ಲವೂ ಸುಸ್ಥಿಯಾಗಿದ್ದವು. ಅಂದರೆ ಪ್ರಾರಂಭದಲ್ಲಿ ಆಸ್ತಿಯ ಹಕ್ಕು, ಖಾಸಗಿ ಹಕ್ಕು ಎಂದು ಆರಂಭಗೊಂಡು ಮಹಿಳೆಗಿದ್ದ ಸಂಪೂರ್ಣ ಸ್ವಾತಂತ್ರ್ಯ ಹೊರಟುಹೋಯಿತು. ಅವಳ ಸ್ವಾತಂತ್ರ್ಯಹರಣವಾದ ನಂತರ ಸಾಮಾಜಿಕ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ಅದಕ್ಕೆ ಸೋಷಿಯಲ್ ರೆಗ್ಯುಲೇಷನ್ ಬೇಕಾಯಿತು. ಆ ಸೋಷಿಯಲ್ ರೆಗ್ಯುಲೇಷನ್ ಎಲ್ಲಿತ್ತು? ಅದನ್ನು ಮಾಡಿದ್ದು ಯಾರು? ಮಾನ್ಯ ಛೇರ್ಮನ್‌ರವರೆ, ತಮಗೆ ಗೊತ್ತಿರುವಂತೆ ಸುಮಾರು ಐದು ನೂರು ವರ್ಷಗಳ ಹಿಂದೆ ಮನುಸ್ಮೃತಿ ಜಾರಿಯಲ್ಲಿತ್ತು. ಮನುಸ್ಮೃತಿ ಎಂದರೇನು? It is a document to regularise the society. ಆ ಡಾಕ್ಯುಮೆಂಟ್‌ನಲ್ಲಿ ಮಹಿಳೆ ಎಂದರೇನು? ಪುರುಷ ಎಂದರೇನು? ಸಮಾಜದಲ್ಲಿ ಯಾರ್ಯಾರು ಹೇಗಿರಬೇಕೆಂಬ ಬಗ್ಗೆ ರೆಗ್ಯುಲೈಸ್ ಮಾಡಿದರು. 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದದ್ದು ಯಾರು? ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದದ್ದು ಮನು. ಆರ್ಥಿಕ ಸಂಬಂಧಗಳ ಏರು-ಪೇರುಗಳು ಮತ್ತು ಅಸಮಾನತೆಯನ್ನು ಸಾಮಾಜೀಕರಣಗೊಳಿಸಿ ಸಮಾಜವನ್ನು ನಿರ್ದೇಶಿಸುವುದಕ್ಕೆ ಹುಟ್ಟಿದಂಥ ಆ ಶಾಸ್ತ್ರಗಳು ಇವೊತ್ತಿನ ದಿವಸ ಮಹಿಳೆಯನ್ನು ಒಂದು ಪ್ರಾಣಿ ಎನ್ನುವ ರೀತಿಯಲ್ಲೂ ನೋಡುವುದಕ್ಕೂ ತಯಾರಿಲ್ಲ. ಸ್ತ್ರೀ ಪಾಪಯೋನಿಯಲ್ಲಿ ಹುಟ್ಟಿದವಳಾದ್ದರಿಂದ ಅವಳು ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಮನು ಹೇಳಿದ್ದಾನೆ.

ಶ್ರೀ ಕುಂಬಳೆ ಸುಂದರರಾವ್ :— ಆ ಶ್ಲೋಕ ಅಪಾರ್ಥದಲ್ಲಿ ಪ್ರಯೋಗವಾಗುತ್ತದೆಂದು ನನಗನ್ನಿಸುತ್ತದೆ. ಯಾವ ಮನುಸ್ಮೃತಿಯನ್ನು ನೀವು ಹೇಳುತ್ತಿದ್ದೀರೋ ಅಲ್ಲಿ ಸ್ತ್ರೀಗೆ ಅನ್ಯಾಯವಾಗಲಿಲ್ಲ. 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರದೇವತಾ' ಇದು ಮನುಸ್ಮೃತಿಯ ಮಾತು. ಅಂದರೆ, ಎಲ್ಲಿ ನಾರಿ ಗೌರವಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನಲಿದಾಡುತ್ತಾರೆ ಎಂಬ ಅರ್ಥವಿರುವಾಗ 'ಪಿತಾ ರಕ್ಷಿತಃ ಕೌಮಾರೇ ಭರತಾ ರಕ್ಷಿತಃ,' ಈ ಮಾತಿನಲ್ಲಿ 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬುದೂ ಬಂದಿದೆ. ಒಂದು ಶ್ಲೋಕಕ್ಕೆ ನಾಲ್ಕು ಪಾದಗಳಿದ್ದರೆ ಮೂರು ಪಾದಗಳನ್ನು ಬಿಟ್ಟು ಒಂದು ಪಾದವನ್ನು ಹಿಡಿದು ಮಾತನಾಡಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮನುಸ್ಮೃತಿಯಲ್ಲಿ ಹೇಳಿರುವುದರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಇಷ್ಟವಾಗುತ್ತದೆ. ಯಾರಿಗೆ ಯಾವುದು ಅನುಕೂಲವಾಗುತ್ತದೋ ಅದನ್ನು ಅವರು ಉಪಯೋಗಿಸಿಕೊಳ್ಳುತ್ತಾರೆ. ಇದು ಇತಿಹಾಸದಲ್ಲಿರುವ ಸತ್ಯ. ಇದನ್ನೆಲ್ಲಾ ಯಾರು ಹೇಳಿದ್ದಾರೋ, ಆ ಆಶ್ರಯದಲ್ಲಿಯೇ ಮಹಿಳೆ ಇವೊತ್ತು ಸಂಪೂರ್ಣ ತುಳಿತಕ್ಕೊಳಗಾಗಿದ್ದಾಳೆ, ದಮನಕ್ಕೊಳಗಾಗಿದ್ದಾಳೆ. ಈ ರೀತಿ ಹೇಳಿದ ಜನರೇ ಮಹಿಳೆ ಹೀಗಿರಬೇಕೆಂದು ಹೇಗೆ ನಿರ್ದೇಶನ ಮಾಡಿದರೆಂದರೆ...

ಛೇರ್ಮನ್ :— ಮಹಿಳೆಯರ ಮೇಲಿನ ದೌರ್ಜನ್ಯ ಬರೀ ಭಾರತದಲ್ಲಿ ಮಾತ್ರವಲ್ಲ, ಪಾಶ್ಚಾತ್ಯ ದೇಶಗಳಲ್ಲೂ ಕೂಡ ಇವೊತ್ತು ನಡೆಯುತ್ತಿದೆ. ಅದರ ಬಗ್ಗೆ ಪ್ರಮೀಳಾ ನೇಸರ್ಗಿಯವರು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಛೇರ್ಮನ್‌ರವರೆ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದರಿಂದ ಮಧ್ಯೆ ತಾವು ಮಾತನಾಡುವುದನ್ನು ಬಿಟ್ಟುಬಿಡಿ.

ಛೇರ್ಮನ್ :— ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮತ್ತೇಕೆ ತಾವು ಮಧ್ಯೆ ಪ್ರವೇಶಿಸುವಂಥಾದ್ದು?

ಛೇರ್ಮನ್ :— ಯಾರು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನಗೆ ಅವಕಾಶ ಕೊಟ್ಟಿರುವುದರಿಂದ ನಾನು ಮಾತನಾಡುತ್ತಿದ್ದೇನಷ್ಟೆ. ಛೇರ್ಮನ್‌ರವರು ಮಧ್ಯೆ ಪ್ರವೇಶಿಸಬೇಕೆಂದು ನಾನು ಕೇಳುತ್ತಿಲ್ಲ. ಆ ರೀತಿ ಹೇಳಿದಂಥ ಜನರಾದ ನೀವು ಅದನ್ನು ಯಾವ ರೀತಿ ಬೆಳೆಸಿಕೊಂಡು ಬಂದಿದ್ದೀರೆಂದರೆ ಸ್ತ್ರೀ ಹೇಗಿರಬೇಕೆಂದು ಮನು ಹೇಗೆ ಹೇಳುತ್ತಾನೆಂದರೆ...

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ಬಸವರಾಜ್‌ರವರು ಮಾತನಾಡಲು ಎದ್ದು ನಿಂತರು)

ಛೇರ್ಮನ್ :— ಅವರು ಮಾತನಾಡುವಾಗ ಮಧ್ಯೆ ಯಾರೂ ಮಾತನಾಡಬಾರದೆಂದು ಹೇಳಿರುವುದರಿಂದ ತಾವು ಕುಳಿತುಕೊಳ್ಳಬೇಕು.

SRI G.V. SRI RAMA REDDY :— Our Shasthras and Puranas had laid emphasis on Dharma, Artha, Kama and Moksha. ಇದು ಯಾರಿಗೆ ಅನ್ವಯಿಸುತ್ತದೆಂದರೆ, ಪತಿವ್ರತಾ ಧರ್ಮ ಹೇಗಿರಬೇಕು, ಮಹಿಳೆಯಾದವಳು ಹೇಗಿರಬೇಕೆಂದರೆ 'ಕ್ಷಮಯಾ ಧರಿತ್ರಿ, ಪೂಜ್ಯೇಶು ಮಾತಾ, ಶಯನೇಶು ವೇಶ್ಯಾ ರೂಪೇಶು ಲಕ್ಷ್ಮೀ' ಇದನ್ನು ನೀವು ಹೇಳಿದ್ದು. ಇಷ್ಟಿದ್ದರೆ ಮಾತ್ರ ಮಹಿಳೆ ಯಾವ ರೀತಿ ನಡೆದುಕೊಳ್ಳಬೇಕೆಂದು ನಿರ್ದೇಶಿಸುವಂಥಾದ್ದು. ಅಲ್ಲದೆ, ಮಹಿಳೆ ಹೇಗಿರಬೇಕೆಂಬ ಬಗ್ಗೆ ಇತಿಹಾಸದಲ್ಲೂ ಸಹ ತಿಳಿಸಲಾಗಿದೆ. ಹಾಗಾಗಿ, ಸಾವಿರಾರು ವರ್ಷಗಳಿಂದ ಮಹಿಳೆ ಬಗ್ಗೆ ಇರುವ ದೃಷ್ಟಿ ಮತ್ತು ಸಂಬಂಧಗಳು ಕಾನೂನು ಮುಖಾಂತರ ಬದಲಾವಣೆಯಾಗುವುದಕ್ಕೆ ಸಾಧ್ಯವಿದೆಯೆಂದು ತಕ್ಷಣದಲ್ಲಿ ಯಾರಾದರೂ ಭಾವಿಸಿದರೆ ಅದು ಖಂಡಿತವಾಗಿ ಸಾಧ್ಯವಿಲ್ಲ. ಇಲ್ಲಿನ ವ್ಯವಸ್ಥೆಯಲ್ಲಿಯೇ ಮೂಲ ದೋಷ ಅಡಗಿದೆ. ಕೆಲವು ಮಹಿಳಾ ಸಂಘಟನೆಗಳ ವಾದವೂ ಇದೇ ಆಗಿದೆ. ಅದಕ್ಕೆ ಕೆಲವರು ಫೆಮಿನಿಸ್ಟ್ ಅಪ್ರೋಚ್ ಟು ದಿ ಪ್ರಾಬ್ಲಂ ಎಂದು ಹೇಳುವುದು, ಮಹಿಳಾ ಸಮಸ್ಯೆಯನ್ನು ಸ್ತ್ರೀವಾದಿ ದೃಷ್ಟಿಯಿಂದ ನೋಡುವುದು. ಇವೆಲ್ಲವೂ ಒಟ್ಟಾರೆ ವೈಜ್ಞಾನಿಕ ರೀತಿಯಿಂದ ಕೂಡಿದೆ. ಆದರೆ, ಅವರ ದೃಷ್ಟಿಯಲ್ಲಿ ಈ ಎಲ್ಲಾ ಅನಿಷ್ಟಗಳಿಗೂ ಕಾರಣ ಪುರುಷರು ಎಂಬುದು. ಇದೂ ಕೂಡ ವೈಜ್ಞಾನಿಕ ದೃಷ್ಟಿಯಿಂದ ಕೂಡಿದುದ್ದಲ್ಲ. ಮಹಿಳೆ ಇವೊತ್ತು ಶೋಷಿತಳಾಗಿದ್ದು, ಕೇವಲ ಒಂದು ವಿಧಾನದಲ್ಲಿ

ಮಾತ್ರ ಶೋಷಿತಳಾಗಿರದೆ ಎಲ್ಲಾ ಅಂಶಗಳಲ್ಲೂ ಕೂಡ ಶೋಷಿತಳಾಗಿದ್ದಾಳೆ. ಆದರೆ, ಪುರುಷ ಒಂದರಲ್ಲಿ ಮಾತ್ರ ಶೋಷಿತ. ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಆತನ ಶೋಷಣೆಯಾಗುತ್ತದೆ. ಸ್ತ್ರೀ ಶೋಷಣೆ ಮಾತ್ರ ಎಲ್ಲಾ ಅಂಶಗಳಲ್ಲೂ ಇದೆ.

1.20 ಪಿ.ಎಂ.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರತಿಯೊಂದು ಅಂಶದಲ್ಲೂ ಕೂಡ ಶೋಷಣೆಗೆ ಒಳಗಾದಂತಹ ಈ ಜಗತ್ತಿನಲ್ಲಿ ಅತ್ಯಂತ ದಮನಕ್ಕೆ ಒಳಗಾದಂತಹ ಯಾವುದಾದರೂ ಒಂದು ಮನುಷ್ಯ ಪ್ರಾಣಿ ಇದ್ದರೆ ಅದು ಎಲ್ಲಾ ವಿಧದಲ್ಲೂ ಮಹಿಳೆ ಮಾತ್ರ. ಈ ವ್ಯವಸ್ಥೆ ನಿರ್ಮಾಣ ಮಾಡುವುದಕ್ಕೆ ಸಾವಿರಾರು ವರ್ಷಗಳಿಂದ ವ್ಯವಸ್ಥೆ ನಿರ್ಮಾಣ ಮಾಡಿಕೊಂಡು ಬಂದಿರತಕ್ಕಂತಹ ಒಂದು ವ್ಯವಸ್ಥೆ. ಹಾಗಾಗಿ ಆ ವ್ಯವಸ್ಥೆಯಲ್ಲಿರತಕ್ಕಂತಹ ಮೂಲದೋಷವನ್ನು ಹುಡುಕಿ ಅದಕ್ಕೆ ಪರಿಹಾರ ಕಾಣದೆ ನಾವು ಬೇರೆ ಯಾವುದೇ ಕಾರಣದಿಂದ ಯಾವುದೇ ದೃಷ್ಟಿಯಿಂದ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯತೆ ಇಲ್ಲ. ವರದಕ್ಷಿಣೆ ಎಂದು ಮಾತನಾಡುತ್ತಿದ್ದೇವೆ, ವರದಕ್ಷಿಣೆ ಎನ್ನತಕ್ಕಂತಹ ಈ ಪ್ರಶ್ನೆ ಎಲ್ಲಿಂದ ಬಂತು? ಇದು ಗುಲಾಮಗಿರಿ ಸಮಾಜದ ಅವಶೇಷ. ಇದು ಆ ಗುಲಾಮಗಿರಿ ವ್ಯವಸ್ಥೆಯಲ್ಲಿ ಮನುಷ್ಯ ಮನುಷ್ಯನನ್ನು ಮಾರಾಟ ಮಾಡುವಂತಹ ಒಂದು ವ್ಯವಸ್ಥೆ ಇತ್ತು. ಆ ಗುಲಾಮಗಿರಿ ಅವಶೇಷವೇ ಈ ವರದಕ್ಷಿಣೆಯ ಪ್ರಶ್ನೆ. ನಮ್ಮ ಸಮಾಜ ಏನಾಗಿದೆ, ವರದಕ್ಷಿಣೆ ಪ್ರಶ್ನೆ ಭಾರತ ದೇಶದಲ್ಲಿ ಅತಿ ಹೆಚ್ಚಿನ ರೀತಿಯಲ್ಲಿ ಇರತಕ್ಕಂಥದ್ದು. ಏಕೆ ಇಲ್ಲಿ ಹೆಚ್ಚಿಗೆ ಇದೆ, ಬೇರೆ ದೇಶದಲ್ಲಿ ಏಕೆ ವರದಕ್ಷಿಣೆ ಪ್ರಶ್ನೆ ಇಲ್ಲ, ವರದಕ್ಷಿಣೆ ಸಾವುಗಳು ಇಲ್ಲ, ಎಂದರೆ ವ್ಯತ್ಯಾಸ ಇಷ್ಟೆ. ನಮ್ಮ ದೇಶದಲ್ಲಿ ಹಳೆಯ ಸಾಮಾಜಿಕ ಪಳೆಯುಳಿಕೆಗಳು ಇನ್ನೂ ಮುಂದುವರೆಯುತ್ತಿವೆ. ಗುಲಾಮಗಿರಿ ವ್ಯವಸ್ಥೆ ಏನಾಗಿದೆ, ಅದರ ಲಕ್ಷಣ ಇದು. ಹಾಗಾಗಿ ಇವತ್ತು ಕಾನೂನು ಮಾಡುತ್ತೇವೆ, ಆ್ಯಂಟಿ ಡೌರಿ ಕಾನೂನು ಮಾಡಿದೆವು, ಆ ಕಾನೂನಿನಿಂದ ಭಾರತ ದೇಶದಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗುವುದಕ್ಕೆ ಸಾಧ್ಯವಾಗಿದೆ, ಸಾಧ್ಯವಾಗಿಲ್ಲ. ಏಕೆಂದರೆ, ಡೌರಿ ಕೊಡತಕ್ಕಂತಹವರೂ ಹೇಳುವುದಿಲ್ಲ, ತೆಗೆದುಕೊಳ್ಳುವವರೂ ಹೇಳುವುದಿಲ್ಲ. ಇದನ್ನು ಏನೆಂದು ಕರೆಯುತ್ತೀರಿ, ಯಾವ ಕಾನೂನಿನ ಅಡಿಯಲ್ಲಿ ನೀವು ಇದನ್ನು ನಿಶೇಧ ಮಾಡುತ್ತೀರಿ ಹೇಳಿ. ಡೌರಿ ಕೊಟ್ಟವನೂ ಹೇಳುವುದಿಲ್ಲ, ಡೌರಿ ತೆಗೆದುಕೊಂಡವನೂ ಹೇಳುವುದಿಲ್ಲ. ಪೋಲಿಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡುವುದಕ್ಕೆ ಯಾರಾದರೂ ತಯಾರಿದ್ದಾರಾ? ಯಾರೂ ತಯಾರಿಲ್ಲ. ನಾವು ಯಾರು ಇದನ್ನು ವಿರೋಧ ಮಾಡುತ್ತೇವೆಂದು ಹೇಳುತ್ತೇವೆ, ಒಂದಲ್ಲ ಒಂದು ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವರದಕ್ಷಿಣೆ ವ್ಯವಸ್ಥೆಗೆ ಬಲಿಯಾಗಿರತಕ್ಕಂತಹ ಬಲಿಪಶುಗಳು ನಾವು. ಇದನ್ನು ನಾವು ಸಾರಾಸಗಟಾಗಿ ಯಾವುದೋ ಒಂದು ಲಕ್ಷಣ ಇದು ವಿಲಕ್ಷಣ ಅಲ್ಲ. ಇದು ಸಮಾಜದ ಲಕ್ಷಣ ಅದನ್ನು ಬದಲು ಮಾಡಬೇಕಾದರೆ ಮೂಲತಃ ಆ ವ್ಯವಸ್ಥೆಯನ್ನು ಬದಲು ಮಾಡದೆ ಸಾಧ್ಯವಿಲ್ಲ. ಈ ರೀತಿ ಹಲವಾರು

ಸಾರಿ ನೀವು ನಾವು ಅಷ್ಟೇ ಚರ್ಚೆ ಮಾಡುವುದಲ್ಲ. ಸುಮಾರು ನೇತಾರರು ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಗಾಂಧಿ ಏನು ಹೇಳಿದರು, ಗಾಂಧಿ ಮತ್ತು ಲೆನಿನ್ ಇಬ್ಬರೂ ಹೇಳಿರತಕ್ಕಂತಹ ವಿಷಯವನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಗಾಂಧಿ ಏನು ಹೇಳಿದರು ಅದು ಎಲ್ಲರಿಗೂ ಗೊತ್ತು. ಮಹಿಳೆಯೊಬ್ಬಳು ಮಧ್ಯ ರಾತಿಯಲ್ಲಿ ಒಂಟಿಯಾಗಿ ನಿರ್ಭಯವಾಗಿ ಓಡಾಡುವ ಪರಿಸ್ಥಿತಿ ಬಂದಾಗಲೇ ನಿಜವಾದ ಸ್ವಾತಂತ್ರ್ಯ ಎಂದು ಹೇಳಿದರು. ಏನು ಆದರ ಅರ್ಥ? ರಾತ್ರಿ ಮಹಿಳೆಯರು ಎಲ್ಲಾದರೂ ಓಡಾಡಿ ಎಂದು ಅರ್ಥವಲ್ಲ. ಅಂತಹ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾದಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಬಂದಿದೆ ಎಂದು ಹೇಳುವುದಕ್ಕೆ ಸಾಧ್ಯ. ಸ್ವಾತಂತ್ರ್ಯ ಎಂದರೆ ಏನು ಫ್ರೀಡಂ ಫಾರ್ ಆಲ್. ಎನ್ನತಕ್ಕಂತಹ ಪ್ರಶ್ನೆ ಅಲ್ಲ. ನಿಜವಾದ ಸ್ವಾತಂತ್ರ್ಯ ಬರುವುದು ಎಂದರೆ ಮಹಿಳೆ ಸ್ವತಂತ್ರ್ಯವಾಗಿ ನಿರ್ಭಯವಾಗಿ ಇರತಕ್ಕಂತಹ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗಬೇಕು. ಅಲ್ಲಿಯವರೆಗೆ ಅದಕ್ಕೆ ನಿಜವಾದ ಅರ್ಥವಿಲ್ಲ. ಇನ್ನೊಂದು ಹೊಸ ಸಮಾಜವಾದವನ್ನು ಹುಟ್ಟು ಹಾಕಿದ ಲೆನಿನ್ ಏನು ಹೇಳುತ್ತಾರೆಂದರೆ, ಸಂಪೂರ್ಣ ಸ್ವೇಚ್ಛೆಯನ್ನು ಮಹಿಳೆ ಪಡೆದಾಗ ಮಾತ್ರ ನಿಜವಾದ ಸಮಾಜವಾದ ಬರುವುದು ಎಂದು ಲೆನಿನ್ ಹೇಳುತ್ತಾರೆ. ಆದರ ಅರ್ಥವೇನು? ಸಮಾಜವಾದವನ್ನು ತರಬಹುದು, ಆದರೆ ನಿಜವಾದ ಸಮಾಜವಾದ ಬರತಕ್ಕಂಥದ್ದು ಯಾವಾಗ ಎಂದರೆ, ಮಹಿಳೆ ಒಬ್ಬಳಿಗೆ ಸಂಪೂರ್ಣ ಸ್ವೇಚ್ಛೆ ಸಿಕ್ಕಿದಾಗ. ಸ್ವೇಚ್ಛೆ ಎಂದರೆ ಏನು, ಸ್ವೇಚ್ಛೆ ಎಂದರೆ ಆರ್ಥಿಕವಾಗಿ ಸಾಮಾಜಿಕವಾಗಿ ತನ್ನ ಕಾಲ ಮೇಲೆ ತಾನು ನಿಂತುಕೊಂಡು ಸ್ವತಂತ್ರ್ಯವಾಗಿ ಆಲೋಚನೆ ಮಾಡತಕ್ಕಂತಹ ಶಕ್ತಿ ಮತ್ತು ಪರಿಸರ ನಿರ್ಮಾಣವಾಗುವುದು ಎಂದು ಆದರ ಅರ್ಥ. ಅಂತಹ ಪರಿಸ್ಥಿತಿ ನಿರ್ಮಾಣ ಮಾಡಲಿಲ್ಲ ಹಾಗಾಗಿ ನಿಮ್ಮ ಸಮಾನತೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಮಹಿಳಾ ಸಮಾನತೆ ಎನ್ನುವುದು ಕಾನೂನಿನಿಂದ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಇದು ಒಂದು ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆ. ಮೂಲತಃ ಈ ಎಲ್ಲಾ ಸಮಸ್ಯೆಗಳು ಬಂದಿರತಕ್ಕಂಥದ್ದು ನಮ್ಮ ಸಮಾಜದಲ್ಲಿ ಆಗಬಹುದು, ಜಗತ್ತಿನ ಬೇರೆ ಯಾವುದೇ ಸಮಾಜದಲ್ಲಿ ಆಗಬಹುದು. ಮಹಿಳೆಯಲ್ಲಿ ಪರತಂತ್ರವಾಗಿ ಇಟ್ಟಿರತಕ್ಕಂಥದ್ದಕ್ಕೆ ಇದೆಲ್ಲಕ್ಕೆ ಮೂಲಭೂತವಾದ ಕಾರಣ ಪರಾವಲಂಬಿ. ಯಾರ ಮೇಲೆಯೋ ಅವಲಂಬಿತವಾಗಿ ಜೀವನ ಆಗಬೇಕು, ಹುಟ್ಟಿದಾಗ ತಂದೆತಾಯಿಗಳ ಆಶ್ರಯದಲ್ಲಿ ಬದುಕಬೇಕು. ದೊಡ್ಡವರಾದರೆ ಗಂಡನ ಆಶ್ರಯದಲ್ಲಿ ಬದುಕಬೇಕು. ವಯಸ್ಸಾದರೆ ಮಕ್ಕಳ ಆಶ್ರಯದಲ್ಲಿ ಬದುಕಬೇಕು. ಮಹಿಳೆಯ ಜೀವನದ ಉದ್ದಕ್ಕೂ ಎಂದೂ ಕೂಡ ಸ್ವತಂತ್ರವಾಗಿ ಆಲೋಚನೆ ಮಾಡತಕ್ಕಂತಹ ಜೀವನ ಮಾಡತಕ್ಕಂತಹ ಪರಿಸ್ಥಿತಿ ಈ ಸಮಾಜದಲ್ಲಿ ನಿರ್ಮಾಣವಾಗಲಿಲ್ಲ. ಹಾಗಾಗಿ ಅಂತಹ ಒಂದು ಸಮಾಜವನ್ನು ನಮ್ಮ ನಮ್ಮ ಮುಂದೆ ಇಟ್ಟುಕೊಂಡು ನಾವು ಈ ಸಮಾಜದಲ್ಲಿ ಇದ್ದು ನಾವು ಕಾನೂನು ಮುಖಾಂತರ ಈ ಸಮಸ್ಯೆ ಪರಿಹಾರ ಮಾಡುತ್ತೇವೆ ಎಂದು ಯಾರು ಭಾವಿಸಿದರೂ ಅದು ಖಂಡಿತ ಕೂಡ ಸಾಧ್ಯವಿಲ್ಲ. ಕಾನೂನುಗಳು ಏನಾದರೂ ಪರಿಣಾಮಕಾರಿಯಾಗಿದ್ದರೆ ನಾನು ಒಂದು

ವಿಷಯ ಹೇಳುತ್ತಿದ್ದೆ, ಸಿಂಧ್ಯರವರು ಇದ್ದರೆ ಬಹಳ ಚೆನ್ನಾಗಿತ್ತು. ಒಂದು ಸ್ಟ್ಯಾಟಿಸ್ಟಿಕ್ಸ್ ಹೇಳುತ್ತೇನೆ, ಕಾನೂನಿನಿಂದ ಏನಾದರೂ ಪ್ರಯೋಜನ ಆಗಿದೆಯಾ ಎನ್ನತಕ್ಕಂಥದ್ದು ಆಲೋಚನೆ ಮಾಡಬೇಕಾಗುತ್ತದೆ. 1999ನೇ ಇಸವಿಯಲ್ಲಿ ಒಂದು ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ರೇಪ್ ಕೇಸ್ 9,793, ಇದು ಆಲ್ ಇಂಡಿಯಾ ಫಿಗರ್. ಮೊಲೆಸ್ಟೇಷನ್ ಕೇಸಸ್ 20,611 ಕಿಡ್ನ್ಯಾಪಿಂಗ್ 12,300, ಈವ್ ಟೀಸಿಂಗ್ 10,283 ಇದೆ. ಕಂಪ್ಯಾರಿಟೀಸ್ ಫಿಗರ್ಸ್ ಏಕೆ ಹೇಳುತ್ತಿದ್ದೇನೆ ಎಂದರೆ, 1987ರಲ್ಲಿ 7,767 ಇದ್ದಂತಹ ರೇಪ್ ಕೇಸಸ್ 1991 ರಲ್ಲಿ 9,793 ಆಗಿದೆ. ನಿಮ್ಮ ಕಾನೂನು ಏನು ಮಾಡಿದೆ? ಯಾವ ಕಾನೂನು ಅದನ್ನು ರಕ್ಷಣೆ ಮಾಡಿದೆ? ನಿಮ್ಮ ಕಾನೂನುಗಳು ಏನೂ ಇಲ್ಲ. ನಿಮ್ಮ ಕಾನೂನುಗಳು ನಿಷ್ಪ್ರಯೋಜನ ಎನ್ನುವುದಕ್ಕೆ ನಿದರ್ಶನ. ವರದಕ್ಷಿಣೆ ಸಾವು 1997ರಲ್ಲಿ 1,912, 1991ರಲ್ಲಿ 5,157 ನಿಮ್ಮ ಕಾನೂನು ಏನು ಮಾಡಿದೆ? ಆ್ಯಂಟಿ ಡೌರಿ ಆ್ಯಕ್ಟ್ ಏನು ಮಾಡಿದೆ? ಏನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. Rape occurs every 54 minutes in India. Molestation- every 26 minutes; One kidnapping/abduction every 43 minutes; one act of eve-teasing every 51 minutes, one dowry death every one hour 42 minutes, one act of cruelty every 33 minutes. ನಿಮ್ಮ ಕಾನೂನು ಏನು ಮಾಡಿದೆ? ಕಾನೂನು ಎಲ್ಲಾ ಮಾಡಿದ್ದೇವೆಂದು ಈ ಕಾನೂನಿನಿಂದ ಈ ಸಮಸ್ಯೆ ಪರಿಹಾರವಾಗುತ್ತದೆ ಎಂದು ಯಾರೂ ನಿರೀಕ್ಷೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ. ಈ ಕಾನೂನು ಏಕೆ ನಿಷ್ಪ್ರಯೋಜನವಾಗುತ್ತದೆ ಎನ್ನತಕ್ಕಂಥದ್ದು ಕೂಡ ನಾವು ನೋಡಬೇಕಾಗುತ್ತದೆ. ಕಾನೂನು ನಿಷ್ಪ್ರಯೋಜನ ಆಗತಕ್ಕಂಥದ್ದು ಏಕೆಂದರೆ, ಮೂಲತಃ ಇದು ಅಸಮಾನತೆಯನ್ನು ಸಮರ್ಥನೆ ಮಾಡತಕ್ಕಂತಹ ಸಮಾಜ. ಅಸಮಾನತೆ ಮನುಷ್ಯ ಮನುಷ್ಯರ ಮಧ್ಯೆ ಅಷ್ಟೇ ಅಲ್ಲ, ಸ್ತ್ರೀ ಪುರುಷರ ಮಧ್ಯೆ ಅಸಮಾನತೆಯನ್ನು ಪೋಷಿಸಿಕೊಂಡು ಅದನ್ನು ವೈಭವೀಕರಿಸಿಕೊಂಡು ಬಂದಿರತಕ್ಕಂತಹ ಸಮಾಜ. ನಾವು ನೀವು ಇಲ್ಲಿ ಮಾತನಾಡತಕ್ಕಂತಹವರು ಎಲ್ಲರೂ ಸೇರಿ ಆತ್ಮ ಶೋಧನೆ ಮಾಡುವುದಾದರೆ ಸ್ತ್ರೀ ಶೋಷಣೆಯನ್ನು ವೈಭವೀಕರಣ ಮಾಡಿಕೊಂಡು, ಅವರನ್ನು ನೇಣುಗಂಬಕ್ಕೆ ಹಾರಿಸಿದ ಜನ ನಾವು ನೀವು ಎಲ್ಲಾ.

(ಶ್ರೀ ರಮೇಶ್ ಕುಮಾರ್) ರವರು ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಆ ವೈಭವೀಕರಣ ಎಲ್ಲಿಯವರೆಗೆ ಬಂದಿದೆ, ಮಾತೃದೇವೋಭವ ಎಂದು ಹೇಳಿದಂತಹ ಈ ದೇಶದಲ್ಲಿ ಆ ತಾಯಿ ಸ್ಥಾನವನ್ನು ಎಲ್ಲಿಟ್ಟಿದ್ದೀರಿ? ಮಾತೃದೇವೋಭವ ಎಂದು ಹೇಳುವ ಈ ಸಮಾಜ, ಈ ದೇಶ ಇಡೀ ಜಗತ್ತಿನ ಮುಂದೆ ತಲೆ ತಗ್ಗಿಸಬೇಕು. ಗಂಡ ಸತ್ತಂತಹ ಕಾರಣಕ್ಕೋಸ್ಕರ ಹೆಣ್ಣುಮಕ್ಕಳಿಗೆ ಬೆಂಕಿಗೆ ಹಾಕುವಂತಹ ಇತಿಹಾಸ ಈ ದೇಶದಲ್ಲಿ ಇದೆ. ಇದು ಆಗಿದ್ದು ಯೂರೋಪ್‌ನಲ್ಲಿ ಅಲ್ಲ, ಮಾತೃದೇವೋಭವ ಎಂದು ಹೇಳುವ ದೇಶದಲ್ಲಿ. ಮಾತೃವನ್ನು ದೈವ ಸ್ಥಾನಕ್ಕೆ ಹೇಳುವ ಒಂದು ದೇಶದಲ್ಲಿ ಹಾಗಾಗಿ

ನಾವು ಮಾಡತಕ್ಕಂತಹ ಕಾನೂನುಗಳು ಏನು ಇದೆ, ಈ ಕಾನೂನುಗಳು ಏಕೆ ನಿಷ್ಪ್ರಯೋಜನ ಆಗುತ್ತದೆ ಎಂದರೆ, ಈ ಸಮಾಜದಲ್ಲಿರತಕ್ಕಂತಹ ಮೂಲಭೂತವಾದ ಅಸಮಾನತೆಯ ಪ್ರಶ್ನೆ ಎಲ್ಲಿಯವರೆಗೆ ಆಸ್ತಿಯ ಹಕ್ಕು ರದ್ದು ಆಗುವುದಿಲ್ಲ, ಅಲ್ಲಿಯವರೆಗೆ ಈ ಅಸಮಾನತೆ ಹೋಗುವುದಿಲ್ಲ. ಏಕೆಂದರೆ, ಇವತ್ತು ನಮ್ಮ ದೇಶದಲ್ಲಿ ಹೆಂಡತಿಯನ್ನು ನನ್ನ ಖಾಸಗಿ ಆಸ್ತಿ ಎಂದು ನಾವೆಲ್ಲರೂ ತೀರ್ಮಾನ ಮಾಡಿರುವುದು. She is my private property. ನಮ್ಮ ಮನೆಯವರು, ನಮ್ಮ ಹೆಂಡತಿ What is this? ನನ್ನ ಮಗಳನ್ನು ಇಂತಹವರಿಗೆ ಕೊಟ್ಟು ಮದುವೆ ಮಾಡಿದ್ದೇನೆ. Is it a commodity? who made it? ನಾವು ಮಹಿಳೆಯನ್ನು ಖಾಸಗಿ ಆಸ್ತಿಯಾಗಿ ನಿರ್ಧಾರ ಮಾಡಿರತಕ್ಕಂಥದ್ದು ಖಾಸಗಿ ಆಸ್ತಿ ಬರೀ ಪ್ರಾಪರ್ಟಿ ಅಲ್ಲ, ಈ ಖಾಸಗಿ ಆಸ್ತಿ ಎನ್ನತಕ್ಕಂತಹ ಮನೋಭಾವ ಎಲ್ಲಿಯವರೆಗೆ ಯಾವ ಸಮಾಜದಲ್ಲಿರುವುದಿಲ್ಲ...

DR. M.P. KARKI :— Wife cannot be public property.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅಧ್ಯಕ್ಷರೇ, Concept of private property leads to that. ನಾನು ಹೇಳಿದ್ದು ಅವರನ್ನು ಸಾರ್ವಜನಿಕ ಆಸ್ತಿ ಮಾಡುವುದಕ್ಕೆ ಅಲ್ಲ. ಆಲೋಚನೆ ಮಾಡತಕ್ಕಂಥದ್ದು ವಿಕೃತ ಮನೋಭಾವ. concept of private property leads to where? ನನ್ನ ಮಗಳನ್ನು ಅವರ ಮಗನಿಗೆ ಕೊಟ್ಟು ಮದುವೆ ಮಾಡಿದ್ದೇನೆ. ಏನು ಕೊಡುವುದು. Is it a commodity to give? ಒಬ್ಬ ಹೆಣ್ಣು ಮಗಳಿಗೆ ನನ್ನ ಜೀವನ ಯಾರ ಜೊತೆ ಸಾಗಿಸಬೇಕು ಎಂದು ನಿರ್ಧಾರ ಮಾಡತಕ್ಕಂತಹ ಹಕ್ಕನ್ನು ಈ ದೇಶದಲ್ಲಿ ಕೊಟ್ಟಿಲ್ಲ. ಕಾನೂನಿನ ಪ್ರಕಾರ ಇದೆಲ್ಲಾ ಕೊಟ್ಟು ಬಿಡುತ್ತೇವೆ ಎಂದು ಯಾರಾದರೂ ಹೇಳಿದರೆ, ಅದನ್ನು ನಂಬುವುದಕ್ಕೆ ನಾವೇನು ಪ್ರಾಥಮಿಕ ಶಾಲೆಯ ಮಕ್ಕಳೇ? ಮಹಿಳೆಯರ ಮೇಲೆ ನಡೆದಿರುವ ದೌರ್ಜನ್ಯಗಳ ಅಂಕಿಅಂಶಗಳನ್ನು ನಾನು ಈಗ ಕೊಡಬಯಸುತ್ತೇನೆ. ಕರ್ನಾಟಕ ರಾಜ್ಯ ಬಹಳ ಸುರಕ್ಷಿತವಾಗಿದೆ ಎಂದು ಯಾರೋ ವಿಭಾ ಪಾರ್ಥಸಾರಥಿ ಎಂಬುವವರು ಮಾನ್ಯ ಸಿಂಧ್ಯಾರವರಿಗೆ ಸರ್ಟಿಫಿಕೇಟ್ ಕೊಟ್ಟರಂತೆ. ನಾನು ಈ ಅಂಕಿಅಂಶಗಳನ್ನು ಹೇಳುವಾಗ ಮಾನ್ಯ ಸಿಂಧ್ಯಾರವರು ಸದನದಲ್ಲಿ ಇದ್ದರೆ ಚೆನ್ನಾಗಿತ್ತು. ಕರ್ನಾಟಕ ರಾಜ್ಯಕ್ಕೆ ಸೀಮಿತವಾದಂತೆ ಇತ್ತೀಚಿನ ಅಂಕಿಅಂಶಗಳನ್ನು ನಾನು ಹೇಳುತ್ತೇನೆ. 1994ರಲ್ಲಿ ಅತ್ಯಾಚಾರ ಪ್ರಕರಣಗಳು 276 ಇದ್ದರೆ, 1995ರಲ್ಲಿ, 268, 1996ರಲ್ಲಿ 270, 1997ರಲ್ಲಿ 247, 1998ರಲ್ಲಿ 241 ಅತ್ಯಾಚಾರ ಪ್ರಕರಣಗಳು ನಡೆದಿವೆ. ಯಾವ ಮಹಾ ತಾಯಿ ಮಾನ್ಯ ಸಿಂಧ್ಯಾರವರಿಗೆ ಸರ್ಟಿಫಿಕೇಟ್ ಕೊಟ್ಟರೋ ಗೊತ್ತಿಲ್ಲ. ಕಿಡ್ನ್ಯಾಪಿಂಗ್ ಪ್ರಕರಣಗಳು 1994ರಿಂದ 1998ರವರೆಗೆ ಕ್ರಮವಾಗಿ 322 321, 332, 401 ಮತ್ತು 357 ನಡೆದಿವೆ. ಮೊಲೆಸ್ಟೇಷನ್ ಪ್ರಕರಣಗಳು 1994ರಿಂದ 1998ರವರೆಗೆ ಕ್ರಮವಾಗಿ 1115, 1348, 1310, 1405 ಮತ್ತು 1335 ನಡೆದಿವೆ. ಕರ್ನಾಟಕದಲ್ಲಿ ಮಹಿಳೆಯರ ಸ್ಥಿತಿ ಬಹಳ ಚೆನ್ನಾಗಿದೆ, ಏನೂ ತೊಂದರೆಯಾಗಿಲ್ಲವೆಂದು

ಯಾರೋ ಸರ್ಟಿಫಿಕೇಟ್ ಕೊಟ್ಟಿದ್ದಾರಂತೆ. ನಾನು ಈ ಅಂಕಿ ಅಂಶಗಳ ಜೊತೆಗೆ ಜಂಜಾಟ ಮಾಡಲಿಕ್ಕೆ ತಯಾರಿಲ್ಲ. ಸತ್ಯ ಎಲ್ಲರಿಗೂ ಗೊತ್ತಿದೆ. ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಮಹಿಳೆಯರ ವಿರುದ್ಧ ಯಾವ ರೀತಿ ಅಟ್ರಾಸಿಟೀಸ್ ನಡೆಯುತ್ತಿದೆ ಎಂಬ ಸತ್ಯ ಹೊರಗೆ ಬಂದಿದೆ. ಮಹಿಳೆಯರ ಮೇಲೆ ನಡೆಯತಕ್ಕಂಥ ದೌರ್ಜನ್ಯವನ್ನು ನಿಲ್ಲಿಸತಕ್ಕಂಥ ಕಾನೂನು ಪರಿಣಾಮಕಾರಿಯಾಗಿ ಜಾರಿಯಾಗಬೇಕಾದರೆ ಈ ಇಡೀ ವ್ಯವಸ್ಥೆ ಬದಲಾವಣೆ ಆಗಬೇಕು. ಅದಾಗದೇ ಈ ಕಾನೂನು ಪರಿಣಾಮಕಾರಿಯಾಗಲಿಕ್ಕೆ ಸಾಧ್ಯವಿಲ್ಲ. ಯಾವುದೇ ಒಂದು ಕಾನೂನನ್ನು ರಚನೆ ಮಾಡತಕ್ಕ ಸಂದರ್ಭದಲ್ಲಿ ಈಗಿರತಕ್ಕ ಪರಿಸ್ಥಿತಿಗೆ ಹೊಂದಿಕೊಂಡು ಕಾನೂನನ್ನು ರಚನೆ ಮಾಡುತ್ತಾರೆಯೇ ಹೊರತು ವ್ಯವಸ್ಥೆಯನ್ನು ಬದಲಾವಣೆ ಮಾಡತಕ್ಕಂಥ ರೀತಿಯಲ್ಲಿ ಕಾನೂನನ್ನು ರಚಿಸಲು ಯಾರ ಕೈಯ್ಯಲ್ಲೂ ಕೂಡ ಸಾಧ್ಯವೇ ಇಲ್ಲ. ಆ ಕಾನೂನನ್ನು ಮಾಡಿದರೂ ಕೂಡ, ಯಾರೂ ಅದನ್ನು ಜಾರಿಗೊಳಿಸುವುದಿಲ್ಲ. ಆ ರೀತಿಯಾದಂತಹ ಒಂದು ವ್ಯವಸ್ಥೆ ಇವತ್ತು ನಮ್ಮಲ್ಲಿದೆ. ಹೀಗಿರುವಾಗ ಮಹಿಳೆಯರಿಗೆ ಸಮಾನತೆ ನೀಡುವುದು ಸಾಧ್ಯವಿಲ್ಲ. ಯಾವುದೋ ಪುರಾಣಗಳಲ್ಲಿ, ಶಾಸ್ತ್ರಗಳಲ್ಲಿ ಹೇಳಿದ ರೀತಿಯಲ್ಲಿ ಮಹಿಳೆಯರಿಗೆ ಸಮಾನತೆ ಬರಲಿಕ್ಕೆ ಸಾಧ್ಯತೆ ಇಲ್ಲ. ಸಮಾನತೆ ಎನ್ನುವಂತಾದ್ದು ಒಂದು ಸ್ವತಂತ್ರ ಅಸ್ತಿತ್ವ. ಇಂತಹ ಸ್ವತಂತ್ರವಾದಂತಹ ಅಸ್ತಿತ್ವವನ್ನು ವ್ಯಕ್ತಿಯೊಬ್ಬ ಪಡೆಯಬೇಕಾದರೆ, ಮೊಟ್ಟ ಮೊದಲು ಆ ವ್ಯಕ್ತಿಗೆ ಬೇಕಾಗಿರತಕ್ಕಂಥದ್ದು, ನಾನು ಯಾರ ಹಂಗಿಲ್ಲದಿದ್ದರೂ ಕೂಡ ಬದುಕಬಲ್ಲೆ ಎಂಬುದು....

ಶ್ರೀ ಡಿ. ಮಂಜುನಾಥ :— ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು ಏನೋ ಬಹಳ ಚೆನ್ನಾಗಿ ಸ್ವಾರಸ್ಯವಾಗಿ ಮಾತನಾಡುತ್ತಿದ್ದಾರೆ. ಆದರೆ ನಿಯಮ 69ರ ಮೇಲಿನ ಚರ್ಚೆ ಬಹಳ ಜಾಸ್ತಿ ಹೊತ್ತಿನಿಂದ ನಡೆಯುತ್ತಿದೆ.

ಅಧ್ಯಕ್ಷರು :— ಇನ್ನೇನು ಬೇಗ ಮುಗಿಸಿಬಿಡುತ್ತಾರೆ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ಯಾರಹಂಗು ಇಲ್ಲದಿದ್ದರೂ ಕೂಡ ಬದುಕಬಲ್ಲೆ ಎನ್ನುವಂತಹ ಸ್ವಾಭಿಮಾನ ಮತ್ತು ಶಕ್ತಿ ಬರಬೇಕಾದರೆ, ಮೊಟ್ಟಮೊದಲು ಆಗಿರಬೇಕಾಗಿರತಕ್ಕಂಥದ್ದು, ತನ್ನ ಕಾಲ ತಾನು ನಿಂತು ಜೀವನ ಮಾಡತಕ್ಕ ಶಕ್ತಿ ಬರಬೇಕು. ಇಷ್ಟೆಲ್ಲಾ ಮಾತನಾಡುವಂತಹ ನಾವು, ಇವತ್ತಿಗೂ ಭಾರತ ದೇಶದಲ್ಲಿ ಮಹಿಳೆಯರಿಗೆ ಆಸ್ತಿ ಹಕ್ಕಿನಲ್ಲಿ ಭಾಗ ಕೊಡಲಿಕ್ಕೆ ತಯಾರಿಲ್ಲ. ನೀನು ಗಂಡನ ಮನೆಗೆ ಹೋಗುತ್ತೀಯಾ, ಅಲ್ಲಿಯ ಆಸ್ತಿಯಲ್ಲಿ ನಿನಗೆ ಭಾಗ ಬರುತ್ತದೆ, ಹಾಗಾಗಿ ನಿನಗೆ ಈ ಆಸ್ತಿಯಲ್ಲಿ ಭಾಗ ಕೊಡಲಿಕ್ಕಾಗುವುದಿಲ್ಲ ಎಂದು ನಾವು ವಾದ ಮಾಡುತ್ತೇನೆ. ಆದರೆ ಆಕೆ ಗಂಡನ ಮನೆಗೆ ಹೋದರೆ ಏನಾಗುತ್ತದೆ ಎಂದರೆ, ಆಕೆಗೆ ಮಕ್ಕಳಿದ್ದರೆ, ಆಕೆಗೆ ಒಂದು ಕಾಸೂ ಕೂಡ ಆಸ್ತಿ ಬರುವುದಿಲ್ಲ. ಯಾವತ್ತೂ ಕೂಡ ಆಕೆಗೆ ಆಸ್ತಿ ಸಿಗುವುದಿಲ್ಲ. ತವರು ಮನೆಯವರು ಒಂದು ರೀತಿ ವಾದ ಮಾಡಿ ಗಂಡನ ಮನೆಗೆ ಕಳುಹಿಸುತ್ತಾರೆ,

ಆದರೆ ಅಲ್ಲಿಯೂ ಕೂಡ ಆಕೆಗೆ ಆಸ್ತಿ ಸಿಗುವುದಿಲ್ಲ. ಅಂದರೆ ಗಂಡು ಮಕ್ಕಳಿಗೆ ಮಾತ್ರ ಆಸ್ತಿ ಕೊಡಬೇಕೆಂಬುದು ಇದರ ಅರ್ಥ. ನಮ್ಮ ರೆವಿನ್ಯೂ ಆ್ಯಕ್ಟ್‌ನಲ್ಲಿ ಇರುವಂತೆ, ಪಾವತಿವಾರು ಖಾತೆ ಬದಲಾವಣೆ ಮಾಡುವಾಗ ಗಂಡು ಅಥವಾ ತಂದೆ ಅಥವಾ ಮಗನ ಹೆಸರನ್ನು ಮಾತ್ರ ಬರೆಯುತ್ತಾರೆ. ಹೆಂಡತಿಯ ಪ್ರಶ್ನೆಯು ಇಲ್ಲಿ ಬರುವುದಿಲ್ಲ. ಈ ಸಮಾಜದ ಅಸಮಾನತೆಯಲ್ಲಿ ಮಹಿಳೆಯರ ಅಸಮಾನತೆಗೆ ಜಾತಿ ಭೇದ ಇಲ್ಲ. ಧರ್ಮದ ಭೇಧ ಇಲ್ಲ. ಎಲ್ಲಾ ಜಾತಿಯ ಪುರುಷರೂ ಕೂಡ ಮಹಿಳೆಯರನ್ನು ಒಂದೇ ದೃಷ್ಟಿಯಲ್ಲೇ ನೋಡುತ್ತಾರೆ. ಜಗತ್ತಿನಲ್ಲಿ ಯಾವುದೇ ಬೇದಭಾವ ಇಲ್ಲದೇ ನೋಡತಕ್ಕಂಥ ಒಂದೇ ಒಂದು ವಸ್ತು ಎಂದರೆ ಮಹಿಳೆ. ಎಲ್ಲಾ ಜಾತಿಗಳೂ, ಎಲ್ಲಾ ಧರ್ಮಗಳೂ ಮಹಿಳೆಯರ ಬಗ್ಗೆ ಒಂದೇ ರೀತಿಯ ಅಭಿಪ್ರಾಯವನ್ನು ಇಟ್ಟುಕೊಂಡಿದೆ. ಅವುಗಳಲ್ಲಿ ಯಾವುದೇ ರೀತಿಯ ಬದಲಾವಣೆ ಇರುವುದಿಲ್ಲ. ದುರಂತ ಏನೆಂದರೆ, ಯಾವುದೇ ಧರ್ಮ ಧರ್ಮದ ಮಧ್ಯೆ ಜಗಳವಾದರೆ ಮೊದಲನೇ ಬಲಿ ಪಶುವೇ ಮಹಿಳೆ. ಜಾತಿ ಜಾತಿಗಳ ಮಧ್ಯೆ ಎಲ್ಲಾದರೂ ಏನಾದರೂ ತಕರಾರು ಬಂದರೆ ಮೊದಲನೇ ಬಲಿ ಪಶುವೇ ಮಹಿಳೆ. ಪುರುಷ ಪ್ರಧಾನವಾದಂತಹ ಸಮಾಜದಲ್ಲಿ ತಮ್ಮ ಆಕ್ರೋಶವನ್ನು, ಸಿಟ್ಟನ್ನು ಅವರ ಮೇಲೆ ತೀರಿಸಿಕೊಳ್ಳುವಾಗ ನಾವು ವರ್ತನೆ ಮಾಡುವುದು ಹೇಗೆ? ನಾವು ಜನರನ್ನು ಏನೆಂದು ಬಯ್ಯುತ್ತೇವೆ? ನಾನು ಇಲ್ಲಿ ಆ ಪದಗಳನ್ನು ಉಪಯೋಗಿಸಬಾರದು. ಅದು ಅಸಂಸದೀಯ ಪದಗಳಾಗಿವೆ. ನಮಗೆ ಯಾರ ಮೇಲಾದರೂ ಸಿಟ್ಟಿದ್ದರೆ ನಾವು ಬಯ್ಯುವಾಗ ಉಪಯೋಗಿಸುವ ಪದಗಳೇನು? ಅವರನ್ನೇ ಮುಂದಿಟ್ಟುಕೊಂಡು ನಾವು ಬಯ್ಯುತ್ತೇವೆ. ಅಂದರೆ ಇದರ ಅರ್ಥವೇನು? ಎಲ್ಲಾ ರೀತಿಯಾದಂತಹ ತುಳಿತಕ್ಕೂ ಕೂಡ ಅವರನ್ನೇ ನಾವು ಬಲಿಪಶುಗಳನ್ನಾಗಿ ಮಾಡುತ್ತಿದ್ದೇವೆ. ನಾವು ಯಾರ ಮೇಲಾದರೂ ಸೇಡು ತೀರಿಸಿಕೊಳ್ಳಬೇಕೆಂದರೂ ಕೂಡ ಅವರನ್ನೇ ಬಲಿಪಶುಗಳನ್ನಾಗಿ ಮಾಡುತ್ತಿದ್ದೇವೆ. ಈ ಸಮಸ್ಯೆ ಬಹಳ ಗಂಭೀರವಾದುದು ಎಂದು ನಾನು ಪ್ರಾರಂಭದಲ್ಲೇ ಹೇಳಿದೆ. ಇತಿಹಾಸದ ಕಾಲ ಗರ್ಭದಿಂದ ಹುಟ್ಟಿ ಬಂದಿರತಕ್ಕಂಥ ಖಾಯಿಲೆ ಇದು. ಆ ಖಾಯಿಲೆಗೆ ಎಲ್ಲೋ ಒಂದು ಕಡೆ ಗ್ಲೂಕೋಸ್ ಬಾಟಲ್ ಹಾಕಿ ವಾಸಿ ಮಾಡುವುದಕ್ಕಾಗುವುದಿಲ್ಲ. ಕೆಲವರು ನಮ್ಮ ಮಾನಸಿಕ ದೃಷ್ಟಿ ಬದಲಾವಣೆಯಾಗೇಬೇಕು, ನಮ್ಮ ಮನೋದೃಷ್ಟಿ ಬದಲಾವಣೆಯಾಗಬೇಕು ಎಂದು ವಾದ ಮಾಡುತ್ತಾರೆ. ಮೆಂಟಲ್ ಮೇಕಪ್ ಹೇಗೆ ಬರುತ್ತದೆ? ಮೆಂಟಲ್ ಮೇಕಪ್ ಸಾಮಾಜಿಕ ಪರಿಸರದ ಒತ್ತಡದಿಂದ ಬರುತ್ತದೆ. ಫ್ರೆಂಚ್ ಫಿಲಾಸಫರ್ ಆದ ಡೆಕಾರ್ಟೆ ಎಂಬುವವನು ಏನು ಹೇಳುತ್ತಾನೆ ಎಂದರೆ, ``I am thinking because I am here, I am here because I am thinking" ಏನು ಇದರ ಅರ್ಥ? ನಾನು ಒಬ್ಬ ಇದ್ದರೆ ನಾನು ಆಲೋಚನೆ ಮಾಡುತ್ತೇನೆ. ನಾನು ಇಲ್ಲದೇ ಇದ್ದರೆ ಆಲೋಚನೆ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಅಂತಹ ಒಂದು ಪರಿಸರ ಇದು. ಮಹಿಳೆಯರಿಗೆ ಸಮಾನತೆ ಕೊಡಬೇಕೆಂದು ಮಾನಸಿಕವಾಗಿ ನಾವೆಲ್ಲಾ ತೀರ್ಮಾನ ಮಾಡತಕ್ಕಂಥ ಪ್ರಶ್ನೆ ಇದಲ್ಲ. The material condition of the women has to change.

ಆದಾಗದ ಹೊರತು ಯಾವುದೇ ಬದಲಾವಣೆಯನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆಂದು ಬದಲಾವಣೆಯಾಗುವವರೆಗೂ ಕೂಡ ಅವರನ್ನು ತುಳಿಯುತ್ತಲೇ ಇರಬೇಕು, ಅವರ ಮೇಲೆ ದಮನ ನಡೆಯುತ್ತಿರಬೇಕು, ಅವರನ್ನು ಶೋಷಣೆ ಮಾಡಬೇಕು ಎಂಬತಕ್ಕಂಥ ವಾದ ಇದಲ್ಲ. ಆ ಬದಲಾವಣೆಯ ಪ್ರೋಸೆಸ್‌ನಲ್ಲಿ ಇವೆಲ್ಲವೂ ಕೂಡ ಒಂದು ಭಾಗವಾಗಬೇಕು. ನಾವು ಮಹಿಳೆಯರ ಹಕ್ಕುಗಳಿಗಾಗಿ ಹೋರಾಟ ನಡೆಸತಕ್ಕಂಥದ್ದು, ಮಹಿಳೆಯರ ಮೇಲಿನ ದಮನದ ವಿರುದ್ಧ ಹೋರಾಟ ನಡೆಸತಕ್ಕಂಥದ್ದು, ಮಹಿಳೆಯರ ಬಗ್ಗೆ ಕಾನೂನುಗಳನ್ನು ತರತಕ್ಕಂಥದ್ದು, ಇವೆಲ್ಲವೂ ಕೂಡ ಆ ಬದಲಾವಣೆಯ ಪ್ರೋಸೆಸ್‌ನ ಭಾಗವಾಗಬೇಕೇ ಹೊರತು ಮೇಲ್ನೋಟಕ್ಕೆ ಅದನ್ನು ಕೊಟ್ಟುಬಿಟ್ಟು, ನಾವೆಲ್ಲಾ ಕಾನೂನು ಮಾಡಿದ್ದೇವೆ ನೀವು ಸುರಕ್ಷಿತವಾಗಿರಿ ಎಂದು ಹೇಳುವುದಲ್ಲ. ಈಗ ಮಹಿಳಾ ಮೀಸಲಾತಿ ಮಸೂದೆಗೆ ಯಾವ ರೀತಿಯ ಪರಿಸ್ಥಿತಿ ಬಂದಿದೆ ಎಂಬುದು ನಮಗೆಲ್ಲಾ ಇವತ್ತು ಗೊತ್ತೇ ಇದೆ. ಮೇಲ್ನೋಟಕ್ಕೆ ನಾವು ಮಾಡತಕ್ಕದ್ದೆಲ್ಲವನ್ನೂ ಕೂಡ ಮಾಡಿ, ಅದನ್ನು ಕೈ ಬಿಡುವುದರಿಂದ ಸಮಸ್ಯೆ ಪರಿಹಾರವಾಗುತ್ತದೆ ಎನ್ನಲಿಕ್ಕೆ ಖಂಡಿತಾ ಸಾಧ್ಯವಿಲ್ಲ. ಇದಕ್ಕೆ ಬಹಳ ಆಳವಾದಂತಹ, ದೀರ್ಘವಾದಂತಹ ಚರ್ಚೆ ಮತ್ತು ಮಂಥನ ಬೇಕಾಗುತ್ತದೆ. ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ಇವನ್ನೆಲ್ಲಾ ಚರ್ಚೆ ಮಾಡತಕ್ಕಂಥ ಪ್ರಶ್ನೆ ಇದಲ್ಲ. ಮೂಲತಃ ಇರತಕ್ಕಂಥ ಪ್ರಶ್ನೆಗಳೇನು? ಆ ಪ್ರಶ್ನೆಗಳ ಆಧಾರದ ಮೇಲೆ ನಾವು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಮಗೆ ಒಂದು ಸ್ಪಷ್ಟತೆ ಇರಬೇಕು. ಮಹಿಳಾ ಸಮಾನತೆ ಮಾತುಗಳಿಂದ ಬರಲಿಕ್ಕೆ ಸಾಧ್ಯತೆ ಇಲ್ಲ, ಕಾನೂನುಗಳಿಂದ ಬರಲಿಕ್ಕೆ ಸಾಧ್ಯತೆ ಇಲ್ಲ. ಈ ವ್ಯವಸ್ಥೆ ಮೂಲಭೂತವಾಗಿ ಬದಲಾವಣೆಯಾಗದೇ ಆ ಬದಲಾವಣೆ ಬರಲಿಕ್ಕೆ ಸಾಧ್ಯವಿಲ್ಲ ಎನ್ನುವಂಥಾದ್ದನ್ನು ನಾವು ಸ್ಪಷ್ಟವಾಗಿ ತಿಳಿದಿರಬೇಕು. ಆ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡತಕ್ಕಂಥ ಹೋರಾಟಗಳು ನಡೆದರೆ ಮಾತ್ರ ಈ ಸಮಸ್ಯೆ ಬದಲಾವಣೆಯಾಗುತ್ತದೆ. ಕಾನೂನುಗಳಲ್ಲಿ ಬದಲಾವಣೆ ಮಾಡಿ ಮಾತ್ರವೇ ಇದು ಆಗುತ್ತದೆ ಎಂದು ಹೇಳಿದರೆ, ಅದು ಖಂಡಿತಾ ಸಾಧ್ಯವಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಬಜೆಟ್ ಮೇಲೆ ಚರ್ಚೆ ನಡೆಸುವುದು ಇನ್ನೂ ಬಾಕಿ ಇದೆ. ಮಾನ್ಯ ಪುಟ್ಟಣ್ಣಯ್ಯನವರು, ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಐದೈದು ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿಬಿಡಿ. ಕೊನೆಯದಾಗಿ ಮಾನ್ಯ ಲೀಲಾದೇವಿ ಪ್ರಸಾದ್‌ರವರಿಗೂ ಅವಕಾಶ ಮಾಡಿಕೊಡುತ್ತೇನೆ.

+ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಸನ್ಮಾನ್ಯ ಅಧ್ಯಕ್ಷರೇ, ಏನಾದರೂ ಮಾಯ ಮಂತ್ರ ಬಂದಿದ್ದರೆ, ಎಲ್ಲಾ ಗಂಡಸರನ್ನೂ ಹೆಂಗಸರನ್ನಾಗಿ ಮಾಡಿ, ಎಲ್ಲಾ ಹೆಂಗಸರನ್ನೂ ಗಂಡಸರನ್ನಾಗಿ ಮಾಡಿದ್ದರೆ, ಅವರವರ ಕಷ್ಟ ಏನೆಂಬುದು ಕರೆಕ್ಟಾಗಿ ಗೊತ್ತಾಗುತ್ತಿತ್ತು. ಇತಿಹಾಸದ ಕಾಲ ಗರ್ಭವನ್ನು ಇವತ್ತಿನ ಪರಿಸ್ಥಿತಿಗೆ ತೆಗೆದುಕೊಂಡು ಬಹಳ ಗಂಭೀರವಾಗಿ ಸನ್ಮಾನ್ಯ ಗೆಳೆಯರಾದ ಶ್ರೀರಾಮರೆಡ್ಡಿಯವರು ಮಾತನಾಡಿದ್ದಾರೆ.

ಇವತ್ತಿನ ಸಮಸ್ಯೆಯನ್ನು ನಾವು ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕು. ಇವತ್ತು ಎರಡು ಪ್ರಮುಖವಾದ ಸಮಸ್ಯೆಗಳಿವೆ. ಒಂದು ವರದಕ್ಷಿಣೆ, ಮತ್ತೊಂದು ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ. ಈ ಮದುವೆ ಎನ್ನುವ ಕಾನ್ಸೆಪ್ಟ್ ಏನಿದೆ, ಈ ಮದುವೆ ಏಕೆ ಅನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಇದೇನು ಸಂಪ್ರದಾಯವೇ ಅಥವಾ ವೈಜ್ಞಾನಿಕ ಕಾರಣವೇ? ಉದಾಹರಣೆಗೆ ಹೇಳುವುದಾದರೆ, ಹಿಂದೆ ಸಿಫಿಲಿಸ್, ಈಗ ಏಡ್ಸ್ ಎಂಬ ರೋಗಗಳು ಬಂದಿವೆ. ಏನು ಇದರ ಉದ್ದೇಶ? ಇವು ಬರಲಿಕ್ಕೆ ಕಾರಣವೇನು? ಲೈಂಗಿಕತೆ ಅಶಿಸ್ತು ಇದ್ದರೆ ಮನುಷ್ಯ ನಾಶವಾಗುತ್ತಾನೆ. ಮುಂದಿನ ಜನಾಂಗ ಆರೋಗ್ಯಕರವಾಗಿ ಹುಟ್ಟಬೇಕಾದರೆ, ಲೈಂಗಿಕತೆ ಒಂದು ಶಿಸ್ತು ಇರಬೇಕೆಂದು ಹೇಳಿ ವೈಜ್ಞಾನಿಕವಾದ ಕಾರಣದ ಆಧಾರದ ಮೇಲೆ ಸಂಪ್ರದಾಯಗಳನ್ನು ಸೃಷ್ಟಿ ಮಾಡಿದರು. ಇದು ಅಷ್ಟೇ ಕಾರಣ. ಈಗಾಗಲೇ ಅಂಕಿಅಂಶಗಳ ಪ್ರಕಾರ ಭಾರತ ದೇಶದಲ್ಲಿ 2,000 ಇಸವಿ ಹೊತ್ತಿಗೆ ಒಂದು ಕೋಟಿ ಜನ ಏಡ್ಸ್ ಪೀಡಿತರು ಇದ್ದಾರೆ. ಇಂಡಿಯಾ ದೇಶದಲ್ಲಿ ಈ ಅಂಕಿಅಂಶ ಇದೆ. ಈ ಶಿಸ್ತನ್ನು ನಾವು ಅಳವಡಿಸುವುದರಲ್ಲಿ ಫೈಲ್ಯೂರ್ ಆಗಿದ್ದೇವೆ. 15 ಲಕ್ಷ 20 ಲಕ್ಷ, 40 ಲಕ್ಷ, 70 ಲಕ್ಷ ಖರ್ಚು ಮಾಡಿ ಮದುವೆ ಮಾಡುವುದು ಭ್ರಷ್ಟಾಚಾರ ಬೆಳೆಯುವುದಕ್ಕೆ ಒಂದು ಕಾರಣ. ಯಾರೋ ಮದುವೆ ಮಾಡುತ್ತಾರೆ ಎಂದರೆ ಇನ್‌ವಿಟೇಷನ್ ಮಾಡುವುದು, ಒಬ್ಬೊಬ್ಬರು ಒಂದೊಂದು ತರಹ ಮದುವೆ ಮಾಡುವುದು. ತಾವು ಹೇಳಿದಿರಿ, ಬೆಂಗಳೂರಿನಲ್ಲಿ ಒಂದು ವರ್ಷ ಮುಂಚಿತವಾಗಿ ಮದುವೆ ಛತ್ರ ಬುಕ್ ಆಯಿತು ಎಂದು 30 ಲಕ್ಷ 40 ಲಕ್ಷ ಖರ್ಚು ಮಾಡುವುದನ್ನು ನೋಡಿ ಬೇರೆ ಎಲ್ಲಾ ತರಹದ ವರದಕ್ಷಿಣೆ ಪದ್ಧತಿ ಸೃಷ್ಟಿಯಾಯಿತು. ವಿಶೇಷವಾಗಿ ಎಲ್ಲಾ ಮದುವೆಗಳು ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ನೋಂದಾವಣೆಯಾಗಬೇಕು. ನೋಂದಾವಣೆಯಾದರೆ ಮಾತ್ರ ಸಮಸ್ಯೆ ಬಗೆಹರಿಸಬಹುದು. ನಿಜವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ಪಂಚಾಯಿತಿಗಳನ್ನು ಮಾಡಿ ವಿಶೇಷವಾಗಿ ಮಹಿಳೆಯರಿಗಾಗಿ ಸೂಕ್ತ ವ್ಯವಸ್ಥೆ ಮಾಡಬೇಕು. ಎರಡು ಮಕ್ಕಳ ತಾಯಿ ನನ್ನ ಹತ್ತಿರ ಬಂದು ನನ್ನ ಗಂಡ ಬೇರೆ ಮದುವೆ ಮಾಡಿಕೊಂಡಿದ್ದಾರೆ, ಆದರೆ ನನ್ನ ಎರಡು ಮಕ್ಕಳಿಗೋಸ್ಕರ ನಾನು ಬದುಕಬೇಕು, ಅವನ ಹತ್ತಿರ ಒಂದು ಎಕರೆ ಜಮೀನು ಇದೆ, ಅರ್ಧ ಎಕರೆ ಕೊಡಿಸಿಕೊಡಿ ಎಂದು ಹೇಳಿದರು. ಆಸ್ತಿ ಹಕ್ಕು ಇದ್ದರೆ ಪುರುಷ ಮಹಿಳೆ ಮೇಲೆ ದೌರ್ಜನ್ಯವಾಗಲಿ, ಬೇರೆ ರೀತಿ ಅನೈತಿಕವಾಗಿ ಚಿಂತನೆ ಮಾಡುವುದಕ್ಕೆ ಸಾಧ್ಯವಿಲ್ಲ. ಮೊದಲನೆಯದಾಗಿ ಮಹಿಳೆಯರಿಗಾಗಿ ಸಮಾನವಾದ ಆಸ್ತಿ ಹಕ್ಕು ಕೊಡಬೇಕು. ಅದರಿಂದ ಸಮಸ್ಯೆ ಬಗೆಹರಿಸಬಹುದು. ನಾವು ಹಿಂದು ಧರ್ಮದಲ್ಲಿ ಸಂಸ್ಕೃತದಲ್ಲಿ ಏನು ಹೇಳುತ್ತೇವೆ, ಎಂದರೆ, ಎಲ್ಲೈ ಕನ್ಯೆ ಮೊದಲನೆಯ ಗಂಡನೇ ಶೂರನು, ಎರಡನೇ ಗಂಡನು ಗಂಧರ್ವ ಮೂರನೇ ಗಂಡ ಅಗ್ನಿ ಮತ್ತು ಅವರಿಂದ ಸುಖ ಭೋಗಗಳನ್ನು ಅನುಭವಿಸಿ ಮಕ್ಕಳನ್ನು ಹಡೆದು ನಾಲ್ಕನೇ ಗಂಡನಾದ ಮಾನವನನ್ನು ಮದುವೆಯಾಗುತ್ತಿದ್ದರು. ನಾವೆಲ್ಲಾ ಅದೇ ರೀತಿ ಮದುವೆಯಾಗುತ್ತಿದ್ದೆವು. ಇದು ಈ ಮಂತ್ರ ಎಷ್ಟು ಸಮಂಜಸ. ಇದನ್ನು ನಾವು

ಬದಲಾವಣೆ ಮಾಡಬೇಕು. ಪದ್ಧತಿಗಳನ್ನು ನಾವು ಬದಲಾವಣೆ ಮಾಡಬೇಕು. ಮದುವೆ ಮಾಡತಕ್ಕಂಥದ್ದಕ್ಕೆ ಒಂದು ಶಿಸ್ತಿನ ಬಗ್ಗೆ ಯೋಚನೆ ಮಾಡದೆ ಇದ್ದರೆ ಕಷ್ಟ. ಆದ್ದರಿಂದ ಮಹಿಳೆಯರಿಗಾಗಿ ನನ್ನ ಸಲಹೆ ಮಹಿಳೆಯರಿಗಾಗಿ ಆಸ್ತಿ ಹಕ್ಕನ್ನು ಕೊಡಬೇಕು. ಎರಡನೆಯದು ಪಿಸಿಆರ್ ಆ್ಯಕ್ಟ್ ಹೇಗೆ ಮಾಡಿದ್ದೀರಿ? ಮಹಿಳೆ ಮೇಲೆ ಅತ್ಯಾಚಾರ ಮಾಡತಕ್ಕಂಥದ್ದಕ್ಕೆ ಕಾನೂನಿನಲ್ಲಿ ಗಂಭೀರವಾದ ಭಯದ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕೆ ಕಾರಣ ಮಾಧ್ಯಮದವರು. ಸಿನಿಮಾ ವಾಲ್‌ಪೋಸ್ಟ್‌ನ್ನು ಯಾವ ರೀತಿಯಾಗಿ ಹೆಣ್ಣನ್ನು ಉಪಯೋಗಿಸಿಕೊಳ್ಳುತ್ತಾರೆ, ಟಿ.ವಿ. ಮಾಧ್ಯಮದಲ್ಲೂ ಕೂಡ ಹೆಣ್ಣು ಎಂದರೆ ಯಾವುದೋ ಭೋಗದ ವಸ್ತು ಎಂಬ ಭಾವನೆ ಕ್ರಿಯೇಟ್ ಆಗಿದೆ. ಆದ್ದರಿಂದ ಮಹಿಳೆಯರಿಗೆ ವಿಶೇಷವಾದ ಉದ್ಯೋಗ ವ್ಯವಸ್ಥೆ ಬಗ್ಗೆ ಯೋಚನೆ ಮಾಡಬೇಕು. ನನ್ನನ್ನು ನಾನೇ ಉದಾಹರಣೆ ಮಾಡಿಕೊಂಡರೆ ನಮ್ಮ ಅಪ್ಪ ನನಗೆ ಮದುವೆ ಮಾಡಿದಾಗ ಸಾಲ ಮಾಡಿ 50,000 ರೂಪಾಯಿ ಖರ್ಚು ಮಾಡಿ ಮದುವೆ ಮಾಡಿದ. ನನ್ನ ಸ್ನೇಹಿತ ಸರಳ ಮದುವೆ ಮಾಡಿಕೊಂಡ. ಅವರು ಸಿಕ್ಕಿ ಸುಮಾರು 20 ವರ್ಷಗಳಾಗಿದ್ದವು, ಇವತ್ತು ಸಿಕ್ಕಿ ನಾನು ಮದುವೆಯಾಗುವ ದುಡ್ಡಿನಲ್ಲಿ ನಾನು ಒಂದು ಸೈಟ್ ತೆಗೆದುಕೊಂಡೆ, ಇವತ್ತು 52 ಲಕ್ಷಕ್ಕೆ ಕೇಳುತ್ತಿದ್ದಾರೆ ಎಂದ. ಆರ್ಥಿಕವಾಗಿ ನಾವು ಯೋಚನೆ ಮಾಡಬೇಕು. ಆರ್ಥಿಕ ಅಸಮಾನತೆಯಿಂದ ಆ ಮಹಿಳೆ ಜೀವನ ಬಹಳ ಕಷ್ಟವಾಗಿದೆ. ಆದ್ದರಿಂದ ನಾವು ಮದುವೆ ಎಂದರೆ, ಇನ್ನೊಂದು ಕಾರಣ ಉದಾಹರಣೆಗೆ ಯಾವುದೋ ಒಂದು ಜಮೀನು ತೆಗೆದುಕೊಳ್ಳುತ್ತೇವೆ. ಸರ್ವೇ ನಂ. 116 ನನ್ನ ಎರಡು ಎಕರೆ ಎಂದು ಸುಮ್ಮನೆ ಗದ್ದೆ ಇದ್ದ ಹಾಗೆ ಇದ್ದಿದ್ದರೆ ಯಾವ ಸರ್ವೇ ನಂ. ನಮಗೆ ಗೊತ್ತಾಗಬೇಕು. ಹೀಗೆ ನಾವು ಜೀವನದಲ್ಲಿ ಸಾಗಿಸಲು ಒಂದು ಹೆಣ್ಣು ಒಂದು ಗಂಡು ಅದಕ್ಕೋಸ್ಕರವಾಗಿ ಒಂದು ಶಿಸ್ತನ್ನು ಇಟ್ಟುಕೊಂಡಿದ್ದೇವೆ. ಅಸಮಾನತೆ ವಿರುದ್ಧ, ಒಂದು ಸಾಂಸ್ಕೃತಿಕ ಬದಲಾವಣೆ ಆಗತಕ್ಕಂತಹ ಚಿಂತನೆ ಆಗಬೇಕು. ಕಾನೂನಿನಲ್ಲಿ ಭದ್ರತೆ ಆಗಬೇಕೆಂದು ಹೇಳುತ್ತಾ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಸಭಾಧ್ಯಕ್ಷರೇ, ಬಹಳಷ್ಟು ಮಾತುಗಳು ಆಗಿವೆ. ಜೊತೆಗೆ ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ಅವರು ಒಂದು ದಿಕ್ಕು ಕೊಡುವುದಕ್ಕೆ ಪ್ರಯತ್ನ ಪಡುತ್ತಿದ್ದರು ಎಂದು ಕಾಣುತ್ತದೆ ವಿಶೇಷವಾದ ವಿಚಾರ ನಾನು ಪ್ರಸ್ತಾಪ ಮಾಡಿದೆ, ಶ್ರೀರಾಮರೆಡ್ಡಿಯವರು ಹಿಂದಿನ ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಮಗೆ ಮುಂದೆ ಇರುವುದು, ನಮ್ಮ ರಾಜ್ಯದಲ್ಲಿ ನಮ್ಮ ಸುತ್ತಮುತ್ತ ಮಹಿಳೆಯರ ಮೇಲೆ ಆಗುತ್ತಿರತಕ್ಕಂತಹ ದೌರ್ಜನ್ಯ ಅತ್ಯಾಚಾರ ನಾವು ಅವರನ್ನು ನೋಡುತ್ತಿರುವ ದೃಷ್ಟಿ, ಇದನ್ನು ನಾವು ಯಾವ ರೀತಿ ಬದಲಾವಣೆ ಮಾಡಿಕೊಳ್ಳಬೇಕು, ಅಷ್ಟಕ್ಕೆ ಸೀಮಿತವಾಗಿ ವಿಷಯ ಇಟ್ಟುಕೊಂಡು ಈ ದೇಶದಲ್ಲಿ ಪ್ರಧಾನಮಂತ್ರಿ ಮಾಡಿದ್ದೇವೆ ಮುಖ್ಯಮಂತ್ರಿಯನ್ನಾಗಿ ಮಾಡಿದ್ದೇವೆ,

ನ್ಯಾಯಾಧೀಶರನ್ನಾಗಿ ಮಾಡಿದ್ದೇವೆ ಮಹಿಳೆಯರನ್ನು ಎಲ್ಲಾ ಸ್ಥಾನದಲ್ಲಿ ನೇಮಕ ಮಾಡಿದ್ದೇವೆ. ಆದರೆ ನಮ್ಮ ನಿತ್ಯ ಜೀವನದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಕೋನ ಮಾತ್ರ ಇದುವರೆಗೆ ಬದಲಾವಣೆಯಾಗಿಲ್ಲ. ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಮಹಿಳಾ ಆಯೋಗ ಎಂದು ಒಂದು ಮಾಡಿದ್ದೇವೆ. ಮಹಿಳೆಯರಿಗೆ ತೊಂದರೆ ಬಂದರೆ ಅವರಿಗೆ ಸಹಾಯವಾಗಬೇಕು: ಇದುವರೆಗೆ ಮಹಿಳಾ ಆಯೋಗದಿಂದ ಎಷ್ಟು ಜನರಿಗೆ ಸಹಾಯವಾಗಿದೆ ಎಂದು ಲೆಕ್ಕ ಹಾಕಿದರೆ ನನಗೆ ಉತ್ತರ ಸಿಗಲಿಲ್ಲ. ಪ್ರಾಯಶಃ ಮಹಿಳಾ ಆಯೋಗಕ್ಕಿಂತ ಬೆಂಗಳೂರು ನಗರದ ಪೋಲಿಸ್‌ನವರು ಮಹಿಳಾ ಸಹಾಯ ವಾಣಿ ಎಂದು ಏನು ಮಾಡಿದರು ಅದರಿಂದ ಜಾಸ್ತಿ ಉಪಯೋಗವಾಗುತ್ತಿದೆ. ಬಹಳಷ್ಟು ಜನರ ದುಃಖ ದುಮ್ಮಾನಕ್ಕೆ ಸ್ಪಂದಿಸುತ್ತಿದ್ದಾರೆ. ಮಹಿಳಾ ಆಯೋಗವನ್ನು ಯಾರಿಗೋ ಒಂದು ರಾಜಕೀಯ ಆಶ್ರಯ ಕೊಡುವುದಕ್ಕೆ ಇರುವ ಸಂಸ್ಥೆ ಎಂದು ತಿಳಿದುಕೊಳ್ಳುವುದರ ಬದಲು ನಿಜವಾಗಿ ಸಮಾಜದ ಮಹಿಳೆಯರ ದುಃಖ ದುಮ್ಮಾನಕ್ಕೆ ಉತ್ತರ ಹುಡುಕುವ ಒಂದು ಆಯೋಗ ಮಾಡುವುದಕ್ಕೆ ಈ ಸರ್ಕಾರ ತಯಾರಿದೆಯಾ ಎಂದು ಒಂದು ಪ್ರಶ್ನೆ. ಈಗಾಗಲೇ ಮಾನಭಂಗದ ಬಗ್ಗೆ ಭಾರತ ಸರ್ಕಾರದ ಗೃಹ ಸಚಿವರು ಒಂದು ಕಠಿಣವಾದ ನಿಲುವನ್ನು ತೆಗೆದುಕೊಂಡಿದ್ದಾರೆ. Rape is a heinous crime. ಅದಕ್ಕೆ ಕ್ಯಾಪಿಟಲ್ ಪನಿಷ್‌ಮೆಂಟ್ ಕೊಡಬೇಕೆಂದು ಅದಕ್ಕೆ ಒಂದು ತೀರ್ಮಾನ ತೆಗೆದುಕೊಂಡು ಆ ದಿಕ್ಕಿನಲ್ಲಿ ವಿಚಾರ ನಡೆಯುತ್ತಿದೆ. Nothing short of that. ಯಾವ ರೀತಿ ಮ್ಯಾನ್ ಸ್ಲಾಟರ್‌ನ ನಾವು ಒಂದು ಕೊಲೆ ಎಂದು ನೋಡುತ್ತೇವೆ, ಮಾನಭಂಗ ಕೂಡ ನಾವು ಅದೇ ರೀತಿ ಸ್ವೀಕರಿಸಬೇಕು. ಅದೇ ತರಹ ಉಗ್ರತನವನ್ನು ನಾವು ತೋರಿಸಬೇಕು. ಇವತ್ತು ಏನಾಗಿದೆ ಈ ಸದನದಲ್ಲಿ ಕೆಲವು ಸಂದರ್ಭದಲ್ಲಿ ನಾನು ಗಮನಿಸಿರುವುದು ಎಲ್ಲಾ ಕಡೆ ನಮ್ಮ ಹಾಸ್ಯಕ್ಕೆ ನಮ್ಮ ಅಪಹಾಸ್ಯಕ್ಕೆ ನಮ್ಮ ವ್ಯಂಗ್ಯಕ್ಕೆ, ನಮ್ಮ ಬೈಗುಳಕ್ಕೆ ಹೆಣ್ಣು ಒಂದು ಸಾಧನ. ಹೆಣ್ಣು ಇಲ್ಲದೆ ನಮಗೆ ಜೋಕೆ ಮಾಡುವುದಕ್ಕೆ ಕೂಡ ಬರುವುದಿಲ್ಲ. ಹೆಣ್ಣು ನಿಂತು ಮಾತನಾಡಿದರೆ ಅದೇ ಒಂದು ಜೋಕ್. ನಮ್ಮ ಮಾನಸಿಕ ಸ್ಥಿತಿಯನ್ನು ನಾವು ಬದಲಾವಣೆ ಮಾಡಿಕೊಳ್ಳದೆ ಇದ್ದರೆ ಕಾನೂನು ಎಷ್ಟೇ ತಂದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಕಾನೂನು ಇರುತ್ತದೆ, ಕಾನೂನು ಇರುವಾಗ ಅದನ್ನು ಇಂಪ್ಲಿಮೆಂಟ್ ಮಾಡುವವರು ಹಾಗೆ ಇಂಪ್ಲಿಮೆಂಟ್ ಮಾಡಬಾರದು ಎಂದು ಕೂಡ ಯೋಜನೆ ಮಾಡುತ್ತಾರೆ. ನಾನು ಸನ್ಮಾನ್ಯ ಗೃಹ ಸಚಿವರ ಗಮನಕ್ಕೆ ಒಂದೇ ಒಂದು ವಿಚಾರ ತರುತ್ತೇನೆ, 1987ರಲ್ಲಿ ಆಗಸ್ಟ್ ತಿಂಗಳಲ್ಲಿ ಈ ದೇಶದ ಸರ್ವೋಚ್ಛ ನ್ಯಾಯಾಲಯ ದುಡಿಯುವ ಮಹಿಳೆಯರ ಲೈಂಗಿಕ ಶೋಷಣೆ ಇದನ್ನು ನ್ಯಾಯಾಲಯ ಅಪರಾಧ ಎಂದು ಘೋಷಣೆ ಮಾಡಿದೆ. 1997ರ ಆಗಸ್ಟ್ ತಿಂಗಳಲ್ಲಿ ಸರ್ವೋಚ್ಛ ನ್ಯಾಯಾಲಯ ನೀಡಿರುವ ತೀರ್ಪಿನಲ್ಲಿ ವಿಶೇಷವಾಗಿ ಉದ್ಯೋಗಸ್ತ ಮಹಿಳೆಯರ ಮೇಲಿನ ದೌರ್ಜನ್ಯ ಲೈಂಗಿಕ ಕಿರುಕುಳವನ್ನು ಕರಾರುವಾಕ್ಕಾಗಿ ವ್ಯಾಖ್ಯಾನ ಮಾಡಿ ಕಿರುಕುಳ ಎಂದರೆ ಮುಜುಗರ ಉಂಟು ಮಾಡುವ ಲೈಂಗಿಕ ಅರ್ಥ ಹೊರಡಿಸುವ ಪ್ರತ್ಯಕ್ಷ ಹಾಗೂ ಪರೋಕ್ಷ ವರ್ತನೆ. ಎಲ್ಲರೂ ಈ ಅಪರಾಧ ಮಾಡಿಯೇ ಮಾಡಿದ್ದೇವೆ. ಎಲ್ಲರೂ ಅಪರಾಧಿಗಳು. ಎರಡನೆಯದು

ದೈಹಿಕ ಸಂಪರ್ಕ ಮತ್ತು ಸೂಚನೆ ಮತ್ತು ಮೂರನೆಯದು ಲೈಂಗಿಕ ಅರ್ಥ ಹೊರಡಿಸುವ ಮಾತುಗಳ ಬಳಕೆ, ಅಶ್ಲೀಲ ಚಿತ್ರಗಳನ್ನು ತೋರಿಸುವುದು ಮತ್ತು ಲೈಂಗಿಕ ಸಂಪರ್ಕ ಹೊಂದಲು ಕೋರಿಕೆ, ಅಥವಾ ಒತ್ತಡ ಮತ್ತು ಆರನೆಯದಾಗಿ ಮುಜುಗರ ಉಂಟು ಮಾಡುವ ಲೈಂಗಿಕ ಸ್ವರೂಪದ ಯಾವುದೇ ಅಂಗಿಕ ಕ್ರಿಯೆಗಳ ಮಾತುಗಳ ಬಳಕೆ. ಇದನ್ನು ಹೇಳಿ ಸರ್ವೋಚ್ಛ ನ್ಯಾಯಾಲಯ ಏನೇನು ಮಾಡಬೇಕೆಂದೂ ಕೂಡ ಡೈರೆಕ್ಷನ್ ಕೊಟ್ಟಿದೆ. ಖಾಸಗಿ ಅಥವಾ ಸಾರ್ವಜನಿಕ ವಲಯದ ಎಲ್ಲಾ ಮಾಲೀಕರು ಅಥವಾ ಸಂಬಂಧಪಟ್ಟ ಮಾಲೀಕರು ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ತೆಗೆದುಕೊಂಡು ಕ್ರಮಗಳನ್ನು ಅದು ಸೂಚಿಸಿದೆ. We should advertise these things. ಮೊದಲನೆಯದು, ಲೈಂಗಿಕ ಕಿರುಕುಳವನ್ನು ನಿಶೇಧಿಸುವ ಬಗ್ಗೆ ಸ್ಪಷ್ಟ ಪ್ರಕಟಣೆ ಹೊರಡಿಸಿ, ಮಹಿಳಾ ಉದ್ಯೋಗಿಗಳಲ್ಲಿ ಅರಿವು ಮೂಡಿಸಲು ಪ್ರಸಾರ ಮಾಡುವುದು. ಎರಡನೆಯದಾಗಿ the state Government has got a duty...ಸರ್ಕಾರಿ ಮತ್ತು ಸಾರ್ವಜನಿಕ ವಲಯಗಳಲ್ಲಿನ ನೌಕರರ ಶಿಸ್ತು ಮತ್ತು ನಡತೆಗೆ ಸಂಬಂಧಿಸಿದಂತೆ ರಚನೆಯಾಗಿರುವ ನಿಯಮ ನಿಬಂಧನೆಗಳಲ್ಲಿ ಲೈಂಗಿಕ ಕಿರುಕುಳವನ್ನು ನಿಷೇಧಿಸಲಾಗಿರುವ ಅಂಶಗಳನ್ನು ಸೇರಿಸಬೇಕು. It should become part of the Rules and Regulations. ಲೈಂಗಿಕ ಕಿರುಕುಳ ನೀಡಿದವರಿಗೆ ವಿಧಿಸಲಾಗುವ

1.50 ಪಿ.ಎಂ.

ದಂಡ ಶಿಕ್ಷೆಯ ಬಗ್ಗೆ ವಿವರಿಸಬೇಕು. ಇನ್ನು ಮೂರನೆಯದಾಗಿ ಖಾಸಗಿ ಸಂಸ್ಥೆಗಳು ಅಂದರೆ ಅವುಗಳ ಮಾಲೀಕರು ಈ ಮೇಲೆ ತಿಳಿಸಿದ ಅಂಶಗಳನ್ನು ಕೈಗಾರಿಕಾ ಉದ್ಯಮ 1946ರ ಕಾಯಿದೆಯಡಿಯಲ್ಲಿ ಸೇರ್ಪಡೆ ಮಾಡಲು ಕ್ರಮ ಕೈಗೊಳ್ಳಬೇಕು. ಮಹಿಳೆಯರಿಗೆ ಕೆಲಸ ಮಾಡುವ ಮಧ್ಯೆ ವಿಶ್ರಾಂತಿ ಪಡೆಯಲು, ಅವರ ಉತ್ತಮ ಆರೋಗ್ಯಕ್ಕಾಗಿ ಶುಚಿತ್ವ ಮತ್ತು ಇತ್ಯಾದಿ ಉತ್ತಮ ವಾತಾವರಣವನ್ನು ಉಂಟುಮಾಡಿ ಆ ಮೂಲಕ ಮಹಿಳೆಯರಿಗೆ ಮುಜುಗರದ ವಾತಾವರಣವನ್ನು ತೊಡೆದುಹಾಕುವಲ್ಲಿ ಉದ್ದಿಮೆದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಐ.ಪಿ.ಸಿ. ಅಥವಾ ಯಾವುದೇ ಕಾಯಿದೆಯಡಿಯಲ್ಲಿ ಅಪರಾಧ ಎನಿಸುವ ಅಥವಾ ದೈಹಿಕ ಕಿರುಕುಳಕ್ಕೆ ಸಂಬಂಧಿಸಿದ ಪ್ರಕರಣ ಗಮನಕ್ಕೆ ಬಂದಾಗ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಜರುಗುವಂತೆ ನೋಡಿಕೊಳ್ಳಬೇಕು. ಮೊಕದ್ದಮೆ ಹೂಡಿದವರು ಬೆಂಬಲ ಮತ್ತು ಸಾಕ್ಷ್ಯ ನೀಡಿದವರ ಗುರುತನ್ನು ಹೇಳಿ ಸೇಡಿನ ಕ್ರಮವನ್ನು ಅವರ ಮೇಲೆ ಜರುಗದಂತೆ ನೋಡಿಕೊಳ್ಳಬೇಕು ಎಂದು ಹೇಳಲಾಗಿದೆ. ಬಹಳ ದುಃಖದ ವಿಚಾರವೆಂದರೆ ಇಷ್ಟೊಂದು ಕಾರ್ಮಿಕ ಸಂಘಟನೆಗಳಿದ್ದರೂ ಕೂಡ ಮಹಿಳೆಯರ ಹಕ್ಕಿನ ಬಗ್ಗೆ ಯೋಚನೆ ಮಾಡುತ್ತಿರುವಂಥ ಇಂದಿನ ದಿನಗಳಲ್ಲಿ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ನಮ್ಮ ಕಾರ್ಮಿಕ ಸಂಘಟನೆಗಳ ಮುಖಾಂತರ ನಮ್ಮ ಕಾರ್ಖಾನೆಗಳಲ್ಲಿ it should become part of the rules and regulations ಎಂದು ಏಕೆ ಮಾಡುತ್ತಿಲ್ಲವೆನ್ನುವುದೇ ದುಃಖದ ವಿಚಾರವಾಗಿದೆ. Male

chauvenism ಎನ್ನುವುದು ಎಲ್ಲಾ ಕಡೆಯೂ ಇಂದು ಇದೆ.ಹೆಣ್ಣು ಇರುವುದೇ ಭೋಗದ ವಸ್ತು ಎನ್ನುವ ಹಾಗಿದೆ. ಆ ಹೆಣ್ಣನ್ನು ಸೋದರಿ, ಮಗಳು ಎನ್ನುವ ಕಾನ್‌ಸಪ್ಟ್‌ನಲ್ಲಿ ನೋಡುವುದೇ ಇಲ್ಲ. ಆ ಕಾರಣಕ್ಕೋಸ್ಕರ ನಾನು ಅಧ್ಯಕ್ಷರ ಮುಖಾಂತರ ಹೇಳಬಯಸುವುದೇನೆಂದರೆ ತುರ್ತು ಪರಿಹಾರವಾಗಿ ಈಗಿರುವ ಕಾನೂನನ್ನು ಬಿಗಿಗೊಳಿಸಿ ಇಂಪ್ಲಿಮೆಂಟಿಂಗ್ ಅಥಾರಿಟಿಯವರು ಏನಿದ್ದಾರೆ ಅವರಿಗೆ ಮನುಷ್ಯತ್ವ ಬರುವ ಹಾಗೆ ಮಾಡಬೇಕು. ಒಬ್ಬ ಹೆಂಗಸು ಮಾನಭಂಗಕ್ಕೆ ಒಳಗಾಗಿ ದೂರನ್ನು ನೀಡಲು ಪೋಲಿಸ್ ಠಾಣೆಗೆ ಹೋದರೆ ಅವಳನ್ನು ಪ್ರೊಫೆಶನಲ್ ಹೆಣ್ಣೆಂದು ಭಾವಿಸಿಕೊಂಡು ಆ ಧಾಟಿಯಲ್ಲಿಯೇ ಪೋಲಿಸರು ಮಾತನಾಡುತ್ತಾರೆ. ಮೊದಲೇ ಆ ಹೆಣ್ಣು ಜರ್ಝರಿತಳಾಗಿ ಬಂದಿರುವವಳನ್ನು ಇನ್ನಷ್ಟು ಕಂಗಾಲಾಗುವಂತೆ ಇವರು ಮಾಡುತ್ತಾ ಆಕೆಯ ಶೀಲಕ್ಕೆ ಸಂಬಂಧಪಟ್ಟಂತೆಲ್ಲಾ ಪ್ರಶ್ನೆ ಮಾಡುತ್ತಾ ಕೊನೆಗೆ ಏತಕ್ಕಾದರೂ ಪೋಲಿಸ್ ಠಾಣೆಗೆ ನಾನು ಬಂದೆನೋ ಎನ್ನುವ ಭಾವನೆ ಆ ಹೆಣ್ಣಿಗೆ ಬರುವಂತೆ ಮಾಡುತ್ತಾರೆ. ಪ್ರಾಯಶಃ ಈ ಪೋಲಿಸ್ ಠಾಣೆಯಲ್ಲಿ ಆಗುವ ಮಾನಭಂಗಕ್ಕಿಂತ ಹಿಂದೆ ಆದ ಮಾನಭಂಗ ಕಡಿಮೆಯೇ ಆಗಿರುತ್ತದೆ. ಆ ಮನುಷ್ಯತ್ವ ಎಂಬುದನ್ನು ಪೋಲಿಸ್ ಇಲಾಖೆ ಮತ್ತು ಇತರ ಇಲಾಖೆಗಳಲ್ಲಿರುವವರಿಗೆ ತುಂಬಿಸುವುದಕ್ಕೆ ಪ್ರಯತ್ನ ಪಡುತ್ತೀರಾ? ಶಾಲಾ ಕಾಲೇಜುಗಳಲ್ಲಿರುವ ಗಂಡುಮಕ್ಕಳಿಗೂ ಕೂಡ ಅವರ ಜವಾಬ್ದಾರಿ ಬಗ್ಗೆ ತಿಳಿಹೇಳುವ ದಿಕ್ಕಿನಲ್ಲಿ ಹೆಣ್ಣುಮಕ್ಕಳನ್ನು ಕೊಂಕುದೃಷ್ಟಿಯಲ್ಲಿ ನೋಡಬಾರದು ಎಂದು ಹೇಳುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೀರಾ? ಈ ವಿಚಾರಗಳ ಬಗ್ಗೆ ಎಲ್ಲರೂ ಯೋಚನೆ ಮಾಡಬೇಕಾಗಿದೆ. ಇನ್ನು ಮನೆಗಳಲ್ಲಿ ನಡೆಯುವ ಬೆಂಕಿ ಪ್ರಕರಣದ ಬಗ್ಗೆ ಹೇಳಬೇಕೆಂದರೆ ನಾನು ಒಮ್ಮೆ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ 717ರ ಪ್ರಕರಣದಲ್ಲಿ ದಾಖಲಾಗಿರುವ ರೋಗಿಗಳನ್ನು ನೋಡಿದೆ, ಸ್ಟೌವ್ ಸಿಡಿದು ಸೀಮೆಎಣ್ಣೆ ಮೈಗೆ ಬಿದ್ದು ಬೆಂಕಿ ಹಚ್ಚಿಕೊಂಡಿರುವವರಲ್ಲಿ ಬಹುತೇಕ ಮದುವೆಯಾಗಿರುವ ಯುವತಿಯರುಗಳೇ ಹೆಚ್ಚಿದ್ದರು. ಆಶ್ಚರ್ಯಕರ ಪ್ರಶ್ನೆಯೆಂದರೆ ಈ ಸ್ಟೌವ್ ಅತ್ತೆಯರಿಗೇಕೆ ಸಿಡಿದು ಬೆಂಕಿ ಹಚ್ಚಿಕೊಳ್ಳುವುದಿಲ್ಲ? ಅಲ್ಲಿದ್ದ ಯುವತಿಯರುಗಳಿಗೆ ಸ್ಟೌವ್ ಸಿಡಿಯಬೇಕೆ? ಅತ್ತೆಯರಿಗೇಕೆ ಸ್ಟೌವ್ ಸಿಡಿಯುವುದಿಲ್ಲ? ಕೆಲವರಿಗೆ ಮನೆಯಲ್ಲಿ ಅಡಿಗೆ ಮಾಡುವುದಕ್ಕೆ ಸೀಮೆಎಣ್ಣೆ ಸಿಗದಿದ್ದರೂ ಹೆಣ್ಣು ಮಗಳನ್ನು (ಸೊಸೆ) ಸುಡುವುದಕ್ಕೆ ಸೀಮೆಎಣ್ಣೆ ಸಿಗುತ್ತದೆ. ಹೆಣ್ಣು ಹುಟ್ಟಿದಾಗ ಮಗಳು, ನಂತರ ಸೋದರಿ, ಆಮೇಲೆ ಮಡದಿ, ಯಾರಿಗೋ ಸೊಸೆಯಾಗಿ ತದನಂತರದ ದಿನಗಳಲ್ಲಿ ಅವಳೇ ಅತ್ತೆಯಾಗುತ್ತಾಳೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವೆ) :— ಅತ್ತೆಯರಿಗೇಕೆ ಸ್ಟೌವ್ ಸಿಡಿಯುವುದಿಲ್ಲವೆಂದರೆ ನನಗನ್ನಿಸುವ ಹಾಗೆ ಸೊಸೆ ಬಂದ ತಕ್ಷಣ ಅಡಿಗೆ ಮನೆಯ ಜವಾಬ್ದಾರಿಯನ್ನು ಸೊಸೆಗೆ ಕೊಟ್ಟುಬಿಡುವುದರಿಂದ ಅತ್ತೆಗೆ ಸ್ಟೌವ್ ಸಿಡಿಯುವುದಿಲ್ಲವೇನೋ.

ಶ್ರೀ ಎಸ್. ಸುರೇಶ್ ಕುಮಾರ್ :— ನಾನು ಯಾವುದೇ ಒಂದು ಲೈಟರ್ ವೇನಲ್ಲಿ ಮಾತನಾಡುತ್ತಿಲ್ಲ. ಇಲ್ಲಿ ಹಾಸ್ಯಕ್ಕಿಂತ ಭಾವನೆಗಳು ಮುಖ್ಯವಾಗಿರುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸೀಮೆಎಣ್ಣೆ ಸ್ಟೌವ್‌ಗಳು ಅತ್ತೆಯ ಮನೆಯಲ್ಲಿಯೇ ಸಿಡಿಯುತ್ತದೆಯೇ ಹೊರತು ತವರು ಮನೆಯಲ್ಲಿ ಏತಕ್ಕೆ ಸಿಡಿಯುವುದಿಲ್ಲ ಎನ್ನುವುದು ಅದರ ಅರ್ಥ. ಸುರೇಶ್ ಕುಮಾರ್‌ರವರು ಹೇಳಿದ್ದು ಅದನ್ನೇ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನಭಂಗ ಮಾಡುವ ವ್ಯಕ್ತಿಗೆ ಆ ಹೆಣ್ಣಿನ ಬಗ್ಗೆ ತನ್ನ ಸೋದರಿಯ ಅಥವಾ ತಾಯಿಯ ಭಾವನೆ ಬರುವುದಿಲ್ಲವೋ ಅದೇ ರೀತಿಯಲ್ಲಿ ಸೊಸೆಗೆ ತೊಂದರೆ ಕೊಡುವಾಗ ತನ್ನ ಮಗಳಿಗೂ ಅತ್ತೆಯ ಮನೆಯಲ್ಲಿ ಇದೇ ರೀತಿ ತೊಂದರೆ ಬರಬಹುದು ಎಂದು ಅನ್ನಿಸುವುದೇ ಇಲ್ಲ. ಈ ನಿಟ್ಟಿನಲ್ಲಿ ನಾನು ಎರಡೇ ಎರಡು ಪ್ರಶ್ನೆ ಕೇಳುತ್ತೇನೆ. ಒಂದು ಕಾನೂನನ್ನೇನೋ ಮಾಡಿದ್ದಾರೆ, ಅದನ್ನು ಸ್ವಾಗತ ಮಾಡಬೇಕಾಗಿದೆ. ಏನೆಂದರೆ ಮದುವೆಯಾದ ಹೆಣ್ಣು 7 ವರ್ಷಗಳೊಳಗೆ ಅಸಹಜ ಮರಣಕ್ಕೆ ತುತ್ತಾದರೆ ಅದರ ಬಗ್ಗೆ ತಹಸೀಲ್ದಾರ್‌ರವರಿಂದ ವಿಚಾರಣೆ ಆಗಬೇಕು ಎನ್ನುವ ಕಾನೂನು ಬಂದಿದೆ. ಆದರೆ ಆ ಕಾನೂನು ಬಿಗಿಯಾಗಿ ಆಚರಣೆಯಲ್ಲಿಲ್ಲ. ಇದರಲ್ಲಿ ಯಾವ್ಯಾವುದೋ ರಾಜಕೀಯ ಒತ್ತಡದಿಂದಾಗಿ ಸರಿಯಾಗಿ ಆಚರಣೆಯಲ್ಲಿಲ್ಲ. ಕೇವಲ ಒಂದು ಪ್ರಕರಣಗಳಲ್ಲಾದರೂ ವರದಕ್ಷಿಣೆ ಸಾವು ಎಂದು ಹೇಳಿ ಇದಕ್ಕಾಗಿ ಇಂಥವರಿಗೆ ಶಿಕ್ಷೆಯಾಗಿದೆ ಎನ್ನುವ ಮೆಸೇಜ್ ಸೊಸೈಟಿಗೆ ಹೋಗಿಲ್ಲ. The message should go to the society and work as deterrant. ಇನ್ನು ಎರಡನೆಯ ವರ್ಗದ ಜನಗಳೂ ಇದ್ದಾರೆ, ಇವರು ವರದಕ್ಷಿಣೆ ಬೇಡ ಎಂದು ಹೇಳುವ ಹುಡುಗರಿಗೆ ಏನಾದರೂ ಐಬು ಇರಬಹುದು ಎಂದು ಹೇಳುವವರಾಗಿರುತ್ತಾರೆ. ಐಬು ಇರುವ ಕಾರಣದಿಂದ ಧಾರಾಳವಾಗಿ ನನಗೆ ವರದಕ್ಷಿಣೆ ಬೇಡ ಎಂದು ಮುಂದೆ ಬಂದಿದ್ದಾನೆ ಎನ್ನುತ್ತಾರೆ. ಇದು ಬಹಳ ವಿಚಿತ್ರ.

ಅಧ್ಯಕ್ಷರು :— ನಾನು ಒಮ್ಮೆ ಸ್ಟ್ಯಾಟ್ಯುಟರಿ ಕಮಿಟಿ ಅಡ್ರೆಸ್ ಮಾಡಿ ಮಾತನಾಡುವಾಗ ಸ್ವಲ್ಪ ಎಕ್ಸ್ಪ್ಲಿಸಿಟ್ ಆಗಿ ಹೇಳಿದೆ, ಏನೆಂದರೆ ಹುಡುಗ ವರದಕ್ಷಿಣೆ ಕೇಳಿದರೆ ನಿನಗೆಲ್ಲೋ ಆರೋಗ್ಯ ಸರಿ ಇಲ್ಲವೆಂದು ಕಾಣುತ್ತದೆ, ಅದಕ್ಕೋಸ್ಕರ ನೀನು ಹೆಂಡತಿ ಬೇಡ ಹಣವೇ ಬೇಕು ಎನ್ನುತ್ತಿದ್ದೀಯಾ, ಆದುದರಿಂದ ನೀನು ಷಂಡನಂತೆ. ಈ ರೀತಿಯ ವರನನ್ನು ಷಂಡರೆಂದೇ ಡಿಕ್ಲೇರ್ ಮಾಡಿ ಎಂದು ನಾನು ಹೇಳಿದ್ದೆ. ಸ್ವಲ್ಪ ದಿನಗಳಾದ ಮೇಲೆ ಕನ್ನಡ ದಿನಪತ್ರಿಕೆಯೊಂದರಲ್ಲಿ ಜೋಕ್ ಹಾಕಿದ್ದರು, ಅದರಲ್ಲಿ ಗಂಡ ಹೆಂಡತಿ ಡಾಕ್ಟರ್ ಹತ್ತಿರ ಹೋಗಿ ನಮಗೆ ಬಹಳ ದಿನಗಳಾದರೂ ಮಕ್ಕಳೇ ಆಗಲಿಲ್ಲವೆಂದು ಹೇಳಿದಾಗ ಡಾಕ್ಟರ್ ವರದಕ್ಷಿಣೆ ತೆಗೆದುಕೊಂಡಿದ್ದೀರಾ ಎಂದು ಪ್ರಶ್ನೆ ಹಾಕಿದ್ದಾರೆ, ಆ ಪ್ರಶ್ನೆಯ ಬ್ರಾಕೆಟ್‌ನಲ್ಲಿ ಸಭಾಧ್ಯಕ್ಷರು ಎಂದು ಇತ್ತು.

ಶ್ರೀ ಎಸ್. ಸುರೇಶ್ ಕುಮಾರ್ :— ಸಭಾಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಒಪ್ಪಲಿ ಅಥವಾ ಒಪ್ಪದಿರಲಿ, ಮದುವೆ ಎನ್ನುವುದು it is a bond; It is a partnership. ಅವರು ಪ್ರಕೃತಿ ಅಥವಾ ಇನ್ನೇನಾದರೂ ಹೇಳಬಹುದು. ಆದರೆ ಇದು ಒಂದು ರೀತಿಯ

ಪವಿತ್ರವಾದ ಬಂಧನವಾಗಿದೆ. ಆದರೆ ಇವೊತ್ತು it has become an investment for business. ಇವೊತ್ತು ವರದಕ್ಷಿಣೆ ಬಗ್ಗೆ ಪ್ರೈಸ್‌ಲಿಸ್ಟೇ ಹಾಕಿಬಿಟ್ಟಿದ್ದಾರೆ. ನಾನು ಹಾಗೇ ಸುಮ್ಮನೆ ಲೆಕ್ಕಾಚಾರ ಹಾಕಿದೆ. ಬೆಂಗಳೂರಿನಲ್ಲಿ ಸುಮಾರು 250 ಕಲ್ಯಾಣ ಮಂಟಪಗಳಿವೆ, ಇದರಲ್ಲಿ ಆಷಾಢ ಮಾಸ, ಶನಿವಾರ, ಮಂಗಳವಾರ, ಅಮಾವಾಸ್ಯೆ ಮದುವೆ ಮಾಡುವುದಿಲ್ಲವೆನ್ನುವುದನ್ನೂ ಪರಿಗಣಿಸಿದರೂ ಕೂಡ ಒಂದೊಂದು ಕಲ್ಯಾಣ ಮಂಟಪದಲ್ಲೂ 100 ಮದುವೆಗಳು ನಡೆಯುತ್ತದೆ ಎಂದು ಲೆಕ್ಕ ಹಾಕಿದರೂ ಕೂಡ ಒಟ್ಟು 25000 ಮದುವೆಗಳು ನಡೆಯುತ್ತದೆ. ನಾನು ಇದರಲ್ಲಿ ಚರ್ಚ್‌ನಲ್ಲಿ ನಡೆಯುವ ಮದುವೆ ಮತ್ತು ಆರ್ಯಸಮಾಜ ಮತ್ತು ಇನ್ನಿತರ ಕಡೆ ನಡೆಯುವ ಮದುವೆಗಳನ್ನು ಸೇರಿಸಿಲ್ಲ. ಇದನ್ನು ಬಿಟ್ಟರೆ 25000 ಮದುವೆ. ಒಂದೊಂದು ಮದುವೆಗೂ ಸರಾಸರಿ ಒಂದು ಲಕ್ಷ ರೂ.ಗಳನ್ನು ಅನಗತ್ಯ ಖರ್ಚಿನ ವ್ಯಾಪ್ತಿಯಲ್ಲಿ ಸೇರಿಸಿದರೆ 250 ಕೋಟಿ ರೂ.ಗಳಾಗುತ್ತದೆ. ಆ 250 ಕೋಟಿ ರೂ.ಗಳನ್ನು ನನಗೆ ಕೊಟ್ಟರೆ ಬೆಂಗಳೂರಿಗೆ ಬೇಕಾಗುವ ಮೂಲಭೂತ ಕಾರ್ಯಗಳನ್ನು ಒಂದು ವರ್ಷದಲ್ಲಿ ನಾನು ಪೂರೈಸುತ್ತೇನೆ. ನಾನು ಕ್ಯಾಲ್ಕುಲೇಷನ್‌ಗೋಸ್ಕರ ಹೇಳುತ್ತಿದ್ದೇನೆ. ಆದರೆ ಇವೊತ್ತು ಅದನ್ನು ರೆಸಿಸ್ಟ್ ಮಾಡುವ ಕೆಪ್ಯಾಸಿಟಿ ಎಷ್ಟಿದೆ? ನಾವು ಇಂದು ಅಧಿಕಾರ ಸ್ಥಾನದಲ್ಲಿದ್ದೇವೆ, ಮಂತ್ರಿಗಳಾಗಿರಬಹುದು ಅಥವಾ ಶಾಸಕರುಗಳಾಗಿರಬಹುದು, ನಾವು ಇವೊತ್ತು ಅದರ ಬಗ್ಗೆ ಡಿಸೈಡ್ ಮಾಡುತ್ತೇವೆಯೇ We will become a role model to the society. ಇವನ ಹತ್ತಿರ ಹಣವಿದ್ದರೂ ಕೂಡ ಮಗಳ ಮದುವೆಯನ್ನು ಬಹಳ ಸರಳವಾಗಿ ಮಾಡಿದ ಎಂದು ಹೇಳುವ ತಾಕತ್ತು ನಮ್ಮ ಹತ್ತಿರ ಇದೆಯೇ? ನಮ್ಮ ಹತ್ತಿರ ಆ ತಾಕತ್ತು ಇಲ್ಲದಿರುವಾಗ ಯಾರೋ ಬೀದಿಯಲ್ಲಿ ಹೋಗುವ ಬಡವರಿಂದ ಹೇಗೆ ಎಕ್ಸ್‌ಪೆಕ್ಟ್ ಮಾಡುವುದಕ್ಕಾಗುತ್ತದೆ? ಇಂದು ಮಹಿಳಾ ಆಯೋಗವೇನಿದೆ ಅದನ್ನು ಹೆಚ್ಚು ಶಕ್ತಿಯುತವನ್ನಾಗಿ ಮಾಡಬೇಕಾಗಿದೆ. ಇದಲ್ಲದೇ ನಾನೇನು ಸುಪ್ರೀಕೋರ್ಟ್ ತೀರ್ಮಾನವನ್ನು ಹೇಳಿದೆ ಅದನ್ನು ಎಲ್ಲಾ ಉದ್ಯೋಗಸ್ಥ ಕೇಂದ್ರಗಳಲ್ಲಿ ಪ್ರಚಾರ ಮಾಡಿ ಜನತೆಗೆ ಗೊತ್ತಾಗುವ ಹಾಗೆ ಮಾಡಬೇಕು. ಇಂದು ಸಮೂಹ ಮಾಧ್ಯಮಗಳನ್ನು ನೀವು ಉಪಯೋಗಿಸಿಕೊಂಡು ಮಹಿಳೆಯರಿಗೆ ಸ್ವಾಭಿಮಾನ ಹಾಗೂ ಅರಿವು ಮೂಡುವಂತೆ ಮಾಡಬೇಕು. ಆದರೆ ಇಂದಿನ ಸಮೂಹ ಮಾಧ್ಯಮಗಳಲ್ಲಿ ಮಹಿಳೆಯನ್ನು ಇನ್ನಷ್ಟು ಲೈಂಗಿಕ ವಸ್ತುವೆಂದು ತೀರ್ಮಾನ ಮಾಡುವಂತೆ ಜಾಹಿರಾತುಗಳು ಬರುತ್ತಿವೆ. ಅದು ಧಾರವಾಹಿ ಇರಬಹುದು ಅಥವಾ ಜಾಹಿರಾತಿನ ರೂಪವಿರಬಹುದು. ಚಾಕಲೇಟ್‌ಗೂ ಲೈಂಗಿಕತೆಗೂ ಏನು ಸಂಬಂಧ? ಆದರೆ ಅದಕ್ಕೆ ಹೆಣ್ಣೇ ಬರಬೇಕು. ಅವಳು ಬಂದು ಅದರ ಬಗ್ಗೆ ಅಪೀಲ್ ಮಾಡಬೇಕು. ಇದರ ವಿರುದ್ಧ ಕೂಡ ಶಾಸನಸಭೆಯ ಜೊತೆಯಲ್ಲಿ ಸಮಾಜದಲ್ಲಿ ಕೂಡ ಒಂದು ರೀತಿಯ ಮಾನಸಿಕ ಪರಿವರ್ತನೆಯನ್ನು ತರುವುದಕ್ಕಾಗಿ ಆಂದೋಳನದ ಅಗತ್ಯತೆ ಇದೆ. ಈ ದೃಷ್ಟಿಯಿಂದ ಸರ್ಕಾರದ ಮುಂದೆ ಇರುವ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) :— ಸನ್ಮಾನ್ಯ ಅಧ್ಯಕ್ಷರೇ, ಇಷ್ಟೊತ್ತು ಬಹಳ ಸದಸ್ಯರು ಮಾತನಾಡಿದರು. ಇದು ಕಡಿಮೆ ಆಗಬೇಕಾದರೆ a family must learn how to live -the art of living. ಎರಡನೆಯದು ಮೋಜಿನ ಜೀವನ ಬಿಡಬೇಕು, ಸರಳ ಜೀವನ ಮಾಡುವುದನ್ನು ಕಲಿಯಬೇಕು. ಮೂರನೆಯದು ಪ್ರಾಕೃತಿಗೆ ಹೊಂದಿಕೊಂಡು ಹೋಗುವಂತಹ ಜೀವನ ಮಾಡಿದರೆ ಈ ಸಮಸ್ಯೆಗಳು ಕಡಿಮೆಯಾಗುತ್ತವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು :— ಈಗ ವಾಟಾಳ್ ನಾಗರಾಜ್‌ರವರೇ ತಾವು ಮಾತನಾಡಿ. ತಾವು ಬೇಗ ಮಾತನಾಡಿ. ಮಂತ್ರಿಗಳು ರಿಪ್ಲೆ ಕೊಡುತ್ತಾರೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೇ, ಇಂದು ಒಂದು ಬಹಳ ಮಹತ್ತರವಾದಂತಹ ವಿಚಾರವನ್ನು ತಾವು ಚರ್ಚೆಗೆ ತೆಗೆದುಕೊಂಡಿದ್ದೀರಿ. ಕೇವಲ ಇದು ನಾಲ್ಕು ಗಂಟೆ ಚರ್ಚೆ ಆಗುವುದರಿಂದ ಸಮಗ್ರವಾಗಿ ಪರಿಸ್ಥಿತಿಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಏನೋ ಒಂದು ರೀತಿ ಚರ್ಚೆಯಲ್ಲಿ ಹೇಳಿಕೊಂಡೆವು ಎನ್ನುವ ಭಾವನೆ ವ್ಯಕ್ತಪಡಿಸಬಹುದು ಅದು ಬಿಟ್ಟರೆ ಇದನ್ನು ಸಮಗ್ರವಾಗಿ ಮಹಿಳೆಯರಿಗೆ ಆಗತಕ್ಕಂಥ ಅವರ ಹಕ್ಕುಗಳ ರಕ್ಷಣೆ ಮಾಡುವುದಕ್ಕೆ ಮೂರ್‍ನಾಲ್ಕು ಗಂಟೆ ಚರ್ಚೆ ಮಾಡಿ ಅದಕ್ಕೆ ಸರ್ಕಾರ ಉತ್ತರ ಕೊಟ್ಟುಬಿಟ್ಟರೆ ಅದು ತೀರ್ಮಾನವಾಗತಕ್ಕಂಥ ಪ್ರಶ್ನೆ ಅಲ್ಲ. ಇದು ಶತಶತಮಾನಗಳಿಂದ ಮಹಿಳೆಯರು ತುಳಿತಕ್ಕೆ ಸಿಕ್ಕಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅವರು ಬಹಳ ಎಚ್ಚರವಾಗಿದ್ದಾರೆ. ಬಹಳ ಹಿಂದೆ ಮಹಿಳೆಯರ ಸ್ವಾತಂತ್ರ್ಯಕ್ಕೆ ಅಕ್ಕಮಹಾದೇವಿ ಬಹಳ ಒಳ್ಳೆಯ ಕೊಡುಗೆಯನ್ನು ಕೊಟ್ಟಿದ್ದಾರೆ. ಕೇವಲ ಮಹಿಳೆಯರಿಗೆ ಅಷ್ಟೆ ಅಲ್ಲ. ಪುರುಷರಿಗೂ ಕೂಡ ಸಮಾನವಾದ ಹಕ್ಕನ್ನು ಕೊಟ್ಟಿದ್ದಾರೆ. ಅಕ್ಕಮಹಾದೇವಿಯವರು ಒಂದು ಕಡೆ ಒಂದು ಮಾತನ್ನು ಹೇಳುವಾಗ ಲಿಂಗ ಭೇದವನ್ನು ಧಿಕ್ಕರಿಸುವ ನಿರ್ಲಿಂಗ ವಾದಿ. ಗಂಡಸರು, ಹೆಂಗಸರು ಯಾವುದೂ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸ್ತ್ರೀ ಪುರುಷರ ಬಗೆಗಿನ ಅವಳ ನಿಲುವು ಆಧ್ಯಾತ್ಮಿಕ ನೆಲೆಯಿಂದ ಹುಟ್ಟಿದುದಾಗಿದೆ. ಶರಣರು ಹೇಳುವ ಮೊಲೆ ಮೂಡಿ ಬಂದರೆ ಹೆಣ್ಣು ಎಂಬರು, ಗಡ್ಡ ಮೀಸೆ ಬಂದರೆ ಗಂಡು ಎಂಬರು. ನಡುವೆ ಸುಳಿವಾತ್ಮ ಹೆಣ್ಣು ಅಲ್ಲ, ಗಂಡು ಅಲ್ಲ ಎಂಬ ವಚನದಂತೆ ಗಂಡು ಮೇಲು ಹೆಣ್ಣು ಕೀಳು ಎಂಬ ಸಾಮಾಜಿಕ, ಧಾರ್ಮಿಕ ಹಾಗೂ ಎಲ್ಲಾ ರೀತಿಯ ಅಸಮಾನತೆಗಳು ಅರ್ಥಹೀನ ಎನ್ನುವ ಮಾತನ್ನು ಅಕ್ಕಮಹಾದೇವಿ ಅವರು ತಮ್ಮ ವಚನದಲ್ಲಿ ಮಾಡಿದ್ದಾರೆ.

ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ರೂಪದಲ್ಲಿ ಕಾಡಿತ್ತು.
ಸ್ತ್ರೀ ಮುಂದೆ ಮಾಯೆ ಪುರುಷನ ಅಭಿಮಾನವಾಗಿ ಕಾಡಿತ್ತು.

ಎಂದರೆ ಪುರುಷ ಮತ್ತು ಮಹಿಳೆಯರನ್ನು ಅಕ್ಕಮಹಾದೇವಿ ಸಮಾನತೆಯಿಂದ ಅವರು ಆಕಾರ ತಂದಿದ್ದಾರೆ. ಮತ್ತು ಮಹಿಳೆಯರಿಗೆ ಒಂದು ಹೆಚ್ಚಿನ ಶಕ್ತಿಯನ್ನು ತಂದಂತಹ

ಅಕ್ಕಮಹಾದೇವಿಯವರು ಈಗ ಇಲ್ಲಿ ನಾವು ಹೆಣ್ಣುಮಕ್ಕಳಿಗೆ ಶೋಷಣೆ ಮಾಡುತ್ತಾ, ಬರೀ ಗಂಡಸರಿಗೆ ಯಾವುದೋ ಒಂದು ದೃಷ್ಟಿಗಿಂತ ಹೆಚ್ಚಾಗಿ ನಮ್ಮ ಧರ್ಮ ನಮ್ಮ ಸಂಸ್ಕೃತಿ ನಮ್ಮ ಅನೇಕ ಕಂದಾಚಾರಗಳು ಮೂಢ ನಂಬಿಕೆಗಳು ಇವತ್ತು ಹೆಣ್ಣುಮಕ್ಕಳನ್ನು ಇವತ್ತು ಒಂದು ಕೂಪಕ್ಕೆ ಇಳಿಸುತ್ತಿದ್ದೇವೆ. ಎರಡು ವಿಚಾರದಲ್ಲಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಸಮಾಜದಲ್ಲಿ ನಮ್ಮ ಧರ್ಮದಲ್ಲಿ ಒಬ್ಬ ಮಹಿಳೆ ಮದುವೆಯಾಗಿದ್ದರೆ ಗಂಡಹೆಂಡತಿ ಇಬ್ಬರು ಇದ್ದಾಗ ಅವಳಿಗೆ ಮುತ್ತೈದೆ ಎಂದು ಕರೆಯುತ್ತಾರೆ. ಎಂದರೆ ನಮ್ಮ ಧರ್ಮದಲ್ಲಿ ಆಕೆ ಮುತ್ತೈದೆ ಎಂದರೆ ಬಹಳ ಸರ್ವ ಶ್ರೇಷ್ಠವಾದಂತಹ ಒಂದು ಸ್ಥಾನವನ್ನು ಕೊಟ್ಟಿದ್ದೇವೆ. ಗಂಡ ತೀರಿಕೊಂಡರೆ ಅವಳಿಗೆ ಇದ್ದಂತಹ ಎಲ್ಲಾ ಸ್ವಾತಂತ್ರ ಹೊರಟು ಹೋಗುತ್ತದೆ. ಸ್ವಾತಂತ್ರ್ಯ ಎಂದರೆ ಆ ನರಕದ ವ್ಯವಸ್ಥೆ ಇದೆಯಲ್ಲಾ ಅದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಅದನ್ನು ಯಾವ ಧರ್ಮದಲ್ಲಿ ಯಾರಿಗಾಗಿ ಅದನ್ನು ವ್ಯವಸ್ಥೆ ಮಾಡಿದರು ಎಂದು ಯೋಚನೆ ಮಾಡುವುದಕ್ಕೆ ಹೋದರೆ ನರಕ ಇದ್ದರೆ, ನನ್ನ ದೃಷ್ಟಿಯಲ್ಲಿ ನರಕನೂ ಇಲ್ಲ, ಸ್ವರ್ಗನೂ ಇಲ್ಲ. ಆದರೆ ನರಕ ಇದ್ದರೆ ಅದು ನರಕದ ಸ್ವರೂಪವೇ. ಗಂಡನನ್ನು ಕಳೆದುಕೊಂಡಂತಹ ಒಬ್ಬ ಮಹಿಳೆ ಅವಳ ಪರಿಸ್ಥಿತಿ ಆ 12ನೇ ದಿನದಲ್ಲಿ ಕೊಡತಕ್ಕಂಥ ಆ ಚಿತ್ರಹಿಂಸೆ ಇದೆಯಲ್ಲ ಅದು ಸಮಾಜದಲ್ಲಿ ಕಿತ್ತು ಒಗೆಯತಕ್ಕಂಥ ಒಂದು ಹೊಸ ಕ್ರಾಂತಿ ಆಗಬೇಕು. ಒಂದೊಂದು ಸಮಾಜದಲ್ಲಿ ಆ ಮಹಿಳೆಯನ್ನು ನೋಡತಕ್ಕಂಥ ವ್ಯವಸ್ಥೆ ಬಗ್ಗೆ ತಾವು ನೋಡಿದರೆ 12ನೇ ದಿನದಲ್ಲಿ ಆಕೆಗೆ ಒಂದು ಮೊರದ ಕುಂಕುಮ, ಆಕೆಗೆ ಒಂದು ಗಾಡಿಯಷ್ಟು ಹೂವು, ಆಕೆಗೆ ಕೈತುಂಬಾ ಬಳೆ, ಅದನ್ನು ಒಡೆಯುತ್ತಾರೆ, ಆ ದೃಶ್ಯ ಇದೆಯಲ್ಲಾ, ಬಳೆ ಒಡೆಯುವುದು, ಹೂವು ಹಾಕುವುದು, ಕುಂಕುಮ ಸುರಿದು 13ನೇ ದಿನ ಆಕೆಯನ್ನು ಕರೆಯತಕ್ಕಂಥ ಹೆಸರು ಏನು? ವಿಧವೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್:— ಮಾನ್ಯ ಅಧ್ಯಕ್ಷರೇ, ಆ ಪದ್ಧತಿ ಈಗೀಗ ಹೋಗುತ್ತಿದೆ. ಈಗ ಹುಡುಗಿಯರು ಮದುವೆ ಆಗುವ ಮೊದಲೇ ಹೂವು, ಮುಡಿಯುತ್ತಾರೆ, ಕುಂಕುಮ ಹಚ್ಚುತ್ತಾರೆ, ಬಳೆಯನ್ನು ಹಾಕುತ್ತಾರೆ. ಮದುವೆಯಾದರೆ ತಾಳಿ ಕಟ್ಟುತ್ತಾರೆ ಎನ್ನುವ ಒಂದೇ ಕಾರಣಕ್ಕೆ ತಾಳಿ ತೆಗೆಯುತ್ತಾರೆ. ಆ ತರಹದ ಭಾವನೆ ಬಹಳಷ್ಟು ಜನರಿಗೆ ಇರುವುದರಿಂದ ಅದನ್ನು ಲೆಕ್ಕಕ್ಕೆ ಇಡುವುದಿಲ್ಲ. ತಾವು ಏನು ಹೇಳುತ್ತಿದ್ದೀರಿ, ಅದನ್ನು ಈಗಲೂ ಮಾಡುತ್ತಾರೆ. ಆದರೆ ಅದು ಲೆಕ್ಕಕ್ಕೆ ಇಲ್ಲ. ಅದೆಲ್ಲಾ ಪದ್ಧತಿಗಳು ಬೇಕಾಗಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೇ, ಮದುವೆಯಾದರೆ ಹೆಣ್ಣುಮಕ್ಕಳಿಗೆ ಮಾತ್ರ ತಾಳಿ. ಪುರುಷ ಮದುವೆಯಾದ ಎನ್ನುವುದಕ್ಕೆ ಏನೂ ಇಲ್ಲ. ಅದರ ಅರ್ಥ ಏನೆಂದರೆ ಮುನ್ಸಿಪಾಲಿಟಿ ನಾಯಿಗೆ ಬ್ಯಾಡ್ಜ್ ಕಟ್ಟುತ್ತಾರಲ್ಲಾ ಈ ರೀತಿ ಕಂಡ ಹಾಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:— ಮಹಿಳೆಯರನ್ನು ನಾವು ಮೂಢ ನಂಬಿಕೆಗಳ ಒಂದು ದೃಷ್ಟಿಯಿಂದ...

ಅಧ್ಯಕ್ಷರು :— ಇದು ಮೂಢನಂಬಿಕೆ ಅಲ್ಲ. ನೀಚ ಆಲೋಚನೆ. ಪೌರೋಹಿತರಾಹಿ ವ್ಯವಸ್ಥೆಯಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಅವಳ ಶೀಲವನ್ನು ಶಂಕಿಸಿ, ಅವಳ ರೂಪವನ್ನು ವಿಕಾರವಾಗಿ ಕಾಣುವಂತೆ ಮಾಡುವುದು, ಅವಳಿಗೆ ವೈಧವ್ಯ ಪ್ರಾಪ್ತ ಮಾಡುವುದು, ಒಟ್ಟು ಅವಳು ವಿಕಾರವಾಗಿ ಕಾಣಬೇಕು. ಅವಳು ಯಾರನ್ನು ಕೂಡ ಆಕರ್ಷಿಸಬಾರದೆನ್ನುವ ದುರುದ್ದೇಶದಿಂದ ಮಾಡಿರುವುದು. ಆದರೆ ಇವನು ಎಲ್ಲಿಬೇಕಾದರೂ ಹೋಗಬಹುದು. ಅವಳಿಗೆ ಮಾತ್ರ ರಿಸ್ಟ್ರಿಕ್ಟ್ ಮಾಡುವುದು.

ಶ್ರೀ ವಾಟಾಳ್ ನಾಗರಾಜ್:— ಆ ಶೋಷಣೆ ಮೊದಲು ತಪ್ಪಬೇಕು. ಕೆಲವು ಸಮಾಜದಲ್ಲಿ ಗಂಡ ಸತ್ತರೆ ಹೆಂಡತಿ ಸಮಾಧಿಗೆ ಹೋಗುವ ಹಾಗೆ ಇಲ್ಲ. ಎರಡನೆಯದಾಗಿ ಸಂಪೂರ್ಣವಾಗಿ ಸುಂದರವಾದಂತಹ ಕೂದಲನ್ನು ತೆಗೆದು ಒಂದು ಮೂಲೆಯಲ್ಲಿ ಕೂರಿಸುವುದು.

ಅಧ್ಯಕ್ಷರು :— ಈಗ ಆ ರೀತಿ ಮಾಡುವುದಿಲ್ಲ. ಈಗ ಅದು ಕಡಿಮೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್:— ನಡೆಯುತ್ತಿದೆ. ಅದು ಸರಿಯಿಲ್ಲ. ಅದಕ್ಕೆ ಆ ರೀತಿ ಮಾಡಿದರೆ ಶಿಕ್ಷೆ ಮಾಡುತ್ತೇವೆ ಎಂದು ಕಾನೂನು ತರಬೇಕು. ಆ ರೀತಿ 12ನೇ ದಿವಸದಲ್ಲಿ ಬಳೆ ಹಾಕಿ, ಕುಂಕುಮ ಹಾಕಿ, ತಲೆಗೆ ಹೂವು ಮುಡಿಸಿ ಆಕೆಗೆ ಹಾಗೆ ಮಾಡಿದರೆ ಅಂತಹವರಿಗೆ ಆರು ತಿಂಗಳು ಕಠಿಣ ಸಜಾ, ಜೈಲಿಗೆ ಹಾಕುತ್ತೇವೆ ಎಂದು ಕಾನೂನು ತರಬೇಕಲ್ಲಾ.

ಅಧ್ಯಕ್ಷರು :— ಒಳ್ಳೆಯ ಸಲಹೆ.

ಶ್ರೀ ವಾಟಾಳ್ ನಾಗರಾಜ್:— ತಲೆಯನ್ನು ಬೋಳಿಸಿ, ಮೂಲೆಯಲ್ಲಿ ಯಾರು ಕೂರಿಸುತ್ತಾರೆ ಅಂಥವರನ್ನು ಕಂಡರೆ ಆರು ತಿಂಗಳು ಜೈಲಿಗೆ ಹಾಕುತ್ತೇವೆ ಎಂದು ಮಾಡಬೇಕು. ಮತ್ತು ಮಹಿಳೆಯರ ಮೇಲೆ ನಡೆಯತಕ್ಕಂಥ ಅನೇಕ ದೌರ್ಜನ್ಯಗಳನ್ನು ನ್ಯಾಯಾಲಯದ ಮುಂದೆ ಮಂಡಿಸುತ್ತೇವೆ. ನ್ಯಾಯಾಲಯ ಕೊಡತಕ್ಕಂಥ ತೀರ್ಪು ಯಾವಾಗ 10-12 ವರ್ಷ 15 ವರ್ಷ ಆದ ಮೇಲೆ ನಡೆಯುತ್ತದೆ. ಅದಕ್ಕೆ ಒಂದು ಕಾಲಮಿತಿ ಮಾಡಿ ಇಷ್ಟು ದಿವಸಕ್ಕೆ ವಿವಾಹ ವಿಚ್ಛೇದನಕ್ಕೆ ಒಂದು ಅರ್ಜಿಯನ್ನು ಹಾಕಿದಾಗ ಕೇವಲ ಒಂದು ಆರು ತಿಂಗಳೊಳಗಾಗಿ ಇತ್ಯರ್ಥವಾಗಬೇಕು. ಆರು ತಿಂಗಳ ಮೇಲೆ ನಡೆಯಕೂಡದು ಎನ್ನುವಂತಹ ಒಂದು ಪ್ರಶ್ನೆ ಮಾಡಬೇಕು. ಒಂದು ಸಮಾನವಾದ ಹಕ್ಕು ಎಂದು ಹೇಳಿದರೆ ನಮ್ಮ ಆಸ್ತಿಯಲ್ಲಿ ಏನು ಗಂಡುಮಕ್ಕಳಿಗೆ ಕೊಡುತ್ತಾರೆ, ಹೆಣ್ಣುಮಕ್ಕಳಿಗೂ ಕೂಡ ಆಸ್ತಿಯಲ್ಲಿ ಹಕ್ಕನ್ನು ಎಲ್ಲಾ ವಿಚಾರದಲ್ಲಿ ಕೊಡುವಂತಹ ಕೆಲಸವನ್ನು ನಾವು ಮಾಡಬೇಕು. ಆದರೆ ಗಾದೆಗಳು ಇದೆ, ಅತ್ತೆಗೆ ಒಂದು ಕಾಲ, ಸೊಸೆಗೆ ಒಂದು ಕಾಲ ಎಂದು. ಅತ್ತೆ ಎಷ್ಟೇ ಪ್ರಭಾವಿ ಆಗಿದ್ದರೂ ಕೂಡ ಸೊಸೆ ಬಂದಮೇಲೆ

ಅತ್ತೆ ಮೇಲೆ ಕಾಡತಕ್ಕಂಥಾದ್ದು ಇದೆಯಲ್ಲಾ ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆ ಕಷ್ಟನೂ ಉಂಟು. ತಾವು ಹೇಳಿದ ಹಾಗೆ ಮಹಿಳೆಯರನ್ನು ನಾವು ಯಾವ ಧೃಷ್ಟಿಯಲ್ಲಿ ನೋಡುತ್ತಿದ್ದೇವೆ. ಈ ವ್ಯವಸ್ಥೆ ಬದಲಾಗತಕ್ಕಂಥ ಒಂದು ಕ್ರಾಂತಿಕಾರಿಯಾದಂತಹ ಬದಲಾವಣೆಯಾಗಬೇಕು. ಮತ್ತು ಅಂತರ್ಜಾತಿ ವಿವಾಹದ ಬಗ್ಗೆ ತಾವು ಕೇಳಿರಬಹುದು. ಮಗ ಅಂತರ್ಜಾತಿ ವಿವಾಹ ಆದತಕ್ಷಣ ಮಾವನಿಗೆ ಕೋಪ ತಾಪ ಬಂದು ಸೊಸೆಯನ್ನು ಬರೀ ವಿಷ ಹಾಕಿ ಕೊಲ್ಲುವುದಿಲ್ಲ. ಬೆರಳು ಕತ್ತರಿಸಿ, ಕೈ ಕತ್ತರಿಸಿ, ತಲೆ ಕತ್ತರಿಸಿ, ಎಲ್ಲಾ ಮಾಂಸದ ಮುದ್ದೆ ಮಾಡಿ ಎಲ್ಲೋ ಎಸೆಯುತ್ತಾನೆ. ಇದು ನಮ್ಮ ಕರ್ನಾಟಕದಲ್ಲಿ ಬೆಂಗಳೂರಿನ ಬಸವೇಶ್ವರ ನಗರದಲ್ಲಿ ನಡೆದಿದ್ದು. ನ್ಯಾಯಾಲಯ ಯಾವುದೋ ಒಂದು ಮೂಳೆಯ ಮುಖಾಂತರ ಪತ್ತೆ ಹಚ್ಚಿ ಅತ್ತೆಗೆ, ಮಾವನಿಗೆ, ಹಾಗೂ ಮಗನಿಗೆ ಜೀವಾವಧಿ ಶಿಕ್ಷೆ ಮಾಡುತ್ತಾರೆ. ಅವರು ಬಹಳ ದೊಡ್ಡ ಪಂಡಿತರು. ವಿದ್ಯಾವಂತರು.

ಅಧ್ಯಕ್ಷರು :— ಅವರು ಅಗ್ರಿಕಲ್ಚರ್ ಯೂನಿವರ್ಸಿಟಿ ಪ್ರೊಫೆಸರ್. ಬೀನಾ ಕೇಸ್ ಬಗ್ಗೆ ನೀವು ಹೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ :— ಇದು ಸಮಾಜದಲ್ಲಿ ಎಷ್ಟೋ ಶತಮಾನಗಳ ಹಿಂದೆ ನಡೆದಿದ್ದಲ್ಲ. ಇತ್ತೀಚೆಗೆ ಜರುಗಿದ ಘಟನೆಯಾಗಿದ್ದು ಕೃಷಿ ವಿಶ್ವವಿದ್ಯಾನಿಲಯದ ಒಬ್ಬ ಮಹಾ ಪಂಡಿತ ಮಾಡಿದ ಅಪರಾಧವನ್ನು ಒಬ್ಬ ಮಹನೀಯ ಪತ್ರಕರ್ತರಿಂದ ತಪ್ಪಿತಸ್ಥರೆಲ್ಲರೂ ಇವೊತ್ತು ಜೈಲಿನಲ್ಲಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಅನೇಕ ವಿಚಾರವಾಗಿ ನಾವು ಶಾಸನಗಳನ್ನು ತರುತ್ತೇವೆ. ಇದರ ಬಗ್ಗೆಯೂ ನಾವು ಸ್ಪಷ್ಟವಾಗಿ ಪರಿಣಾಮಕಾರಿಯಾಗಿ ಶಾಸನಗಳನ್ನು ತರುವುದರ ಮೂಲಕ ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನಿಲ್ಲಿಸುವುದಕ್ಕೆ ಕ್ರಮ ಕೈಗೊಳ್ಳುವಂತಾಗಬೇಕು. ಅದು ಬಿಟ್ಟು ಈ ಕುರಿತ ಅಧ್ಯಯನಕ್ಕೆ ಸದನ ಸಮಿತಿ ರಚಿಸಿ ತಮಿಳುನಾಡಿಗೋ, ಆಂಧ್ರಪ್ರದೇಶಕ್ಕೋ, ವಿದೇಶಕ್ಕೆ ಹೋಗಿ ಬಂದರೆ ಸಮಸ್ಯೆ ಬಗೆಹರಿದಂತಾಗುವುದಿಲ್ಲ. ಈ ಸದನದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿಯೇ ಈ ಸರ್ಕಾರ ಒಂದು ಶಾಸನ ತರಲಿ ಮತ್ತು ಯಾವ್ಯಾವ ರೀತಿಯ ಶಾಸನಗಳನ್ನು ತರಬೇಕೆಂಬ ಬಗ್ಗೆ ಒಂದು ಜಂಟಿ ಸಲಹಾ ಸಮಿತಿಯನ್ನು ರಚಿಸಿ ಅದರಲ್ಲಿ ತರಲು ಉದ್ದೇಶಿಸಿರುವ ಶಾಸನಗಳನ್ನು ತಾವು ಪಟ್ಟಿ ಮಾಡಿ ಆ ಶಾಸನಗಳ ಮುಖಾಂತರ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಗಟ್ಟಲು ನಾವು ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕು. ಆದರೆ, ಒಂದು ವಿಚಾರವೇನೆಂದರೆ, ಬರೀ ಮಹಿಳೆಯರಿಗೇ ಅನ್ಯಾಯವಾಗುತ್ತದೆಂದಲ್ಲ, ಮಹಿಳೆಯಿಂದ ಪುರುಷರಿಗೂ ಅನ್ಯಾಯವಾಗುತ್ತಿರುವ ಅಂಶ ಎಲ್ಲಿಯೋ ಒಂದು ಕಡೆ ಇದೆ. ಇದರ ಬಗ್ಗೆ ಭಯ, ಭೀತಿಯಿಂದ ಮಾತನಾಡತಕ್ಕಂಥ ವ್ಯವಸ್ಥೆಗೆ ಹೋಗಬಾರದು ಅಲ್ಲದೆ ಇದನ್ನು ನಾವು ತಳ್ಳಿಹಾಕುವಂತೆಯೂ ಇಲ್ಲ. ಎಷ್ಟೋ ಜನ ಪುರುಷರು ಮನೆಗೆ ಹೋದ ತಕ್ಷಣ ಹೆಂಡತಿಯರ ಕಾಲಿಗೆ ಬಿದ್ದಿರುವುದುಂಟು! ಕೈಮುಗಿದಿರುವುದುಂಟು! ಹೆದರಿರುವುದೂ ಉಂಟು!

ಶ್ರೀಮತಿ ಪ್ರಮೀಳಾ ನೇಸರ್ಗಿ :— ತಪ್ಪು ಮಾಡಿದಾಗ ಆ ತರಹ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :— ಒಂದು ಕಡೆ ಮಾತ್ರ ದೃಷ್ಟಿಯಿಟ್ಟುಕೊಂಡು ಮಾತನಾಡುವುದು ಬೇಡ. ಮಹಿಳೆಯರಿಂದ ಪುರುಷರಿಗೂ ಅನ್ಯಾಯವಾಗುತ್ತಿರುವುದು ಉಂಟಲ್ಲಾ, ಗಂಡಂದಿರ ಮೇಲೂ ಶೋಷಣೆ ನಡೆದಿದೆಯಲ್ಲಾ!

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ಅದೂ ಸಾಧ್ಯವಿದೆ. ಏಕೆಂದರೆ, ಕಾನೂನಿನ ದುರುಪಯೋಗವಾಗಬಾರದು. ಎಷ್ಟೋ ಬಾರಿ ಪುರುಷರು ನನ್ನ ಹತ್ತಿರ ಬಂದು ನೋಡಿ, ಅವರು ಹೆದರಿಸುತ್ತಿದ್ದಾರೆ. ವರದಕ್ಷಿಣೆ ಕೇಳಿದೆನೆಂದು ನನ್ನ ಮೇಲೆ ಸುಳ್ಳು ಕೇಸು ಹಾಕುತ್ತಿದ್ದಾರೆ. ಎಂದು ಹೇಳುತ್ತಾರೆ. ಈ ತರಹ ಮಹಿಳೆಯಿಂದ ಪುರುಷರಿಗೂ ಅನ್ಯಾಯವಾಗುತ್ತಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಶೇಕಡಾ 90ರಷ್ಟು ಅನ್ಯಾಯಗಳು ಪುರುಷ ವರ್ಗದವರಿಂದಲೇ ಮಹಿಳೆಯರ ಮೇಲಾಗುತ್ತದೆ ಮತ್ತು ಶೇಕಡ 10ರಷ್ಟು ಅನ್ಯಾಯ ಮಹಿಳೆಯರಿಂದ ಪುರುಷರ ಮೇಲಾಗುತ್ತದೆನ್ನುವ ಮಾತನ್ನು ಎಲ್ಲರೂ ಒಪ್ಪಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ :— ಅದು ಎಷ್ಟು ಭಯಾನಕವಾಗಿರುತ್ತದೆಂದರೆ ಅದರ ಒಂದೊಂದು ಅಂಶವನ್ನು ವರ್ಣಿಸುವುದಕ್ಕೆ ಹೋಗುವುದು ಸರಿಯಲ್ಲ ಎಂದೆನಿಸುತ್ತದೆ. ಬರೀ ಪುರುಷರಿಂದಲೇ ಮಹಿಳೆಯರಿಗೆ ಅನ್ಯಾಯವಾಗುತ್ತದೆಂದಲ್ಲ. ಮಹಿಳೆಯರಿಂದ ಪುರುಷರಿಗೂ ಅನ್ಯಾಯವಾಗಿ ಎಷ್ಟೋ ಪ್ರಕರಣಗಳಲ್ಲಿ ಪುರುಷರೂ ಸತ್ತಿರುವುದುಂಟು, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದುಂಟು, ಹೊರಗಡೆ ಹೋಗಿರುವುದುಂಟು, ಹುಚ್ಚರಾಗಿರುವುದುಂಟು.

ಶ್ರೀ ಸಿ.ಎಂ. ಉದಾಸಿ :— ಇವತ್ತು ಮಹಿಳೆಯಿಂದ ಪುರುಷನಿಗೆ ಅನ್ಯಾಯವಾಗುವುದಿಲ್ಲ ಎನ್ನುವ ಮಾತಿಲ್ಲ. ಇದಕ್ಕಾಗಿ ರಾಷ್ಟ್ರಮಟ್ಟದಲ್ಲಿ 'ಪತ್ನಿ ಪೀಡಿತರ ಸಂಘಟನೆ' ಎಂಬುದೊಂದು ಇದ್ದು ಸದರಿ ಸಂಘಟನೆಗೆ ವಕೀಲರೊಬ್ಬರು ಅಧ್ಯಕ್ಷರಾಗಿದ್ದಾರೆ. ಅವರು ಏತಕ್ಕಾಗಿ ಪತ್ನಿ ಪೀಡಿತರ ಸಂಘಟನೆ ಮಾಡಿದರೆಂದರೆ, ತಮ್ಮ ಹೆಂಡತಿಗೆ ಡೈವೋರ್ಸ್ ನೋಟೀಸ್ ಕೊಟ್ಟಿದ್ದು 22 ವರ್ಷಗಳಾದರೂ ಅದು ನಿಖಾಲೆಯಾಗದ್ದರಿಂದ ತೊಂದರೆಯುಂಟಾಯಿತು. ಇಂತಹ ಸಂಘಟನೆ ಇಲ್ಲವೆಂದು ನಾನು ಹೇಳುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಆ ಸಂಘಟನೆಯ ಅಧ್ಯಕ್ಷರು ಎರಡನೇ ಮದುವೆಯಾದ ನಂತರವೇ ಈ ಪಂಚಾಯಿತಿ ಎಲ್ಲಾ ಆದದ್ದು. ಆಕೆಯ ಕೇಸನ್ನು ನಾನೇ ನಡೆಸಿರುವುದರಿಂದ ಗೊತ್ತಿದೆ. ಅವರು ಎರಡನೇ ಮದುವೆಯಾದ ಬಳಿಕ ಮೊದಲ ಹೆಂಡತಿ ಅವರ ಬಳಿ ಹೋದಾಗ ಓಡಿಸಿದ್ದೂ ಉಂಟು.

ಶ್ರೀ ವಾಟಾಳ್ ನಾಗರಾಜ್:— ಆದುದರಿಂದ, ಆ ಕುರಿತ ವಿವರಗಳನ್ನು ಕೊಡುವುದಕ್ಕಾಗುವುದಿಲ್ಲ. ಎಷ್ಟೋ ಜನ ಗಂಡಂದಿರ ಹಣೆಬರಹದಂತೆ ಮನೆ, ಮಠ ಬಿಟ್ಟು ಗಂಗಾ ನದಿಗೆ ಹೋಗಿರುವುದುಂಟು, ಪಾತಾಳಕ್ಕೆ ಹೋಗಿರುವುದುಂಟು. ಅದರ ಬಗ್ಗೆ ನಾವು ಚರ್ಚೆ ಮಾಡಲು ಹೊರಟಾಗ ಬಹಳ ಅಪಾಯಕ್ಕೆ ಸಿಲುಕುತ್ತೇವಾದ್ದರಿಂದ ನನ್ನ ಚರ್ಚೆಯನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದು ಸಾಕಷ್ಟು ರೀತಿಯಲ್ಲಿ ಚರ್ಚೆಯಾಗಿರುವುದರಿಂದ ಒಂದು ಸಲಹೆಯನ್ನು ಮಾತ್ರ ಕೊಡಬಯಸುತ್ತೇನೆ. ಹೆಣ್ಣುಮಕ್ಕಳ ಮೇಲೆ ಯಾವ ರೀತಿಯಾಗಿ ದೌರ್ಜನ್ಯ, ಶೋಷಣೆಗಳುಂಟಾಗುತ್ತಿದೆ ಎನ್ನುವುದರ ಬಗ್ಗೆ ವ್ಯಾಖ್ಯಾನಿಸಲು ಹೋಗುವುದಿಲ್ಲ. ಈಗಾಗಲೇ ಮಾತನಾಡಿರುವ ಎಲ್ಲಾ ಮಾನ್ಯ ಸದಸ್ಯರುಗಳು ಕೂಡ ಅದಕ್ಕೆ ದನಿಗೂಡಿಸಿದ್ದು, ಅವರೆಲ್ಲರ ಅಭಿಪ್ರಾಯಗಳಿಗೆ ನನ್ನ ಸಹಮತಿ ಕೂಡ ಇದೆಯೆಂದು ತಿಳಿಸುತ್ತಾ ಉದ್ಭವಿಸಿರುವ ಸಮಸ್ಯೆಯನ್ನು ತಡೆಗಟ್ಟಲು ವಿಶೇಷವಾಗಿ ಸಾಮಾಜಿಕ ಪರಿವರ್ತನೆಯಾಗದ ಹೊರತು ಇದಕ್ಕೆ ಪರಿಹಾರವಿಲ್ಲ. ಕೇವಲ ಕಾನೂನು ತರುವುದರಿಂದಾಗಲೀ, ತಂದಂಥ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸದಿದ್ದಲ್ಲಿ ಇದಕ್ಕೆ ಪರಿಹಾರ ಸಿಗುವುದಿಲ್ಲ. ಆದರೂ ಕೂಡ ದಿನ ಬೆಳಗಾದರೆ ನಿತ್ಯ ಪತ್ರಿಕೆಗಳಲ್ಲಿ ಮಹಿಳೆಯರ ಮೇಲೆ ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ರೀತಿ ದೌರ್ಜನ್ಯ, ಕಿರುಕುಳವುಂಟಾಗುತ್ತಿದೆ ಎಂಬುದನ್ನು ನೋಡುತ್ತಿದ್ದು ಇದರ ಬಗ್ಗೆ ನಾನು ಹೆಚ್ಚಿನ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಮಹಿಳೆಯರ ಮೇಲಿನ ದೌರ್ಜನ್ಯ, ಶೋಷಣೆ ಹತ್ತಿಕ್ಕಲು ಒಂದು ಕಾನೂನನ್ನೇ ತರಬೇಕಾಗುತ್ತದೆಂದು ಹೇಳುತ್ತಿದ್ದೇನೆ. ಇವೊತ್ತು ಹೆಣ್ಣುಮಕ್ಕಳ ಮೇಲಾಗುತ್ತಿರುವ ದೌರ್ಜನ್ಯ ಅಥವಾ ವರದಕ್ಷಿಣೆಯಿಂದಾಗುವ ಸಾವು ಅಥವಾ ಚುಡಾಯಿಸುವುದರಿಂದ ಅವರಿಗಾಗತಕ್ಕ ಮಾನಸಿಕ ನೋವನ್ನು ಹೋಗಲಾಡಿಸಲು ನಮ್ಮ ಕಾನೂನಿನಲ್ಲಿ ಭದ್ರತೆಯಿಲ್ಲ. ಅಲ್ಲದೆ, ಕಾನೂನಿನ ನೆರವು ತೆಗೆದುಕೊಂಡು ಅದರಿಂದ ಯಾರಾದರೂ ರಿಲೀಫ್ ತೆಗೆದುಕೊಂಡಿರುವ ಉದಾಹರಣೆಯನ್ನೂ ನೋಡಿಲ್ಲ. ಇವೊತ್ತು ನಾವು ಹಳ್ಳಿಗಳಿಗೆ ಹೋದರೆ ಪ್ರತಿನಿತ್ಯವೂ ಒಂದಲ್ಲ ಒಂದು ರೀತಿಯಾದ ಸಮಸ್ಯೆಗಳು ದಿನದಿನಕ್ಕೂ ಜಾಸ್ತಿಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಅದೋಕ್ಕೋಸ್ಕರ, ಈ ನಿಟ್ಟಿನಲ್ಲಿ ನನ್ನ ಒಂದು ಸಲಹೆಯೇನೆಂದರೆ, ನಮ್ಮಲ್ಲಿ ಕಂಟ್ರೋಲ್ಡ್ ಸೊಸೈಟಿ ಇದ್ದು, ಬೇರೆ ದೇಶಗಳಲ್ಲಿ ಫ್ರೀ ಸೊಸೈಟಿಯಿದ್ದರೂ ಕೂಡ ಅವರು ಆ ಕುರಿತಂತೆ ವಿಶೇಷವಾದ ಕಾನೂನು ತಂದಿದ್ದು, ಜಾರಿಯಲ್ಲಿದೆ. ಅವರಿಗೆ ಅದರಿಂದ ರಕ್ಷಣೆ ಕೂಡ ಸಿಗುತ್ತಿದೆಯೆಂಬುದು ನನ್ನ ಅಭಿಪ್ರಾಯವಾಗಿದೆ. ಹೆಣ್ಣುಮಕ್ಕಳ ಮೇಲೆ ಏತಕ್ಕೋಸ್ಕರ ದೌರ್ಜನ್ಯಗಳಾಗುತ್ತಿದೆಯೆಂದರೆ it is because of sex. Unless you impose a punishment. ಈ ತರಹದ ಸಮಸ್ಯೆ ಉಂಟಾಗಲು ಕಾರಣವಾಗುತ್ತದೆ. ತುಂಬಾ ಮುಂದುವರೆದ ಅಮೆರಿಕಾದಂಥ ದೇಶದಲ್ಲೂ ಕೂಡ ಮಹಿಳೆಯರ ಮೇಲೆ ಅತ್ಯಾಚಾರವಾದಂಥ ಸಂದರ್ಭದಲ್ಲಿ ಅವರಿಗೆ ಕ್ಯಾಪಿಟಲ್ ಪನಿಷ್‌ಮೆಂಟ್ ಕೊಡುವ

ಕಾನೂನು ಇವೊತ್ತು ಜಾರಿಯಲ್ಲಿರಬೇಕಾದರೆ ಅಂಥದ್ದೇ ವಿಶೇಷವಾದ ಕಾನೂನನ್ನು ತರುವ ಬಗ್ಗೆ ನನಗನ್ನಿಸುವುದೇನೆಂದರೆ ಈ ಕುರಿತು ಚರ್ಚೆ ಮಾಡುವುದಲ್ಲದೆ ಮಹಿಳೆ ಇನ್ನೂ ಅನೇಕ ತರಹದ ಸಮಸ್ಯೆಗಳನ್ನು ಎದುರಿಸುತ್ತಿರಬೇಕಾದರೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಅಭಿಪ್ರಾಯ ಪಟ್ಟಿರುವ ರೀತಿಯಲ್ಲಿ ಸದನ ಸಮಿತಿ ರಚಿಸಿ ಅಧ್ಯಯನ ಮಾಡಿ ಪರಿಹಾರ ಕಂಡುಹಿಡಿಯುವುದಕ್ಕಿಂತ ಮುಂಚಿತವಾಗಿ ಈ ದಿಸೆಯಲ್ಲಿ ವಿಶೇಷವಾದ ಕಾನೂನು ತಂದು ಅದನ್ನು ಜೆಎಸ್‌ಸಿಗೆ ರೆಫರ್ ಮಾಡಿ ಮತ್ತು ಎಲ್ಲಾ ಸಂಘ-ಸಂಸ್ಥೆಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಅನಂತರ ಕಾನೂನನ್ನು ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಇವೊತ್ತು ಆ ಬಗ್ಗೆ ಲೆಜಿಸ್ಲೇಷನ್ ತರುವುದಕ್ಕೆ ತಡವಾಗುತ್ತದೆಂಬ ಅಭಿಪ್ರಾಯ ನಿಮಗಿದ್ದರೆ ಈ ತಕ್ಷಣವೇ ಸದನ ಸಮಿತಿ ರಚಿಸಿ ಎಲ್ಲಾ ಸಂಘ-ಸಂಸ್ಥೆಗಳೊಂದಿಗೆ, ಶಾಸಕರುಗಳ ಜೊತೆ ಇಂಟರ್‌ಆ್ಯಕ್ಟ್ ಮಾಡಿ ವಿಶೇಷವಾದ ಕಾನೂನು ತರುವುದು ಸೂಕ್ತ, ಅದಕ್ಕೆ ನಮ್ಮ ಬೆಂಬಲ ಇದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವೊತ್ತು ಕಂಟ್ರೋಲ್ಡ್ ಸೊಸೈಟಿಯಲ್ಲಿರುವ ನಮ್ಮ ಹೆಣ್ಣುಮಕ್ಕಳ ಪರಿಸ್ಥಿತಿ ಏನು ಎನ್ನುವುದರ ಬಗ್ಗೆ ನಮ್ಮಗಳ ಚಿಂತನೆ ಹರಿಸುವುದಕ್ಕೋಸ್ಕರ ಇವೊತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಾನು ತಮ್ಮನ್ನು ಹಾಗೂ ವಿಧಾನಪರಿಷತ್ತಿನ ಸಭಾಪತಿಯವರನ್ನು ಅಭಿನಂದಿಸುತ್ತೇನೆ. ಬಹುಶಃ ಈ ಸದನದಲ್ಲಿ ಇದೇ ಮೊದಲ ಬಾರಿಗೆ ಇಷ್ಟು ದೀರ್ಘವಾಗಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿರುವುದಕ್ಕೆ ನಾನು ಸರ್ಕಾರದ ಪರವಾಗಿ ತಮ್ಮನ್ನು ಅಭಿನಂದಿಸುತ್ತೇನೆ. ತಾವು ಬಹಳ ಆಸಕ್ತಿವಹಿಸಿ ಸದನದ ಹೊರಗಡೆ ಮಹಿಳೆಯರ ಪರವಾಗಿ ಹೋರಾಟ ಮಾಡುವ 'ವಿಮೋಚನೆ' ಮತ್ತಿತರ ಸಂಘಟನೆಗಳನ್ನು ಕರೆಸಿ ಅವರುಗಳಿಂದ ಮಹಿಳೆಯರ ಮೇಲಾಗುತ್ತಿರುವ ದುರಂತದ ಘಟನೆಗಳನ್ನು ಕೇಳಿದಾಗ ನಮ್ಮ ಮನಸ್ಸು ನೊಂದಿರುವುದಷ್ಟೇ ಅಲ್ಲ, ಇಂತಹ ಹೇಯ ಕೃತ್ಯ ನಮ್ಮ ಸಮಾಜದಲ್ಲಿ ನಡೆಯುತ್ತಿರುವುದರ ಬಗ್ಗೆ ನಮ್ಮ ಮನಸ್ಸಿಗೆ ಆಘಾತವುಂಟಾಗಿ ಪರಸ್ಪರ ನಾವುಗಳು ಭಾವನೆಗಳನ್ನು ಹಂಚಿಕೊಂಡಿರುವುದು ಮೂರು ದಿವಸಗಳ ಹಿಂದೆ ಕಂಡಿದ್ದೇವೆ. ತಾವು ಅವೊತ್ತು ಈ ಸದನದಲ್ಲಿ ವಿಶೇಷವಾಗಿ ಮಹಿಳಾ ಸದಸ್ಯರುಗಳಲ್ಲಿ ಏನು ಮನವಿ ಮಾಡಿಕೊಂಡಿದ್ದೀರೆಂದರೆ, ವಿಮೋಚನಾ ಸಂಘ ಮತ್ತಿತರ ಸಂಘಟನೆಗಳ ಪ್ರತಿನಿಧಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ತಮ್ಮ ವಿಚಾರದಲ್ಲಿ ಸದನದಲ್ಲಿ ತಾವು ಅದನ್ನು ಪ್ರತಿಬಿಂಬಿಸಬೇಕೆಂದು ತಿಳಿಸಿದ್ದೀರಿ. ಈಗ ಮಾತನಾಡಿರುವ ಎಲ್ಲಾ ಮಹಿಳಾ ಸದಸ್ಯರು ಮತ್ತು ಪುರುಷ ಸದಸ್ಯರುಗಳೂ ಕೂಡ ತಂತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ನಾನೂ ಸಹ ತಮ್ಮನ್ನು ಅಭಿನಂದಿಸುವ ಸಂದರ್ಭದಲ್ಲಿ ಈಗಾಗಲೇ ಮೂರು ಬಾರಿ ಸರ್ಕಾರದ ಗೃಹ ಇಲಾಖೆಯ ಕಾರ್ಯದರ್ಶಿ, ಡಿ.ಜಿ.ಪಿ.ಯವರು, ಡಿ.ಜಿ.ಪಿ. (ಸಿಓಡಿ)ಯ ಡೌರಿ ಡೆತ್ ಸೆಲ್‌ನಲ್ಲಿ ಕಾರ್ಯನಿರ್ವಹಿಸುವ ಅನೇಕ ಅಧಿಕಾರಿಗಳನ್ನು

ಕರೆಯಿಸಿ ಸಭೆ ನಡೆಸಿದ್ದೇನೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಈ ಸಮಸ್ಯೆಗೆ ಪರಿಹಾರ ಇಲ್ಲಿಯೇ ಸಿಗುತ್ತದೆಂದು ನಾವ್ಯಾರು ಕೂಡ ತಿಳಿದುಕೊಂಡಿಲ್ಲ. ಇದರ ಬಗ್ಗೆ ನಮ್ಮ ಸಮಾಜದಲ್ಲಿ ಮೂಲಭೂತವಾಗಿ ಪರಿವರ್ತನೆಯಾಗಬೇಕಾಗುತ್ತದೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಹೇಳಿರುವಂಥ ವಿಚಾರಗಳನ್ನು ನಾವು ಗಣನೆಗೆ ತೆಗೆದುಕೊಂಡಾಗ ಅವರು ಹೇಳಿರುವ ವಿಚಾರಗಳೇನು, ಇವೊತ್ತು ನಾವು ಮಾಡುತ್ತಿರುವುದೇನು ಎಂಬುದನ್ನೆಲ್ಲಾ ನೋಡಿದಾಗ ನಮ್ಮಲ್ಲಿರುವ ನಮ್ಮ ಸಮಾಜದಲ್ಲಿರುವ ಆಷಾಢಭೂತಿತನವೇ ಈ ಸಮಸ್ಯೆಗಳಿಗೆಲ್ಲಾ ಮೂಲಭೂತವಾದ ಕಾರಣವೆಂದು ಮನಗಾಣಬೇಕಿದೆ. ಇವೊತ್ತು ಸಾಮಾಜಿಕ ಕ್ರಾಂತಿ ಬಯಸಿದಾಗ, ಆಸ್ತಿಯಲ್ಲಿ ಮಹಿಳೆಯರಿಗೆ ನಾವು ಸಮಾನ ಹಕ್ಕು ಕೊಡುತ್ತೇವೆನ್ನುವ ಸಂದರ್ಭ ಬಂದಾಗ ಇದು ಸ್ವಲ್ಪ ಕಡಿಮೆಯಾಗಬಹುದೆನ್ನುವ ಭಾವನೆ ನಮ್ಮಲ್ಲಿರುವ ಅನೇಕರಲ್ಲಿ ವೈಯಕ್ತಿಕವಾಗಿ ಬಂದರೂ ಸಹ ಸಮಾಜದಲ್ಲಿ ಮಹಿಳೆಯನ್ನು ಆರ್ಥಿಕವಾಗಿ ಮುಂದೆ ತರಬೇಕಾದರೆ ಮಾಡಬೇಕಾಗಿರುವ ಕೆಲಸ ಮತ್ತು ಅವರಿಗೆ ಅಧಿಕಾರ ಕೊಡುವ ವಿಚಾರದಲ್ಲಿ ನಾವು ಮಾಡಬೇಕಾಗಿರುವ ಕೆಲಸ, ಲೋಕಸಭೆಯಲ್ಲಾಗಲೀ ವಿಧಾನಸಭೆಯಲ್ಲಾಗಲಿ, ವಿಧಾನ ಪರಿಷತ್ತಿನಲ್ಲಾಗಲಿ ಅಥವಾ ಮತ್ತೊಂದು ಕಡೆಯಾಗಲಿ ನೂರಕ್ಕೆ ಮೂವತ್ತರಷ್ಟು ಸ್ಥಾನ-ಮಾನಗಳನ್ನು ಮಹಿಳೆಯರಿಗೆ ಕೊಡಬೇಕೆಂದು ಹೇಳಿದಾಗ ನಮ್ಮಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ತೆಗೆದುಕೊಂಡಿರುವ ನೀತಿ-ನಿಲುವುಗಳನ್ನು ನೋಡಿದಾಗ ನಾವು ಎಲ್ಲಿಯೋ ಒಂದು ಕಡೆ ಹೇಳುವುದಕ್ಕೂ, ಮಾಡುವುದಕ್ಕೂ ವ್ಯತ್ಯಾಸವಿದೆಯೆಂಬ ಅಂಶವನ್ನು ಮನಗಾಣಬೇಕಾಗುತ್ತದೆ.

2.20 ಪಿ.ಎಂ.

ಇವತ್ತು ಒಂದು ವರ್ಷದೊಳಗಡೆ 220 ಸ್ಥಾನಗಳಪೈಕಿ ಮೂರನೆ ಒಂದು ಭಾಗ ಮಹಿಳೆಯರಿಗೆ ಹೋಗಬೇಕೆಂದು ಹೇಳಿದಾಗ ನಮ್ಮಲ್ಲಿ ಅದನ್ನು ಎಷ್ಟುಮಂದಿ ಮನಸಾರೆ ಒಪ್ಪುತ್ತೇವೆ ಎನ್ನುವುದನ್ನೂ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ಕಾನೂನು ಮಾಡಿದ್ದನ್ನು ಮಹಿಳೆಯರಿಗೆ ಕೊಡುವುದಕ್ಕಾಗುವುದಿಲ್ಲ, ಎಲ್ಲಿಯವರೆಗೆ ಆಸ್ತಿಯಲ್ಲಿ ಸಮಾನವಾದ ಹಕ್ಕನ್ನು ಕೂಡ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಅಲ್ಲಿಯವರೆಗೆ ಇದೊಂದು ಮೂಲಭೂತವಾದ ಬದಲಾವಣೆಯಾಗುತ್ತದೆಂದು ನಾವ್ಯಾರು ಬಯಸುವುದು ತಪ್ಪಾಗುತ್ತದೆ ಎನ್ನುವ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಮಂಡನೆ ಮಾಡುತ್ತೇನೆ. ಗೃಹಮಂತ್ರಿಯಾಗಿ ನನಗೆ ಕೆಲವು ಜವಾಬ್ದಾರಿಗಳಿವೆ, ಅದನ್ನು ನಾನು ನಿರ್ವಹಿಸಬೇಕಾಗಿದೆ. ನಾನು ಅವನ್ನು ನಿರ್ವಹಿಸತಕ್ಕಂಥ ಸಂದರ್ಭದಲ್ಲಿ, ಅನೇಕ ವಿಚಾರಗಳನ್ನು ಪ್ರಕಟ ಮಾಡುವುದಕ್ಕೆ ಮುಂಚೆ ತಮ್ಮಲ್ಲಿ ನಾನು ಮನವಿಮಾಡಿಕೊಳ್ಳುವುದೇನೆಂದರೆ, ವಿರೋಧಪಕ್ಷದ ಉಪನಾಯಕರು, ಗಣ್ಯ ಶಾಸಕರು ಈಗ ನಮಗೇನು ಸಲಹೆಗಳನ್ನು ಕೊಟ್ಟಿದ್ದಾರೆ, ಪ್ರಾರಂಭದಲ್ಲಿ ತಾವೇ ಅದನ್ನು ಪ್ರಸ್ತಾವಿಕವಾಗಿ ಪ್ರಸ್ತಾಪ ಮಾಡಿದ್ದೀರಿ. ಎರಡು ಸದನಗಳ ಒಂದು ಜಂಟಿ ಸಮಿತಿಯನ್ನು ರಚಿಸಿ ಆ ಸಮಿತಿಗೆ ಎರಡು ಮೂರು ತಿಂಗಳುಗಳ ಸಮಯವನ್ನು ಕೊಟ್ಟು,

ಈಗ ಇರುವ ಕಾನೂನುಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಇರುವ ಅಡಚಣೆಗಳೇನು? ಆಗುತ್ತಿರುವ ಅನ್ಯಾಯ ಹಾಗೂ ಮೋಸವೇನು? ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಲ್ಲಿರುವ ತಪ್ಪೇನು ಎನ್ನುವುದರ ಬಗ್ಗೆ ಒಂದು ವರದಿಯನ್ನು ಕೊಟ್ಟರೆ ಅದನ್ನು ಜಾರಿಗೊಳಿಸುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :— ನಮ್ಮ ಒಂದು ಸಲಹೆ ಏನೆಂದರೆ, ಈಗ ಸಮಿತಿ ಮಾಡಿಕೊಂಡು ಕುಳಿತುಕೊಳ್ಳುವುದಕ್ಕಿಂತ ಸೆಕ್ಷನ್ 305 ರ ಕೆಳಗೆ ಈಗಾಗಲೇ ಒಂದು ಸಮಿತಿ ಇದೆ, ಆ ಸಮಿತಿಗೆ ಯಾರನ್ನು ಸದಸ್ಯರನ್ನಾಗಿ ಮಾಡಬೇಕೆನ್ನುವ ಅಧಿಕಾರ ಅಧ್ಯಕ್ಷರಿಗೆ ಇದೆ. ಉದಾಹರಣೆಗೆ ನಾನು ಅದನ್ನು ಓದುತ್ತೇನೆ, ``At the commencement of the Assembly or from time to time as the case may be, the speaker shall nominate a Committee on the Welfare of women and children consisting of not more that 17 members of whom not more than 12 members shall be nominated by the Speaker from amongst the members of Legislative Assembly and not more than five members likewise be nominated by the Chairman of the Legislative Council from amongst the members of the Legislative Council."

ಈ ಪ್ರಾವಿಷನ್ ಕೆಳಗೆ, ಅಧ್ಯಕ್ಷರೆ, ತಾವು ತಕ್ಷಣವೇ ಸದಸ್ಯರನ್ನು ನಾಮಕರಣ ಮಾಡಿ. ಈಗ ತಮ್ಮ ಮುಂದೆ ಸಮಿತಿಗಳನ್ನು ರಚನೆ ಮಾಡುವಂತಹದಿದೆ, ಇದರಲ್ಲಿ ಹೆಚ್ಚು ಆಸಕ್ತಿ ಇರತಕ್ಕಂಥವರನ್ನು ಸದಸ್ಯರನ್ನಾಗಿ ಮಾಡಿ ಅವರಿಗೆ ಒಂದು ತಿಂಗಳುಗಳ ಕಾಲಾವಕಾಶ ಕೊಟ್ಟು, ಈಗಾಗಲೇ ಏನೊಂದು ಚರ್ಚೆ ಆಗಿದೆ, ಆ ಒಂದು ಆಧಾರದ ಮೇಲೆ, ಇಲ್ಲಿ ಪ್ರಮುಖವಾಗಿರುವುದು ನೀವು ಸಮಾಜದ ಎಲ್ಲಾ ವಿಷಯಗಳನ್ನು ತೆಗೆದುಕೊಂಡರೆ ಚರ್ಚೆ ಮಾಡುವುದಕ್ಕೆ ಅವಕಾಶ ಸಾಧ್ಯವಾಗುವುದಿಲ್ಲ. ಒಂದು ಸಮಾಜದಲ್ಲಿ ಅಸ್ಪೃಶ್ಯತೆ ಇದೆ, ಹೆಣ್ಣು ಮಕ್ಕಳನ್ನು ಇನ್ನೂ ಕೂಡ ಅಸ್ಪೃಶ್ಯರಂತೆ ಕಾಣುತ್ತಾರೆ. ಅಂದಾಗ ನೀವು, ನಾವು ಸಮಾಜ ಸುಧಾರಣೆ ಇವೆಲ್ಲವೂ ಕೂಡ ಇದರಲ್ಲಿ ಬರುವುದಿಲ್ಲ. ನಾನು ಹೇಳುವುದೇನೆಂದರೆ ಈ ಸಮಿತಿಗೆ ನೇರವಾಗಿ ಏನು ದೌರ್ಜನ್ಯಗಳಾಗುತ್ತಿವೆ ಅಥವಾ ವರದಕ್ಷಿಣೆ ಮರಣಗಳಾಗುತ್ತಿವೆ, ಅಸ್ವಾಭಾವಿಕ ಮರಣವಾಗುತ್ತಿವೆ, ಇದರ ಬಗ್ಗೆ ಸ್ಯಾಂಪಲ್ ಆಗಿ ಸರ್ವೆ ಮಾಡಿ ತಕ್ಷಣ ಇದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಲು ಏನು ಕಾನೂನನ್ನು ತರಬೇಕು ಎನ್ನುವುದಕ್ಕೆ ಸೀಮಿತವಾಗಿ ತಾವು ಬೇಗನೆ ಮಾಡಿದರೆ ಇದು ಪರಿಹಾರವಾಗುತ್ತದೆಯೇ ಹೊರತು ದೇಶವೆಲ್ಲಾ ಸಂಚಾರ ಮಾಡಿದರೆ ಬಹುಶಃ ಸಾಧ್ಯವಾಗುವುದಿಲ್ಲ ಎಂದು ನನ್ನ ಭಾವನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅಧ್ಯಕ್ಷರೆ, ಆ ಒಂದು ಅಧಿಕಾರ ತಮಗಿದೆ. ಸದನ ಸಮಿತಿಯನ್ನು ರಚಿಸಬೇಕೋ ಅಥವಾ ಈಗಿರುವ ನಿಯಮಾವಳಿಗಳ ಪ್ರಕಾರ

ಒಂದು ಸ್ಟ್ಯಾಂಡಿಗ್ ಕಮಿಟಿ ಮಾಡುವುದು ಇವೆಲ್ಲಾ ತಮ್ಮ ವಿವೇಚನೆಗೆ ಬಿಟ್ಟಿರುವುದು, ತಾವೇನು ನಿರ್ಧಾರ ಮಾಡುತ್ತೀರ, ಅದನ್ನು ಸರ್ಕಾರ ಒಪ್ಪುತ್ತದೆ ಎನ್ನುವ ಮಾತನ್ನು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗ ಅನೇಕ ಸದಸ್ಯರುಗಳು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ, ಆ ಎಲ್ಲಾ ಅಭಿಪ್ರಾಯಗಳನ್ನೂ ಕೂಡ ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಕೆಲವು ಜಾಹಿರಾತುಗಳನ್ನು ಕೊಟ್ಟಿದ್ದಾರೆನ್ನುವ ಮಾತನ್ನು ಹೇಳಿದರು ಅದನ್ನು ನಾನು ನನ್ನ ಗಮನಕ್ಕೆ ತೆಗೆದುಕೊಂಡಿದ್ದೇನೆ, ಅದರ ಮೇಲೆ ಕಾನೂನುಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲವೆಂದು ಹೇಳುತ್ತೇನೆ. ಬೆಂಗಳೂರು ನಗರ ಪೋಲಿಸ್‌ನವರು ಈಗಾಗಲೇ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮಹಿಳಾವಾಣಿ ಎನ್ನುವ ಒಂದು ಕಾರ್ಯಕ್ರಮವನ್ನು ಆರಂಭ ಮಾಡಿದ್ದಾರೆ, ಉಡುಪಿ ಪೋಲಿಸ್‌ನವರೂ ಕೂಡ ಇದೆ ರೀತಿಯ ಕೆಲಸವನ್ನು ಮಾಡಿದ್ದಾರೆ. ಈ ಮಹಿಳಾವಾಣಿ ಹಾಗೂ ಮಕ್ಕಳವಾಣಿ ಎನ್ನುವ ಕಾರ್ಯಕ್ರಮವೇನಿದೆ, ಇದು ಆರಂಭವಾದ 23ನೇ ತಾರೀಖು ಜನವರಿ, ಎರಡು ತಿಂಗಳುಗಳ ಒಳಗಡೆ ಸುಮಾರು 2934 ಕರೆಗಳು ಬಂದಿವೆ. ಅದರಲ್ಲಿ ಖಚಿತವಾಗಿರುವ ಸಮಸ್ಯೆಗಳು 272. ಪೋಲಿಸ್‌ನವರು ಸುಮಾರು 82 ಮಹಿಳಾ ಸಂಘಟನೆಗಳ ಸಹಕಾರದಿಂದ ಇದನ್ನು ಮಾಡಿರುವುದು, ಸಮಸ್ಯೆಗಳೂ ಕೂಡ ಇತ್ಯರ್ಥವಾಗಿವೆ ಎಂದು ಹೇಳುತ್ತೇನೆ. ಎಲ್ಲಾ ಜಿಲ್ಲೆಗಳಲ್ಲೂ ಕೂಡ ಈ ಮಹಿಳಾ ವಾಣಿ ಕಾರ್ಯಕ್ರಮವನ್ನು ಅನುಕರಣೆ ಮಾಡುವಂತೆ ಸೂಚನೆಯನ್ನು ಕೊಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊನ್ನೆ ಈ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಅನ್ನು ನಮ್ಮ ಸರ್ಕಾರ ಆಯ್ಕೆ ಮಾಡಿದೆ, ಅದರಲ್ಲಿ 23 ಜನ ಮಹಿಳೆಯರಾಗಿರುತ್ತಾರೆ. ನಾವು ಆಯ್ಕೆ ಮಾಡಿರುವವರ ಪೈಕಿ ಈಗ 20 ಜನ ಮಹಿಳಾ ಸಬ್-ಇನ್‌ಸ್ಪೆಕ್ಟರುಗಳು ತರಬೇತಿಯಲ್ಲಿದ್ದಾರೆ. ಇದರಿಂದ ಪ್ರತಿಯೊಂದು ಠಾಣೆಯಲ್ಲೂ ಕೂಡ, ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಒಬ್ಬರು ಇಬ್ಬರು ಮಹಿಳಾ ಪೋಲಿಸ್ ಸಬ್ ಇನ್‌ಸ್ಪೆಕ್ಟರ್‌ಗಳಿದ್ದರೆ ಒಳ್ಳೆಯದು. ಹೆರ್‍ಯಾಸ್‌ಮೆಂಟ್ ಕಡಿಮೆಯಾಗಬಹುದೆನ್ನುವ ದೃಷ್ಟಿಯಿಂದ ಈಗ ಇಡೀ ರಾಜ್ಯದಲ್ಲಿ 800 ಸಬ್-ಇನ್‌ಸ್ಪೆಕ್ಟರ್ ಹುದ್ದೆಗಳು ಖಾಲಿ ಇವೆ. ಅದರಲ್ಲಿ ಈ ವರ್ಷ 200, 250 ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಶೇಕಡ 30 ರಂತೆ ಸುಮಾರು 70 ಜನ ಮಹಿಳಾ ಸಬ್-ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳಬೇಕೆನ್ನುವ ಆದೇಶವನ್ನು ಸರ್ಕಾರ ಹೊರಡಿಸುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ಈ ಡೌರಿ ಕೇಸ್‌ಗಳನ್ನು ಟ್ರಯಲ್ ಮಾಡುವುದಕ್ಕೊಂದು ಬೆಂಗಳೂರಿನಲ್ಲಿ ಮಾತ್ರ ಒಂದು ವಿಶೇಷ ಕೋರ್ಟ್‌ಇದೆ ನಾವು ಹೈಕೋರ್ಟ್ ಅನ್ನು ಕನ್ಸಲ್ಟ್ ಮಾಡಿ ಬೇರೆ ಕಡೆಯಲ್ಲೂ ಕೂಡ ಈ ವಿಶೇಷ ಕೋರ್ಟ್‌ಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನೂವುದನ್ನೂ ಕೂಡ ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಈಗಾಗಲೇ ಹೇಳಿದಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಕೂಡ ಸರ್ಕಾರ ಮಹಿಳಾ ಪೋಲಿಸ್ ಠಾಣೆಗಳನ್ನು ತೆರೆಯುತ್ತಿದ್ದೇವೆ. ಇದರಿಂದ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದಕ್ಕೆ ಸ್ವಲ್ಪ ಅನುಕೂಲವಾಗುತ್ತವೆ. ಅವತ್ತು ಕೆಲವು

ಘಟನೆಗಳನ್ನು ವಿಶೇಷವಾಗಿ ನಮ್ಮ ವಿಮೋಚನ ಸಂಘಟನೆಯವರು ಏನು ಹೇಳಿದ್ದಾರೆ ಇದನ್ನು ಗಮನದಲ್ಲಿಟ್ಟುಕೊಂಡು ಕೆಲವು ಕ್ರಮಗಳನ್ನು ನಾನು ತುರ್ತಾಗಿ ತೆಗೆದುಕೊಳ್ಳಬೇಕೆಂದಿದ್ದೇನೆ. ಅಧಿವೇಶನದ ನಂತರ ಯಾರು ಸಿಓಡಿ ಕೆಳಗಡೆ ಡೌರಿ ಡೆತ್ ಕೇಸಸ್‌ಗೋಸ್ಕರ ಒಂದು ಸ್ಪೆಷಲ್ ಸೆಲ್ ಮಾನಿಟರ್ ಮಾಡುವುದಕ್ಕೆ ಮಾಡಿದ್ದೇವೆ. ಅದರ ಕಾರ್ಯಕ್ರಮವನ್ನು ರಿವ್ಯೂ ಮಾಡಿ ನಾವು ಕೆಲವು ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಯೋಚಿಸಿದ್ದೇವೆ. ಈ ನಿಟ್ಟಿನಲ್ಲಿ ಅವರಿಗೆ ನಾವು ಕೆಲವು ಸಹಾಯಕ ಸಹಕಾರವನ್ನೂ ಕೂಡ ನೀಡಬೇಕಾಗುತ್ತದೆ. ಈಗ ಅಧಿಕಾರಿಗಳು ಮಾಡುತ್ತಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ನಮಗಿರುವ ವ್ಯವಸ್ಥೆಯಲ್ಲಿ ನಾವು ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಆ ಬದಲಾವಣೆಗಳನ್ನು ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ಅಧಿವೇಶನದ ನಂತರ ನಾನು ಮತ್ತೊಂದು ಸಭೆಯನ್ನು ಕರೆದು, ಮಾನ್ಯ ಸದಸ್ಯರುಗಳು ಹೇಳಿದಂತೆ ಈಗಿರುವ ಕಾನೂನುಗಳು ಸಾಕಷ್ಟು ಇವೆ, ಅವುಗಳನ್ನು ಕಾರ್ಯಾಚರಣೆಗೆ ತರುವಲ್ಲಿ ಕೆಲವು ವಿಳಂಬ ಹಾಗೂ ತಪ್ಪುಗಳಾಗುತ್ತಿವೆ. ಅವುಗಳನ್ನು ಸರಿಮಾಡುವುದಕ್ಕೆ ಕಠಿಣವಾದ ಕ್ರಮವನ್ನು ನಾವು ಹಾಗೂ ಪೋಲಿಸ್ ಇಲಾಖೆಯವರು ತೆಗೆದುಕೊಳ್ಳುತ್ತೇವೆ. ಈ ಡಿಸ್ಪೋಸಲ್ ಆಫ್ ಕೇಸ್ ಹಾಗೂ ಈ ಟ್ರಯಲ್ ನಲ್ಲಿ ಸುಮಾರು ಒಂದು ಪ್ರಕರಣಕ್ಕೆ ಎರಡರಿಂದ ಎರಡೂವರೆ ವರ್ಷಗಳಾಗುತ್ತಿವೆ. ಜವಾಬ್ದಾರಿ ನಾಗರಿಕರು ಸಾಕ್ಷಿಯನ್ನು ಹೇಳುವುದಕ್ಕೆ ಮುಂದೆ ಬರುತ್ತಿಲ್ಲ ಈ ರೀತಿ ಮತ್ತೊಂದು ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಪಕ್ಕದ ಮನೆಯಲ್ಲಿ ಆಗಿದೆ ಎಂದರೆ ಅಯ್ಯೋ ಕೋರ್ಟಿಗೆ ಹೋಗುತ್ತಾರೆ, ನಾಲ್ಕು ಐದು ಸಾರಿ ಸಾಕ್ಷಿಗೋಸ್ಕರ ಕರೆಯುತ್ತಾರೆ ಯಾರು ಹೋಗುವುದು ಎಂದು ಬರುವುದಿಲ್ಲ ಅದೊಂದು ಮುಖ್ಯವಾಗಿರುವ ತೊಂದರೆ. ಮತ್ತೆ ಸಾಕ್ಷಿಗಳು ಹಾಸ್ಟೈಲ್ ಆಗತಕ್ಕಂಥದ್ದನ್ನು ನಾವು ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ. ಏಕೆ ಈ ಕನ್ವಿಷನ್ ಕೇಸಸ್‌ಗಳು ಕಡಿಮೆಯಾಗುವುದಕ್ಕೆ ಏನು ಕಾರಣವೆಂದು ನೋಡಿದಾಗ ಇದು ಒಂದು ಕಾರಣ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಅಕ್ಕಪಕ್ಕದಲ್ಲಿರುವವರು ಸಹಕಾರ ನೀಡುವುದಿಲ್ಲ. ಏನೋ ನಡೆದುಕೊಂಡು ಹೋಗುತ್ತದಪ್ಪ ನಮಗೆ ಏತಕ್ಕೆ, ಏನೋ ನಡೆದುಕೊಂಡು ಹೋಗುತ್ತದೆಂದು ಸುಮ್ಮನಿರುತ್ತಾರೆ. ಆದುದರಿಂದ ಇರತಕ್ಕಂಥ ಕಾನೂನಿನಲ್ಲಿ ಇದನ್ನು ಯಾವರೀತಿ ಹೋಗುತ್ತದೆಂದು ಸುಮ್ಮನಿರುತ್ತಾರೆ. ಆದುದರಿಂದ ಇರತಕ್ಕಂಥ ಕಾನೂನಿನಲ್ಲಿ ಇದನ್ನು ಯಾವರೀತಿ ಮಾಡಬೇಕು ಎನ್ನುವುದನ್ನು ಯೋಚನೆ ಮಾಡುತ್ತೇವೆ. ಬಹಳ ಮುಖ್ಯವಾಗಿ, ಇನ್‌ಕ್ವೆಸ್ಟ್ ಪ್ರೊಸೀಡಿಂಗ್ಸ್ ಮತ್ತು ಈ ಡೈಯಿಂಗ್ ಡಿಕ್ಲರೇಷನ್ ಏನಿದೆ, ಇದು ಅವತ್ತು ನಿರ್ದಿಷ್ಟವಾಗಿ ಹೇಳಿರತಕ್ಕಂಥ ಎಲ್ಲಾ ಕೇಸಸ್‌ಗೂ ಪಾಯಿಂಟರ್ ಆಗಿ ಅದೊಂದರಲ್ಲೇ ನಾವು ಉತ್ತರವನ್ನು ಹುಡುಕಬೇಕಾಗಿರುತ್ತದೆ. ಒಂದು ಇನ್‌ಕ್ವೆಸ್ಟ್ ಪ್ರೊಸೀಡಿಂಗ್ಸ್ ಇನ್ನೊಂದು ಡೈಯಿಂಗ್ ಡಿಕ್ಲರೇಷನ್. ಅದರ ಬಗ್ಗೆ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ವಿಡಿಯೋ ರಿಕಾರ್ಡ್ ಮಾಡುವುದಕ್ಕೆ ಸಾಧ್ಯವೇ ಎಂದು ಹೇಳಿದ್ದಾರೆ, ಅದನ್ನು ನಾನು ವಿಚಾರ ಮಾಡುತ್ತೇನೆ. ಅದರ ಜೊತೆಗೆ ಇದರಲ್ಲಿ ಭಾಗಿಗಳಾಗಿರುವವರು ಯಾರು, ಒಂದು, ವೈದ್ಯರು ಇನ್ನೊಂದು ಪೋಲಿಸ್ ಅಧಿಕಾರಿಗಳು, ಪ್ರಾಸಿಕ್ಯೂಟರ್ಸ್ ಮತ್ತು ಎಕ್ಸಿಕ್ಯೂಟಿವ್ ಮಾಜಿಸ್ಟ್ರೇಟ್ಸ್.

ಅಧ್ಯಕ್ಷರು :— ವಿಡಿಯೊಗ್ರಾಫ್ ಮಾಡುವುದಕ್ಕೆ ಜೊತೆ ಜೊತೆಗೆ ಡೈಯಿಂಗ್ ಡಿಕ್ಲರೇಷನ್ ವೇಳೆಗೆ ಅವರ ಅತ್ತೆ ಮನೆಯವರು ಯಾರು ಇನ್-ಲಾಸ್ ಇರುತ್ತಾರೆ, ಅವರ್‍ಯಾರೂ ಅಲ್ಲಿ ಇರಬಾರದು. ಅನೇಕ ಸಂದರ್ಭಗಳಲ್ಲಿ ಅವರು ಅಲ್ಲಿ ಹಾಜರಿದ್ದು ಮ್ಯಾನುಪಲೇಟ್ ಮಾಡುತ್ತಾರೆ, ಬ್ಲಾಕ್‌ಮೇಲ್ ಮಾಡುತ್ತಾರೆ. ಉದಾಹರಣೆಗೆ ಅವಳು ಶೇಕಡ 80 ರಷ್ಟು ಸುಟ್ಟು ಹೋಗಿರುತ್ತಾಳೆ, ಮಗು ಇರುತ್ತದೆ, ನೀನು ಹೇಳಿಕೆ ಕೊಟ್ಟರೆ ಸತ್ತುಹೋಗುತ್ತಿಯಾ ನಾವು ನಿನ್ನ ಮಗುವನ್ನು ನೋಡಿಕೊಳ್ಳುವುದಿಲ್ಲ. ನಿನ್ನ ಗಂಡ ಜೈಲಿಗೆ ಹೋಗುತ್ತಾನೆ ಎಂದು ಹೇಳುತ್ತಾರೆ, ಬ್ಲಾಕ್‌ಮೇಲ್ ಮಾಡುತ್ತಾರೆ. ಅವರ್‍ಯಾರೂ ಇರಕೂಡದು, ಅವಳು ತಾನೇನು ಹೇಳಬೇಕೆಂದಿರುತ್ತಾಳೋ ಅದನ್ನು ಸ್ವಯಂಪ್ರೇರಣೆಯಿಂದ ನಿರ್ಭಯವಾಗಿ ಹೇಳತಕ್ಕಂಥ ವಾತಾವರಣ ಸೃಷ್ಟಿಯಾಗಬೇಕು, ಅದನ್ನು ವಿಡಿಯೊಗ್ರಾಫ್ ಮಾಡಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅಧ್ಯಕ್ಷರೆ, ಅದಕ್ಕೋಸ್ಕರ ನಾವು 27 ಜಿಲ್ಲೆಗಳಿಂದಲೂ ಕೂಡ ಕೆಲವರಾದರೂ ಅಧಿಕಾರಿಗಳನ್ನು ಕರೆಯಿಸಿ, ನಮ್ಮ ಮೈಸೂರಿನಲ್ಲಿರುವ ಪೋಲಿಸ್ ಅಕಾಡೆಮಿಯಲ್ಲಿ ಒಂದು ಸೆನ್ಸಿಟೈಸೇಷನ್ ಹಾಗೂ ತರಬೇತಿ ಕಾರ್ಯಕ್ರಮವನ್ನು ಕೂಡಲೇ ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ವಿಮೋಚನಾ ಸಂಘದವರು ಬಂದು ಇಷ್ಟೆಲ್ಲಾ ಹೇಳಿದ ಮೇಲೆ ನಾವು ತೆಗೆದುಕೊಂಡಿರತಕ್ಕಂಥ ನಿರ್ಧಾರವಿದು. ಇದರಿಂದ ಸ್ವಲ್ಪಮಟ್ಟಿಗೆ ಉಪಯೋಗವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಖಾಲಿ ಕಾಗದದ ಮೇಲೆ ಪೋಲೀಸಿನವರು ಹೇಳಿಕೆ ತೆಗೆದುಕೊಳ್ಳತಕ್ಕಂಥಾದ್ದು, ಪೋಲೀಸಿನವರು ಹೇಳಿಕೆ ತೆಗೆದುಕೊಳ್ಳುವಾಗ ಬೇರೆ ಯಾರೂ ಇರಬಾರದು ಎಂದು ಹೇಳತಕ್ಕಂಥಾದ್ದು ಮತ್ತು ಪೋಲೀಸಿನವರಿಗೆ ಇನ್‌ಫ್ಲೂಯೆನ್ಸ್ ಮಾಡತಕ್ಕಂಥಾದ್ದು ಇವುಗಳೆಲ್ಲಾ ಅನೇಕ ಸಂದರ್ಭಗಳಲ್ಲಿ ನಡೆಯತಕ್ಕಂಥಾದ್ದಾಗಿವೆ. ಇದರ ಹಿನ್ನೆಲೆಯಲ್ಲಿ ಎಷ್ಟು ಬಿಗಿ ಮಾಡಲು ಸಾಧ್ಯವೋ ಅಷ್ಟು ಬಿಗಿ ಮಾಡಲು ನಮ್ಮ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ. ಇದು ಸರ್ಕಾರದ ಹಿರಿಮೆ. ಶ್ರೀರಾಮರೆಡ್ಡಿಯವರು ನನಗೆ ಕೆಲವು ಅಂಕಿಅಂಶಗಳನ್ನು ಕೊಟ್ಟರು. ಈ ಅಂಕಿಅಂಶಗಳು ತಪ್ಪು ಎಂದು ಹೇಳಲು ನಾನು ಹೋಗುವುದಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇವೆ. ಅದೇ ರೀತಿ, ಆ ಅಂಕಿಅಂಶಗಳು ಇರುವುದು ಕೂಡ ನಿಜ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೇ, ನಾನು ಏಕೆ ಈ ಅಂಕಿಅಂಶಗಳನ್ನು ಕೊಟ್ಟೆ ಎಂದರೆ, ಮಾನ್ಯ ಸಿಂಧ್ಯಾರವರು ಮೊದಲು ಮಾತನಾಡತಕ್ಕಂಥ ಸಂದರ್ಭದಲ್ಲಿ ವಿಭಾ ಪಾರ್ಥಸಾರಥಿಯವರು ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಬಹಳ ಚೆನ್ನಾಗಿ ಗಮನಿಸಿದ್ದಾರೆ ಎಂದು ಹೇಳಿದರು.

ಅಧ್ಯಕ್ಷರು :— ಇರುವುದರಲ್ಲಿ ಉತ್ತಮ ಎಂದು ಒಂದು ರೆಫರೆನ್ಸ್ ಕೊಟ್ಟರು ಅಷ್ಟೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇಡೀ ರಾಷ್ಟ್ರದಲ್ಲಿ ಇರುವುದರಲ್ಲಿ ಉತ್ತಮವಾಗಿರುವುದು ಎಂದರೆ ತಮಿಳುನಾಡಿನಲ್ಲಿ ಮಾತ್ರ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಶ್ರೀರಾಮರೆಡ್ಡಿಯವರು ವಿರೋಧ ಪಕ್ಷದ ಸದಸ್ಯರಾಗಿ ಆ ರೀತಿಯೇ ಮಾತನಾಡುಬೇಕಾಗುತ್ತದೆ. ನಮ್ಮ ತಪ್ಪುಗಳನ್ನು ಕಂಡುಹಿಡಿಯಲೇ ಬೇಕಾಗುತ್ತದೆ. ಏಕೆಂದರೆ ಅವರು ಇರುವುದೇ ವಿರೋಧ ಪಕ್ಷದಲ್ಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಈ ಭಾರತ ದೇಶದಲ್ಲಿ ಮಹಿಳೆಯರ ಮೇಲೆ ದಬ್ಬಾಳಿಕೆ ಮತ್ತು ದೌರ್ಜನ್ಯಗಳು ಕಡಿಮೆ ಪ್ರಮಾಣದಲ್ಲಿ ನಡೆದಿರತಕ್ಕಂಥ ಒಂದು ರಾಜ್ಯವೆಂದರೆ ಅದು ತಮಿಳುನಾಡು ಮಾತ್ರ. ಬೇಕಾದರೆ ನೀವು ಕೇಂದ್ರ ಸರ್ಕಾರದ ಅಂಕಿಅಂಶಗಳನ್ನು ತೆಗೆದು ನೋಡಿ. ಕರ್ನಾಟಕ ರಾಜ್ಯದ ಮೇಲೆ ಗೂಬೆ ಕೂರಿಸಬೇಕು ಎಂದು ನಾನು ಹೇಳುತ್ತಿಲ್ಲ. ಒಟ್ಟು 6177 ಪ್ರಕರಣಗಳು ನಡೆದಿರತಕ್ಕಂಥಾದ್ದು ಕರ್ನಾಟಕದಲ್ಲಿ, ತಮಿಳುನಾಡಿನಲ್ಲಿ ಅಲ್ಲ. Tamiland is the least State.

ಅಧ್ಯಕ್ಷರು :— ಅಲ್ಲಿ ಈಗ ರಿವರ್ಸ್ ಆಗಿದೆ. ಮೊನ್ನೆ ಆಡಿಟರ್ ಅದನ್ನು ಹೇಳಿದ್ದಾರೆ.

SRI P.G.R. SINDHIA :— I don't want to step into the argument with the Hon. Member. ಪ್ರಾರಂಭದಲ್ಲಿ ಪ್ರಾಸ್ತಾವಿಕವಾಗಿ ಡಿಬೇಟ್‌ನ ಮೇಲೆ ಮಾತನಾಡುವಾಗ ನಾನು ಏನು ಹೇಳಿದೆ ಎಂದರೆ ಇತ್ತೀಚಿಗೆ ಪೋಲೀಸ್ ಇಲಾಖೆಯವರು ಪೋಲೀಸರನ್ನು ಸೆನ್ಸಿಟೈಸೇಷನ್ ಮಾಡುವ ದೃಷ್ಟಿಯಿಂದ, ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಬಂದಂಥ ಸಂದರ್ಭದಲ್ಲಿ ಮಹಿಳೆಯರ ವಿಚಾರದಲ್ಲಿ, ಅದು ಮಹಿಳೆಯರಿಗೆ ಸರ್ಕಾರಿ ನೌಕರಿಯಲ್ಲಿ ಶೇ. 33 ರಷ್ಟು ರಿಸರ್ವೇಷನ್ ಮಾಡತಕ್ಕಂಥ ವಿಚಾರ ಇರಬಹುದು, ಮಂಡಲ್ ಪಂಚಾಯಿತಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪುರಸಭೆಗಳಲ್ಲಿ ಪ್ರಾತಿನಿಧ್ಯವನ್ನು ಕೊಡತಕ್ಕಂಥ ವಿಚಾರ ಇರಬಹುದು, ಇದರಲ್ಲಿ ಬೇರೆ ರಾಜ್ಯಗಳಿಗಿಂತ ಉತ್ತಮವಾಗಿರತಕ್ಕಂಥ ಕೆಲಸವನ್ನು ನಮ್ಮ ರಾಜ್ಯ ಮಾಡಿದೆ ಎನ್ನುವ ಮಾತನ್ನು ವಿಭಾ ಪಾರ್ಥಸಾರಥಿಯವರು ಹೇಳಿದರು ಎಂದು ಹೇಳಿದೆನೇ ಹೊರತು ಆಗುತ್ತಿರುವುದೆಲ್ಲ ಸರಿ ಎಂದು ನಾನು ಹೇಳಲಿಲ್ಲ. ಇವತ್ತು ತಮಗೆ ಎಷ್ಟು ನೋವಾಗಿದೆಯೋ, ಅಷ್ಟೇ ನೋವು ನಮಗೂ ಆಗಿದೆ. ನಾವು ಇಂಥ ಒಂದು ಜವಾಬ್ದಾರಿಯುತ ಸ್ಥಾನದಲ್ಲಿರುವಂಥ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ನಮಗೂ ಸಹೋದರಿಯದ್ದಾರೆ, ನಮ್ಮ ಕುಟುಂಬಗಳಲ್ಲೂ ಸಹ ಸಹೋದರಿಯರು ಇದ್ದಾರೆ, ನಮ್ಮ ಮನಸ್ಸಿನಲ್ಲೂ ನೋವಿದೆ. ಆದ್ದರಿಂದ ಈ ವಿಚಾರದಲ್ಲಿ ವಿರೋಧಪಕ್ಷ ಮತ್ತು ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರುಗಳು ಕೊಟ್ಟಿರತಕ್ಕಂಥ ಸಲಹೆಯನ್ನು ತಮ್ಮ ಮಾರ್ಗದರ್ಶನದಲ್ಲಿ ಸರಿ ಮಾಡಲು, ಈಗಾಗಲೇ ಇರತಕ್ಕಂಥ ಕಾನೂನುಗಳನ್ನು ಆದಷ್ಟೂ ಜಾರಿಗೆ ತರಲು ಕಠಿಣವಾದ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಮಗೆ ಮತ್ತೊಮ್ಮೆ ವಂದಿಸುತ್ತೇನೆ. ಅದೇ ರೀತಿ, ವಿಮೋಚನಾ ಸಂಘಟನೆಯವರೂ ಸಹ ನಮಗೆ ಸಹಕಾರ ಕೊಟ್ಟಿದ್ದಾರೆ, ಅವರಿಗೂ ಸಹ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾವುದೇ ಸಂದರ್ಭದಲ್ಲಿ ಆಗಲಿ, ಈ ಸದನದ ಮೂಲಕ ಮತ್ತು ತಮ್ಮ ಮೂಲಕ ನಾನು ಈ ರಾಜ್ಯದ ಜನತೆಯಲ್ಲಿ ಮನವಿ

ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ, ಈ ರೀತಿ ಮಹಿಳೆಯರ ಪರವಾಗಿರುವಂಥ ಸಂಘಟನೆಗಳು, ವಿವಧ ರಾಜಕೀಯಕ್ಕೆ ಸಂಬಂಧಿಸಿದ ಮಹಿಳಾ ವಿಭಾಗದವರು ಉತ್ತಮವಾಗಿರತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಅವರು ನಮ್ಮ ಗಮನಕ್ಕೆ ಇಂಥ ವಿಚಾರಗಳನ್ನು ತಂದರೆ, ಸರ್ಕಾರಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್:— ಅದರ ಜೊತೆಗೆ ಒಂದು ಮಾತು, ಇದು ದೈಹಿಕವಾಗಿ ಆಗಿರತಕ್ಕಂಥಾದ್ದು. ಕೆಲವು ಸಲ ಮಾನಸಿಕವಾಗಿ ಹಿಂಸೆಯನ್ನು ಕೊಡುತ್ತಾರೆ. ಉದಾಹರಣೆಗೆ, ವಿಧವೆಯಾದಾಗ ಬಳೆಯನ್ನು ಒಡೆಯುವುದು, ಹೀಗೆ ಕ್ರೌರ್ಯವಾಗಿ ನಡೆದುಕೊಳ್ಳುವಂಥಾದ್ದು ಕೂಡ ಕೆಟ್ಟದ್ದು, ಇದು ಸರಿಯಲ್ಲ, ಹೀಗೆ ಮಾಡುವುದರಿಂದ ಶಿಕ್ಷೆಯಾಗುತ್ತದೆ ಎಂದು ಮಾಡಬೇಕು. ಮಾನ್ಯ ಗೃಹಮಂತ್ರಿಗಳು ಇದನ್ನು ಗಮನಿಸಬೇಕು. ಇಂಥಾದ್ದಕ್ಕೆ ಏನಾದರೊಂದು ಭೀತಿಯನ್ನುಂಟು ಮಾಡತಕ್ಕಂಥಾದ್ದು ಆಗಬೇಕು.

ಅಧ್ಯಕ್ಷರು :— ವಾಟಾಳ್ ನಾಗರಾಜ್‌ರವರು ಅದನ್ನು ಹೇಳಿದ್ದಾರೆ. ಈ ವಿಚಾರವನ್ನು ನಮ್ಮ ಗಮನಕ್ಕೆ ಕೆಲವು ದಿವಸಗಳ ಹಿಂದೆ ತಂದಾಗ, ಈ ಅಧಿವೇಶನ ಮುಕ್ತಾಯವಾಗುವುದರೊಳಗಾಗಿ ಇದನ್ನು ಚರ್ಚೆ ಮಾಡಬೇಕು ಎಂದು ನಿರ್ಣಯ ಮಾಡಿದೆವು. ಅಂದು ನಾವು ಪ್ರಾಥಮಿಕ ಸಭೆ ಮಾಡಿದಾಗಲೂ ಮಾನ್ಯ ಗೃಹಮಂತ್ರಿಗಳು ನಮ್ಮ ಜೊತೆಯಲ್ಲಿದ್ದರು. ಅವರೂ ಕೂಡ ಒಪ್ಪಿಗೆ ಕೊಟ್ಟು ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದರು. ಅವರು ತೋರಿಸಿದ ಆಸಕ್ತಿಗಾಗಿ ಅವರನ್ನು ನಾನು ತುಂಬು ಹೃದಯದಿಂದ ಅಭಿನಂದಿಸುತ್ತಿದ್ದೇನೆ. ಅವರು ತೋರಿಸಿರತಕ್ಕಂಥ ಶ್ರದ್ಧೆ ಪ್ರಶಂಸನೀಯವಾದುದು. ಚರ್ಚೆಯಲ್ಲಿ ಪಾಲ್ಗೊಂಡಂಥ ಅನೇಕ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು ನಮ್ಮಲ್ಲಿ ಈಗಾಗಲೇ ಇರತಕ್ಕಂಥ ಸ್ಥಾಯಿ ಸಮಿತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸ್ಥಾಯಿ ಸಮಿತಿಯ ಅವಧಿ ಮೇ 21 ನೇ ತಾರೀಖಿನವರೆಗೆ ಇರುತ್ತದೆ. ಒಂದನೇ ತಾರೀಖಿಗೆ ನಾವು ಈ ಸಭೆಯನ್ನು ಮುಂದೂಡಿದರೆ ಪುನಃ ನಾವು ಜೂನ್ ತಿಂಗಳಲ್ಲಿ ಸೇರುತ್ತೇವೆ. ಆಗ ನಾವು ಸ್ಥಾಯಿ ಸಮಿತಿಗಳನ್ನು ರಚಿಸಬೇಕಾಗುತ್ತದೆ. ಈಗ ಇರತಕ್ಕಂಥ ಸ್ಥಾಯಿ ಸಮಿತಿಯ ಮುಂದೆ ಈಗಾಗಲೇ ಸ್ವಲ್ಪ ಕೆಲಸವಿರುವುದರಿಂದ ಈ ವಿಷಯಕ್ಕೆ ಸೀಮಿತವಾಗಿ ವಿಶೇಷ ಆಸಕ್ತಿ ಮತ್ತು ಶ್ರದ್ಧೆ ಇರತಕ್ಕಂಥವರನ್ನು ಆಯ್ಕೆ ಮಾಡಿಕೊಂಡು, ಮೇಲ್ಮನೆಯ ಸಭಾಪತಿಗಳೊಂದಿಗೆ ಕೂಡ ಚರ್ಚೆ ಮಾಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಜಂಟಿ ಸದನ ಸಮಿತಿಯನ್ನು ಮಾಡತಕ್ಕಂಥ ನಿರ್ಣಯಕ್ಕೆ ನಾನು ಬಂದಿದ್ದೇನೆ. ಅವರಿಗೆ ಎಂಟು ವಾರಗಳ ಕಾಲ ಮಾತ್ರ ಗಡುವು ಇರುತ್ತದೆ. ಯಾವ ಕಾರಣಕ್ಕೂ ಕೂಡ ಅವರು ಅವಧಿ ವಿಸ್ತರಣೆ ಕೇಳಲು ಅವಕಾಶವಿರುವುದಿಲ್ಲ. ಅವರು ಈ ಎಂಟು ವಾರಗಳ ಅವಧಿಯೊಳಗಾಗಿ ಶ್ರದ್ಧೆಯಿಂದ ಎಲ್ಲಾ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಸಾಮಾಜಿಕವಾಗಿ ಇದಕ್ಕೆ ತರಬೇಕಾಗಿರತಕ್ಕಂಥ ಕೆಲವು ಬದಲಾವಣೆಗಳು ನಾವು ಶಾಸನಬದ್ಧವಾಗಿ ಮಾಡತಕ್ಕಂಥ ಪ್ರಯತ್ನಗಳು ಕಾನೂನಿನ ಚೌಕಟ್ಟಿನಲ್ಲಿ ಮಾಡಬೇಕಾದಂಥ ಕೆಲವು ಬದಲಾವಣೆಗಳು, ಈ ಬಗ್ಗೆ ಆ ಸಮಿತಿ ಯಾವ ಶಿಫಾರಸ್ಸುಗಳನ್ನು ಮಾಡುತ್ತದೆ, ಅದನ್ನು ಸರ್ಕಾರದವರು ಅನುಷ್ಠಾನಗೊಳಿಸುತ್ತಾರೆ ಎನ್ನತಕ್ಕಂಥ ವಿಶ್ವಾಸವನ್ನು ನಾನು

ಇಟ್ಟುಕೊಂಡಿದ್ದೇನೆ. ಈ ಬಗ್ಗೆ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಸದನ ಸಮಿತಿಯನ್ನು ನಾನು ಬಹುತೇಕ ಒಂದನೇ ತಾರೀಖಿನ ದಿವಸ ಅನೌನ್ಸ್ ಮಾಡುತ್ತೇನೆ. ಈ ಚರ್ಚೆ ಇಲ್ಲಿಗೆ ಮುಕ್ತಾಯವಾಗಿದೆ. ನಾವು ಊಟ ಮುಗಿಸಿಕೊಂಡು ಬಂದು ಪುನಃ ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈ ಸಮಿತಿಗಾಗಿ ನಾನು ಮೊದಲಿಗೆ ನಿಮಗೆ ಒಂದು ಕಂಪ್ಲೇಂಟ್‌ನ್ನು ಕೊಡುತ್ತಿದ್ದೇನೆ. ಆ ಸಮಿತಿಗೆ ಇದನ್ನು ಒಪ್ಪಿಸಬೇಕು. ಇದು ಆರ್. ರಾಮಕೃಷ್ಣಯ್ಯ, ಬಿನ್ ರಂಗಯ್ಯ, ಕುಲುವೇನ ಹಳ್ಳಿ, ಗ್ರಾಮ ಪಂಚಾಯಿತಿ, ನೆಲಮಂಗಲ, ಬೆಂಗಳೂರು, ಇವರ ಅರ್ಜಿ. ಇದನ್ನು ತಮಗೆ ಕೊಡುತ್ತಿದ್ದೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡಲಾಗಿದೆ. ಪುನಃ 3.30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.30 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 3.50ಕ್ಕೆ ಪ್ರಾರಂಭವಾಯಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(2) ಬಯಲುಸೀಮೆ ಮಂಡಳಿಗೆ ಹೆಚ್ಚು ಹಣ ನೀಡುವ ಬಗ್ಗೆ

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಮೂರು ಪ್ರಾದೇಶಿಕ ಮಂಡಳಿಗಳಿವೆ. ಅದರಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ, ಈ ಎರಡು ಯೋಜನಾ ಇಲಾಖೆಗಳಿಗೆ ಸೇರಿದ ಮಂಡಳಿಗಳಿವೆ. ನಮ್ಮದು ಬಯಲುಸೀಮೆ ಅಭಿವೃದ್ಧಿ ಮಂಡಳಿ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸುಮಾರು 72 ರಿಂದ 75 ಶಾಸಕರು ಇರುವ ಕ್ಷೇತ್ರಗಳು ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಈ ಮಂಡಳಿ ರಚನೆ ಮಾಡಿದಿರಿ. ಆ ಮಂಡಳಿಯ ಆಡಳಿತ, ಹಣಕಾಸಿನ ವ್ಯವಸ್ಥೆ ಮತ್ತು ಇದರಿಂದ ನಮಗಾಗಿರುವ ಅನುಕೂಲಕಗಳ ಬಗ್ಗೆ ಚರ್ಚೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಂಡಿದ್ದರ ಮೇರೆಗೆ ನನಗೆ ತಾವು ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುತ್ತೀರಿ ಇದಕ್ಕಾಗಿ ತಮಗೆ ಮೊಟ್ಟಮೊದಲನೆಯದಾಗಿ ವಂದನೆಯನ್ನು ಅರ್ಪಿಸುತ್ತೇನೆ. ಈ ಮಂಡಳಿ ಕೇವಲ ಹೆಸರಿಗೆ ಮಾತ್ರ ಮಂಡಳಿಯಾಗಿದೆ. ಬಯಲು ಸೀಮೆಯಲ್ಲಿರುವ ಜನ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸುಮಾರು 70ರಷ್ಟು ವಂಚಿತರಾಗುತ್ತಿದ್ದಾರೆ. ನಮಗೆ ನೀರಾವರಿ

(ಈ ಹಂತದಲ್ಲಿ (ಶ್ರೀಮತಿ ಡಿ.ಜಿ. ಹೇಮಾವತಿ) ಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಯೋಜನೆಗಳಿಲ್ಲ, ನಮಗೆ ಅರಣ್ಯ ಪ್ರದೇಶಗಳಿಲ್ಲ, ನಮಗೆ ಯಾವುದೇ ಗಡಿ ಪ್ರದೇಶದ ಅಭಿವೃದ್ಧಿಯಲ್ಲಿ ಹಣವಿಲ್ಲ. ಟ್ರೈಬಲ್ ಸಬ್-ಪ್ಲಾನ್ ಸ್ಕೀಮ್‌ನಲ್ಲಿ ನಮಗೆ ಹಣ ಬರುತ್ತಿಲ್ಲ.